೯. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ:

+ ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಬಂದ ನಂತರ ರಾಜ್ಯಪಾಲರಿಂದ ಎರಡನೇ ಭಾಷಣ ಮಾಡಿಸಿದ್ದಾರೆ. ಮಾನ್ಯ ರಾಜ್ಯಪಾಲರು ಕನ್ನಡದಲ್ಲಿ ಮಾತನಾಡಿದ್ದಕ್ಕೋಸ್ಕರ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮತ್ತೆ ಅಂತಹ ಕನ್ನಡದ ಅಭಿಮಾನಿಯಾಗಿರತಕ್ಕಂಥ, ಕನ್ನಡದವರು ಅಲ್ಲದೇ ಇರತಕ್ಕಂಥ, ಇವರನ್ನು ನೇಮಕ ಮಾಡಿರತಕ್ಕಂಥ ಕೇಂದ್ರ ಸರ್ಕಾರ ಹಾಗೂ ರಾಷ್ಟ್ರಪತಿಗಳಿಗೆ ತಮ್ಮ ಮೂಲಕ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ ಭಾಷಣ ಆಡಳಿತ ಪಕ್ಷಕ್ಕೆ ಒಂದು ಒಳ್ಳೆಯ ಅವಕಾಶ, ನಾವು ಏನು ಮಾಡುತ್ತೇವೆ, ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ, ಇದನ್ನು ಸಾರ್ವಜನಿಕರಿಗೆ, ನಮ್ಮ ಮತದಾರರಿಗೆ ರಾಜ್ಯದ ಜನರಿಗೆ ತಿಳಿಸುವಂಥ ಒಂದು ಸದವಕಾಶವಾಗಿದೆ. ನಮಗೂ ಕೂಡ ಈ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಸರ್ಕಾರದ ವಿಫಲತೆಗಳು ಏನು? ಏನೇನು ಕೊರತೆಗಳು ಇವೆ ಎಂದು ಎತ್ತಿ ಹೇಳುವುದಕ್ಕೆ ಒಂದು ಒಳ್ಳೆಯ ಅವಕಾಶವಿದೆ. ಈ ಎಲ್ಲ ಚರ್ಚೆಗಳ ಪರಿಣಾಮ ಒಂದು ಒಳ್ಳೆಯ ವ್ಯವಸ್ಥೆ ಮತ್ತು ಆಡಳಿತ ಮುಂದಿನ ದಿನಗಳಲ್ಲಿ ಬರಬೇಕು ರಾಜ್ಯಪಾಲರ ಈ ಭಾಷಣ ಮತ್ತು ಈ ಚರ್ಚೆಯ ಒಟ್ಟಾರೆ ಅಂಶವೇ ಇದು ಆಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಇದು ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ನೀವು ಏನು ಬೇಕಾದರೂ ಹೇಳಿ, ನಾವು ಹೀಗೇ ಇರುವುದು, ಮತ್ತು ರಾಜ್ಯಪಾಲರ ಭಾಷಣದಲ್ಲಿ ನಾವು ಏನೆಲ್ಲಾ ಆಶ್ವಾಸನೆಯನ್ನು ಕೊಡಬಹುದು, ಆದರೆ ನಡವಳಿಕೆಯಲ್ಲಿ ಅದನ್ನು ಮಾಡುವಂಥ ಅವಶ್ಯಕತೆ ಇಲ್ಲ ಎನ್ನುವಂಥದ್ದನ್ನು ಮಾಡುವಂಥದ್ದು ಆಡಳಿತ ಪಕ್ಷದ್ದು. ನಾವು ಹೇಳತಕ್ಕಂಥ ವಿಷಯಗಳನ್ನು ಮಂತ್ರಿಗಳಾಗಲೀ ಅಥವಾ ಅವರ ಅಧಿಕಾರಿಗಳಾಗಲಿ ನೋಟ್ ಮಾಡಿಕೊಳ್ಳುತ್ತಿಲ್ಲ. ಏಕೆಂದರೆ ನಾವು ಬೆಳಿಗ್ಗೆಯಿಂದ ನೋಡಿದ್ದೇವೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಕೂಡ ಚರ್ಚೆ ನಡೆದಿದೆ. ಅವರಿಗೆ ಇಲ್ಲಿ ಬರುವುದಕ್ಕೆ ಮನಸ್ಸಿಲ್ಲ, ಬಂದರು ಕೂಡ ಹೇಗೋ ನಡೆದು ಹೋಗಲಿ, ಯಾವ ಸದಸ್ಯರು ಏನು ಬೇಕಾದರೂ ಮಾತನಾಡಲಿ ನಾವು ಮಾತ್ರ ಹೀಗೇಯೇ ಇರುತ್ತೇವೆ ಎನ್ನುವ ಧೋರಣೆ ಮಂತ್ರಿಗಳಲ್ಲಿ ಇದೆ. ಇನ್ನು ಅಧಿಕಾರಿಗಳು ಕೂಡ ಅವರ ಗ್ಯಾಲರಿಯಲ್ಲಿ ಬಂದು ಕೂಡುವುದಿಲ್ಲ. ನಾವು ಎಂಎಸ್ ಬಿಲ್ಡಿಂಗ್‌ಗೆ ಹೋಗಿ ನಿಮ್ಮ ಅಧಿಕಾರಿಗಳು ಎಲ್ಲಿ ಎಂದು ಕೇಳಿದರೆ, ಅಧಿವೇಶನ ನಡೆಯುವಾಗ ಸಾಹೇಬರು ಛೇಂಬರದಲ್ಲಿ ಎಲ್ಲಿ ಇರುತ್ತಾರೆ? ಅವರೆಲ್ಲ ವಿಧಾನಸೌಧದಲ್ಲಿ ಇದ್ದಾರೆಂದು ಹೇಳುತ್ತಾರೆ. ಆ ಅಧಿಕಾರಿಗಳು ವಿಧಾನಸೌಧದ ಗ್ಯಾಲರಿಯಲ್ಲಿಯೂ ಇಲ್ಲ, ಅಲ್ಲಿ ಎಂಎಸ್ ಬಿಲ್ಡಿಂಗ್‌ನಲ್ಲಿಯೂ ಇಲ್ಲ, ಅವರು ಎಲ್ಲಿ ಹೋಗಿದ್ದಾರೆಂದು ಅವರಿಗೂ ಗೊತ್ತಿಲ್ಲ ಮಂತ್ರಿಗಳು ಎಲ್ಲಿ ಹೋಗಿದ್ದಾರೆಂದು ನಿಮಗೂ ಹಾಗೂ ನಮಗೂ ಗೊತ್ತಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಇವತ್ತಿನ ರಾಜ್ಯಪಾಲರ ಭಾಷಣ ಹಳಸಲಾಗುತ್ತಾ ಬಂದಿದೆ. ಬಜೆಟ್ ಮಂಡನೆಯಾಯಿತು ಅದರ ಮೇಲೆ

ಚರ್ಚೆ ಕೂಡ ಆಯಿತು ಒಟ್ಟಾರೆ ಗೊಂದಲದಲ್ಲಿ ಸದನವನ್ನು ಸಂಪ್ರದಾಯದಂತೆ ನಡೆಸಿಕೊಂಡು ಹೋಗಬೇಕೆಂದು ಹೋಗುತ್ತಿದ್ದಾರೆ. ಅದು ಹಾಗಾಗಬಾರದು ನಾವು ಏನು ಹೇಳುತ್ತೇವೆ ಅದನ್ನು ಸ್ವೀಕಾರ ಮಾಡಬೇಕು. ಆಡಳಿತದಲ್ಲಿ ನ್ಯೂನತೆಗಳು ಇದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಬೇಕು. ಜನರಿಗೆ ಒಂದು ಒಳ್ಳೆಯ ಆಡಳಿತವನ್ನು ಕೊಡಬೇಕು ಎನ್ನುವುದು ನಮ್ಮ ಇಚ್ಛೆಯಾಗಿದೆ. ರಾಜ್ಯಪಾಲರ ಕಡೆಯಿಂದ ಆರು ತಿಂಗಳುಗಳಲ್ಲಿ ಎರಡು ಭಾಷಣಗಳನ್ನು ಮಾಡಿಸಿದ್ದಾರೆ. ಎರಡು ಭಾಷಣದಲ್ಲಿ ಒಳ್ಳೆಯ ವ್ಯಾಖ್ಯಾನಗಳು ಹಾಗೂ ಅದರ ಸೌಂದರ್ಯ ಬಹಳ ಚೆನ್ನಾಗಿ ಇದೆ ಅದರಲ್ಲಿ ಏನು ತೊಂದರೆ ಇರುವುದಿಲ್ಲ. ಆರು ತಿಂಗಳಲ್ಲಿ ಇವರು ಮಾಡಿಸಿರತಕ್ಕಂಥ ಭಾಷಣಕ್ಕೂ ಕೊಟ್ಟಿರತಕ್ಕಂಥ ಆಶ್ವಾಸನೆಗಳಿಗೂ ಅದು ನಡೆದುಕೊಂಡಿರತಕ್ಕಂಥ ನೀತಿಗೂ ಅಜಗಜಾಂತರವಾದ ವ್ಯತ್ಯಾಸ ಇದೆ. ಇದನ್ನು ನಾವು ನೋಡಿದಾಗ ಇದು ನುಡಿದಂತೆ ನಡೆಯದೆ ಇರುವಂತಹ ಒಂದು ಸರ್ಕಾರ, ಎನ್ನುವುದು ಸಾಮಾನ್ಯ ಜನರಿಗೆ ಆರು ತಿಂಗಳಲ್ಲಿಯೇ ಮನವರಿಕೆಯಾಗಿರುತ್ತದೆ. ಇದು ಈ ಸರ್ಕಾರದ ಒಂದು ದಿಕ್ಸೂಚಿ ಎಂದು ನನಗನಿಸುತ್ತದೆ. ಉದಾಹರಣೆಗೆ, ಇಡೀ ಸರ್ಕಾರದ ಒಂದು ಸಫಲತೆ ಒಂದು ಒಳ್ಳೆಯ ಹೆಸರನ್ನು ತಕ್ಷಣದಲ್ಲಿಯೇ ಮಾಡಬಹುದಾದ ಒಂದು ಅವಕಾಶ ಇತ್ತು. ವಿದ್ಯುತ್ ಇಲಾಖೆಯನ್ನು ಏನಾದರೂ ಆರು ತಿಂಗಳಲ್ಲಿ ಪೂರ್ಣಮಾಡಬೇಕು ಎಂದರೆ, ಅದನ್ನು ನಮಗೆ ಹೇಳುವುದಕ್ಕಾಗುವುದಿಲ್ಲ, ಆದರೆ ಇದನ್ನು ಸಾಮಾನ್ಯ ಮಟ್ಟಿಗಾದರೂ ಸರಿಪಡಿಸಬಹುದಾಗಿತ್ತು, ಅಧಿಕಾರಕ್ಕೆ ಬಂದ ತಕ್ಷಣವೇ ವಿದ್ಯುಚ್ಛಕ್ತಿ ಉತ್ಪಾದನೆ ಜಾಸ್ತಿಯಾಗಬೇಕೆಂದರೆ ಅದನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಪ್ರಾಜೆಕ್ಟ್ ತಯಾರು ಮಾಡಬೇಕಾಗುತ್ತದೆ. ಆ ಇಲಾಖೆಯನ್ನಾದರೂ ಸರಿ ಮಾಡಬಹುದಾಗಿತ್ತು, ಹಿಂದಿನ ಸರ್ಕಾರ ಇದ್ದಾಗ ಕೆಇಬಿ ಎಂಬ ಹೆಸರನ್ನು ಕೆಪಿಟಿಸಿಎಲ್ ಎಂದು ಮಾಡಿಯಾಯಿತು, ನಾವು ಇದು ಬಹಳ ವ್ಯತ್ಯಾಸವಾಗುತ್ತದೆ ಎಂದು ತಿಳಿದುಕೊಂಡಿದ್ದೆವು. ಅಲ್ಲಿ ನೋಡಿದರೆ ಏನು ವ್ಯತ್ಯಾಸವಾಗಲಿಲ್ಲ. ಅದರಲ್ಲಿ ಬೋರ್ಡ್ ಹಾಗೂ ಹೆಸರುಗಳಲ್ಲಿ, ಶಬ್ದಗಳಲ್ಲಿ ಮಾತ್ರ ವ್ಯತ್ಯಾಸವಾಯಿತು. ಆ ಬೋರ್ಡ್ ಬರೆಯಲು ಮಾತ್ರ ಹಣ ಖರ್ಚಾಯಿತು,ಕೆಇಬಿ ತೆಗೆದು ಕೆಪಿಟಿಸಿಎಲ್ ಎಂದು ಬರೆಯಲು ಪೇಯಿಂಟಿಗೆ ಖರ್ಚು ಮಾಡಿದರು. ಆ ಇಲಾಖೆಯ ನಡವಳಿಕೆಯಲ್ಲಿ ಯಾವುದೇ ರೀತಿಯ ಪರಿವರ್ತನೆಯಾಗುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ಹಳ್ಳಿಗಳಿಗೆ ಕೊಡತಕ್ಕಂಥ ವಿದ್ಯುತ್ ಸಂಪರ್ಕವಾಗಲಿ, ಉತ್ಪಾದನೆಯಲ್ಲಿ ಹಾಗೂ ದುರಸ್ತಿ ಕಾರ್ಯದಲ್ಲಾಗಲಿ ವ್ಯತ್ಯಾಸಗಳು ಇದುವರೆಗೆ ಕಂಡು ಬರಲಿಲ್ಲ. ಅವರು ಕೊಡತಕ್ಕಂಥ ಉತ್ತರಗಳಲ್ಲಾಗಲಿ, ಅವರಲ್ಲಿ ಯಾವರೀತಿಯಾಗಿ ಜಾಗೃತಿ ನಿರ್ಮಾಣವಾಗಲಿಲ್ಲ. ನಮಗೆ ಹಳ್ಳಿಯವರು ಬಂದು ಹೇಳುತ್ತಾರೆ. ವಿದ್ಯುತ್ ಬಿಲ್ ಕಟ್ಟುವುದಕ್ಕೆ ಹೋದರೆ ಒಂದು ದಿವಸವಾಗುತ್ತದೆ. ಕ್ಯೂನಲ್ಲಿ ನಿಲ್ಲಬೇಕು, ಮಾನ್ಯ ಮುಖ್ಯಮಂತ್ರಿಗಳು ಕಂಪ್ಯೂಟರ್ ಮೂಲಕ ಮಾಡುತ್ತೇವೆಂದು ಹೇಳುತ್ತಾರೆ. ವಿದ್ಯುತ್ ಬಳಸಿದ್ದನ್ನು ಅದಕ್ಕೆ ತಗಲುವ ಹಣ ಕೊಡುತ್ತೇವೆಂದು ಹೇಳಿದರೆ, ಅರ್ಧ ಅಥವಾ

ಒಂದು ದಿವಸ ಹೋಗಬೇಕೆಂದರೆ ಇದರಿಂದ ಪರಿವರ್ತನೆ ಆಗಬೇಕೆಂದರೆ ಹೇಗಾಗುತ್ತದೆ. ಕೆಪಿಟಿಸಿಎಲ್‌ಗೆ ಹೋಗಿ ಇವತ್ತು ಕೇಳಿದರೆ ವೈರ್ ಇಲ್ಲ ಟ್ರಾನ್ಸ್‌ಫಾರ್ಮ್‌ಗಳು ಇಲ್ಲ ಅದನ್ನು ಕೂಡಿಸುವ ಎಂಗಲ್‌ಗಳು ಇಲ್ಲ. ಮೀಟರ್‌ಗಳು ಇಲ್ಲ ನಮ್ಮ ತಾಲ್ಲೂಕಿನಲ್ಲಿ ಸುಮಾರು 800ಮನೆಗಳವರು ವಿದ್ಯುತ್‌ಗಾಗಿ ಕಾಯುತ್ತಿದ್ದಾರೆ. ಮೀಟರ್ ಇಲ್ಲದ್ದಕ್ಕೋಸ್ಕರ ಸಂಪರ್ಕವನ್ನು ಕೊಡಲಿಲ್ಲ. 800 ಮನೆಯವರು ಕಳೆದ ಎರಡು ವರ್ಷಗಳಿಂದ ವಿದ್ಯುತ್ ಸಂಪರ್ಕಕ್ಕಾಗಿ ಕಾಯುತ್ತಿದ್ದಾರೆ ಮೀಟರ್ ಒದಗಿಸಲು ನಮ್ಮ ಬೋರ್ಡಿಗೆ ಆಗಲಿಲ್ಲ. ಇವತ್ತು ಅದರ ಅದಕ್ಷತೆ ಏನೆಂದರೆ, ಬೇಡವಾದ ವಸ್ತುಗಳನ್ನು ಖರೀದಿ ಮಾಡಿಕೊಂಡು ಕೋಟಿಗಟ್ಟಲೆ ಹಣದ್ದು ಹಾಕಿಕೊಂಡಿದ್ದಾರೆ. ಬೇಕಾದ ವಸ್ತುಗಳನ್ನು ಖರೀದಿ ಮಾಡಲು ಅವರ ಹತ್ತಿರ ಹಣ ಇರುವುದಿಲ್ಲ. ಹಣವನ್ನು ತೆಗೆದುಕೊಂಡಿದ್ದಾರೆ, ಅಡ್ವಾನ್ಸ್ ಆಗಿ ಯಾರು ವಾಲೆಂಟರಿಯಿಂದ ಹಣ ಕಟ್ಟುತ್ತೀರಿ ಅವರಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ, ಎರಡು ಮೂರು ತಿಂಗಳಾಯಿತು ಇವರಿಂದ ವಿದ್ಯುತ್‌ನ್ನು ಒದಗಿಸುವುದಾಗಲಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿಯೇ ಇದ್ದಾರೆ, ಆರ್‌ಇಸಿ ಸ್ಕೀಂ ನಲ್ಲಿ 9 ಕೋಟಿ ರೂಪಾಯಿಗಳು ಬರುತ್ತಿದೆ. ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಲ್ಲಿ ಸಾಗರ, ತೀರ್ಥಹಳ್ಳಿ, ಹೊಸನಗರ ಈ ಮೂರು ತಾಲ್ಲೂಕಿಗೆ ಇಷ್ಟು ಹಣ ಬಂದಿರುತ್ತದೆ. ಟೆಂಡರ್ ಕರೆದು ಒಂದೂವರೆ ವರ್ಷವಾಯಿತು. ವೈರ್ ಹಾಗೂ ಕಂಬವನ್ನು ಅವರೇ ಹಾಕಿದ್ದಾರೆ, ಇವತ್ತಿನವರೆಗೂ ಒಂದು ಪೈಸೆಯನ್ನು ಖರ್ಚು ಮಾಡಿರುವುದಿಲ್ಲ. ನನ್ನ ತಾಲ್ಲೂಕಿನ 218 ಹಳ್ಳಿಗಳು, ಮಾನ್ಯ ಕಾಗೋಡು ತಿಮ್ಮಪ್ಪನವರ ತಾಲ್ಲೂಕಿನಲ್ಲಿ 250 ಹಳ್ಳಿಗಳು, ಉದಾಹರಣೆಯನ್ನು ಹೇಳುತ್ತಿದ್ದೇನೆ, ಇಡೀ ರಾಜ್ಯದಲ್ಲಿ ಇದೆ ದುರವಸ್ಥೆಯಾಗಿದೆ. ಯಾರಿಗೂ ಕೂಡ ಇದನ್ನು ಮಾಡುವುದಕ್ಕೆ ಮನಸ್ಸಿಲ್ಲ. ಅವರು ಸಾವಿರಾರು ಮಾತುಗಳನ್ನು ಹೇಳುತ್ತಾರೆ, ನಾವು ಹೋಗಿ ಅವರನ್ನು ಕೇಳಿದರೆ ಅದಕ್ಕೆ ಕಾರಣವನ್ನು ಕೊಡುತ್ತಾರೆ. ಮಳೆಗಾಲ ಪ್ರಾರಂಭವಾಯಿತು ನಮ್ಮ ಹಳ್ಳಿಗಳಿಗೆ ಇವತ್ತು ಕಂಬಗಳನ್ನು ತೆಗೆದುಕೊಂಡು ಹೋಗುವುದಕ್ಕಾಗುವುದಿಲ್ಲ. ಇದರಿಂದಾಗಿ ಇನ್ನೂ 6 ತಿಂಗಳು ಮುಂದಕ್ಕೆ ಹೋಗುತ್ತದೆ, ಇದು ಯಾವ ದರಿದ್ರ ವ್ಯವಸ್ಥೆ. ಸಾಮಾನ್ಯ ಜನರಿಗೆ ಸೌಲಭ್ಯಗಳನ್ನು ಒದಗಿಸಬೇಕಾದ ಒಂದು ಖಾತೆ, ಇಂತಹ ಪರಿಸ್ಥಿತಿಯಿಂದ ಕೆಲಸ ಮಾಡುವುದಾದರೆ ಹೀಗಾದರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಹೇಗೆ ಬರುತ್ತದೆ? ಅಲ್ಲಿ ಕೂರಿಸುವ ಅಧಿಕಾರಿಗಳು ಅಂತಹವರು, ನಾನು ಅನೇಕ ಸಲ ಇಂಧನ ಖಾತೆ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ.

೪.೨೦ ಪಿಎಂ

ಒಳ್ಳೆಯ ಅಧಿಕಾರಿಗಳನ್ನು, ಒಬ್ಬ ಒಳ್ಳೆಯ ಛೇರ್ಮನ್ ಹಾಕಿ, ಸ್ವಲ್ಪ ಅವರಿಗೆ ಗಮನವಿರಬೇಕಾಗುತ್ತದೆ. ಎಲ್ಲೆಲ್ಲಿ ಏನೇನು ಆಗುತ್ತಿದೆ ಎಂಬುದನ್ನು ಅವರು ನೋಡಬೇಕಾಗುತ್ತದೆ. ಅವರು ಏನೂ ಮಾಡಲಿಲ್ಲ, ವಿದ್ಯುತ್‌ನ ಟ್ರಾನ್ಸ್‌ಮಿಷನ್

ಲಾಸ್, ಇದನ್ನು ತಮಿಳುನಾಡು ಹಾಗೂ ಆಂಧ್ರಪ್ರದೇಶವು ಸಹ ಸರಿಮಾಡಿಕೊಂಡಿದೆ, ನಮ್ಮ ರಾಜ್ಯದಲ್ಲಿ ಲಾಸ್‌ನ್ನು ಸರಿಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಒಂದು ಕಡೆ ವಿದ್ಯುತ್ ಉತ್ಪಾದನೆಯನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಇನ್ನೊಂದು ಕಡೆ ಇರತಕ್ಕಂತಹ ವಿದ್ಯುತ್ ಉತ್ಪಾದನೆಯಿಂದ ಆಗುವ ಟ್ರಾನ್ಸ್‌ಮಿಷನ್ ಲಾಸ್‌ನ್ನು ಸರಿಪಡಿಸಲು ಆಗಲಿಲ್ಲ, ಇದರಲ್ಲಿ ಅನೇಕ ವೈಫಲ್ಯತೆಗಳು ಇದೆ. ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಟ್ಟಿದ್ದೇವೆ ಹಾಗಾಗಿ ನಮಗೆ ಕೋಟಿಗಟ್ಟಲೆ ಹಣ ನಷ್ಟವಾಗಿದೆ. ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ವಿದ್ಯುತ್‌ನ್ನು ಕದಿಯುತ್ತಿದ್ದಾರೆ, ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ, ಬಾಕಿ ವಸೂಲಾತಿಯನ್ನು ಏನು ಮಾಡಿರುವುದಿಲ್ಲ, ಆ ಕಾರ್ಖಾನೆಯ ಮಾಲೀಕರ ಪ್ರಭುತ್ವ ನಿಮ್ಮ ಸರ್ಕಾರದ ಮೇಲೆ ಇದೆ. ನೀವು ಅವರಿಂದ ವಸೂಲಿ ಮಾಡಲಿಲ್ಲ. ನೀವು ಮಾಡಿರತಕ್ಕಂತಹ ನಷ್ಟಕ್ಕೆ ಪ್ರತಿಯೊಂದು ವರ್ಷದಲ್ಲಿ ಎರಡು ಸಾರಿ ರೇಟ್‌ನ್ನು ಜಾಸ್ತಿ ಮಾಡಿದ್ದೀರಿ. ಅವರು ಶಿಫಾರಸ್ಸು ಮಾಡುವುದು, ನೀವು ರೇಟ್ ಜಾಸ್ತಿ ಮಾಡುವುದಕ್ಕೆ ತಯಾರಿ ಮಾಡುವುದು, ಅದು ಹಿಂದಿನ ಸರ್ಕಾರ ಈಗಿನ ಸರ್ಕಾರವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಅಧಿಕಾರಿಗಳ ವೈಫಲ್ಯತೆ ಏನು ಇದೆ ಆ ಒಂದು ಇಲಾಖೆ ಏನು ಕೆಲಸವನ್ನು ಮಾಡುತ್ತಿದೆ, ಇದರ ಬಗ್ಗೆ ಗಮನ ಕೊಡುವಂತಹ ವ್ಯವಧಾನ ನಿಮ್ಮ ಸಚಿವರಿಗೂ ಇಲ್ಲ, ಅಲ್ಲಿ ಮೇಲ್ಮಟ್ಟದಲ್ಲಿ ಕುಳಿತಿರುವಂತಹ ಅಧಿಕಾರಿಗಳಿಗೂ ಸಹ ಇಲ್ಲ. ಇದು ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರನ್ನು ತರುವ ಸಂಗತಿಯಲ್ಲ. ಇವತ್ತಿಗೂ ಕೂಡ ಈ ಇಲಾಖೆಯನ್ನು ರಿಪೇರಿ ಮಾಡುವುದಕ್ಕೆ ಆಗಲಿಲ್ಲ. ಇವತ್ತು ನೀವು ರೈತರ ಬಗ್ಗೆ ಬಡವರ ಬಗ್ಗೆ ಬಹಳ ಹೇಳುತ್ತಿದ್ದೀರಿ, ಅನೇಕ ಸದಸ್ಯರುಗಳು ಇದರ ಬಗ್ಗೆ ಮಾತನಾಡಿದ್ದಾರೆ ನಾನು ಎಲ್ಲವನ್ನು ಕೂಡ ಚರ್ವಿತಚರ್ವಣ ಮಾಡುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಒಂದೇ ಒಂದು ಅಂಶವೇನೆಂದರೆ, ನೀವು ಅಧಿಕಾರಕ್ಕೆ ಬಂದು ಆರು ತಿಂಗಳಲ್ಲಿ, ಹಿಂದಿನ ಸರ್ಕಾರ ನಿಗದಿ ಮಾಡಿರತಕ್ಕಂಥ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿರತಕ್ಕಂತಹ ಸುಮಾರು ಆರು ಕೋಟಿ ರೂಪಾಯಿಗಳ ಔಷಧಿ ಪಶುಸಂಗೋಪನಾ ಇಲಾಖೆಯಲ್ಲಿ ಖರೀದಿ ಮಾಡುವುದಕ್ಕೆ ನಿಮಗೆ ಆಗಲಿಲ್ಲ ಎಂದು ಹೇಳಿದರೆ, ತಾವು ಇನ್ನೇನು ಮಾಡುತ್ತೀರಿ? ಅಲ್ಲಿ ಒಬ್ಬರು ಕಾರ್ಯದರ್ಶಿ ಇದ್ದಾರೆ, ಆ ಕಾರ್ಯದರ್ಶಿಗಳು ಫೈಲ್‌ನ್ನು ಓಡಾಡಿಸುತ್ತಾರೆಯೇ ವಿನಃ ಔಷಧಿಗಳನ್ನು ಖರೀದಿಯೇ ಮಾಡಲಿಲ್ಲವೆಂದು ಹೇಳುತ್ತಾರೆ. ಔಷಧಿಯನ್ನು ಖರೀದಿ ಮಾಡುವುದಕ್ಕೆ ಅವಕಾಶವನ್ನು ಕೊಡಲೇ ಇಲ್ಲ. ಯಾರು ಆ ಕಾರ್ಯದರ್ಶಿ? ಕಾರ್ಯದರ್ಶಿಗಳಿಗೋಸ್ಕರ ಸರ್ಕಾರವಿರಬೇಕಾ? ಅವರು ಕೆಲಸವನ್ನು ಮಾಡದಿದ್ದರೆ ಅವರನ್ನು ಬದಲಾವಣೆ ಮಾಡುವುದಕ್ಕೆ ನಿಮಗೆ ಆಗುವುದಿಲ್ಲವೇ? ಈ ಐಎಎಸ್ ಅಧಿ ಕಾರಿಗಳು, ಕಾರ್ಯದರ್ಶಿಗಳು ನೀವು ಕೇಳುತ್ತಿರುವಂಥದ್ದು, ಅವರು ಏನು ಬೇಕಾದರೂ ಮಾಡಬಹುದು, ಖರೀದಿ ಮಾಡುವ ಬಗ್ಗೆ ಅವರಿಗೆ ಜವಾಬ್ದಾರಿ ಇಲ್ಲವೇ? ಆಕೌಂಟಬಿಲಿಟಿ ಇಲ್ಲವೆಂದರೆ ಇವರ ಬಗ್ಗೆ ನಿಮ್ಮ ಸರ್ಕಾರವು ಏನು

ಮಾಡುತ್ತದೆ? ಅವರುಗಳು ಮಂತ್ರಿಗಳ ಮಾತನ್ನು ಕೇಳುವುದಿಲ್ಲ, ಅವರಿಗೆ ಜನರ ಬಗ್ಗೆ ಜವಾಬ್ದಾರಿ ಇಲ್ಲವೇ? ಆರು ತಿಂಗಳಲ್ಲಿ ದುಡ್ಡು ಲ್ಯಾಪ್ಸ್ ಆಗುತ್ತದೆ ಪ್ರತಿಯೊಂದು ಹಳ್ಳಿಗಳಿಗೆ ಹೋಗಿ ಈ ಸಂಗತಿಗಳಿಂದಾಗಿ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ತರುತ್ತದೆಯೇ? ಸಾಮಾನ್ಯವಾಗಿ ಒಬ್ಬ ರೈತನ ಹಸುವಿಗೆ ಕಾಯಿಲೆ ಬಂದಿದೆ, ನನ್ನ ತಾಲ್ಲೂಕಿನಲ್ಲಿ ಮೊನ್ನೆದಿನ ಇದ್ದಕ್ಕಿದ್ದ ಹಾಗೆ ಔಟ್‌ಬ್ರೇಕ್ ಆಯಿತು, 10-12 ಮಿಶ್ರ ತಳಿಯ ಜಾನುವಾರುಗಳು 10ರಿಂದ 15 ಸಾವಿರ ಬೆಲೆ ಬಾಳುವಂತಹ ಹಸುಗಳು ಸತ್ತು ಹೋದವು. ನಾನು ಕೇಳಿದರೆ ಅಲ್ಲಿ ಒಂದು ಪೈಸೆಯ ಔಷಧಿಗಳು ಆಸ್ಪತ್ರೆಯಲ್ಲಿಲ್ಲ. ಅಲ್ಲಿ ಏನು ಮಾಡುವುದು? ಆ ಆಸ್ಪತ್ರೆಯಲ್ಲಿ ಒಳ್ಳೆಯ ವೈದ್ಯರಿದ್ದಾರೆ ಅದು ನಮ್ಮ ಸುದೈವ, ಅವರು ಔಷಧಿಯನ್ನು ಕೊಂಡುಕೊಳ್ಳುವ ಬಗ್ಗೆ ಚೀಟಿಯನ್ನು ಬರೆದುಕೊಡುತ್ತಾರೆ, ನನ್ನ ಹತ್ತಿರ ಒಬ್ಬ ರೈತನು ಬಂದು ಕಣ್ಣೀರು ಹಾಕುತ್ತಾನೆ, ನನ್ನ ಒಂದು ಹಸು ಸತ್ತು ಹೋಯಿತು. ಇನ್ನೊಂದು ಹಸುವಿಗೆ ಅದೇ ಕಾಯಿಲೆ ಬಂದಿದೆ, ಡಾಕ್ಟರ್ ಒಂದು ಇಂಜಕ್ಷನ್‌ನ್ನು ಬರೆದು ಕೊಟ್ಟಿದ್ದಾರೆ, ಅದರ ಬೆಲೆಯು 750 ರೂಪಾಯಿಗಳಾಗುತ್ತದೆ. ನಾನು ಆ ಹಣವನ್ನು ಎಲ್ಲಿಂದ ತರಲಿ, ಎಂದು ಹೇಳುತ್ತಾನೆ. ನಾನು ನನ್ನ ಕೈನಿಂದ ಆತನಿಗೆ ಹಣವನ್ನು ಕೊಟ್ಟು ಕಳುಹಿಸಿದೆ, ಆತ ಔಷಧಿ ಅಂಗಡಿಗೆ ಹೋಗಿ ಔಷಧಿಯನ್ನು ತರುವಷ್ಟರಲ್ಲಿಯೇ ಆ ಹಸು ಸತ್ತುಹೋಯಿತು. ಇಂತಹ ಒಂದು ದಯನೀಯವಾದ ಸ್ಥಿತಿಯಲ್ಲಿದ್ದಾರೆ. ಮೊನ್ನೆದಿನ ನಾನು ಮಂತ್ರಿಗಳಿಗೆ ಹೇಳಿದ ಮೇಲೆ, ಅವರು ಎಚ್ಚೆತ್ತುಕೊಂಡು, ಅವರು ಸಾಲವನ್ನು ಮಾಡಿಯಾದರೂ ತೆಗೆದುಕೊಂಡು ಹೋಗು ಎಂದು ನಿರ್ದೇಶಕರಿಗೆ ನಿರ್ದೇಶನವನ್ನು ಕೊಟ್ಟರು. ಇದುವರೆಗೂ ಕೂಡ ಅಲ್ಲಿ ಔಷಧಿಯು ಖರೀದಿ ಆಗಲೇ ಇಲ್ಲ. ನಿಮ್ಮ ಇಲಾಖೆಯು ಏನು ಮಾಡುತ್ತಿದೆ? ಇದರ ಬಗ್ಗೆ ನಿಮ್ಮ ಸರ್ಕಾರ ಏನು ಮಾಡುತ್ತಿದೆ? ಇಷ್ಟೊಂದು ವೈಫಲ್ಯತೆಗಳಿರುವಾಗ ನೀವು ಎಷ್ಟು ದಿನ ಆಡಳಿತವನ್ನು ನಡೆಸಬಹುದು? ನೀವು ಜನಗಳಿಗೆ ಬಹಳ ಏನೋ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ನಿಮಗೆ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ನಷ್ಟದಲ್ಲಿರುವಂತಹ ಸಾರ್ವಜನಿಕ ಉದ್ಯಮಗಳ ಬಗ್ಗೆ, ಏನು ಮಾಡುತ್ತೀರೆಂದು ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಉಲ್ಲೇಖವನ್ನು ಮಾಡಲಿಲ್ಲ. ಇವೆಲ್ಲಾ ದೊಡ್ಡ ಬಿಳಿಯ ಆನೆಗಳು, ಇವನ್ನು ನಾವು ಸಾಕುತ್ತಾ ಇದ್ದೇವೆ, ಬಡಬೋರೇಗೌಡ ಕೊಟ್ಟಂತಹ ತೆರಿಗೆಯ ಹಣವನ್ನು ತಂದು ಇಲ್ಲಿ ಸುರಿದು ತಿಂಗಳಿಗೆ 1-2 ಕೋಟಿ ರೂಪಾಯಿಗಳು ನಷ್ಟವಾಗುತ್ತಿರುವಂತಹ ಕಾರ್ಖಾನೆಗಳನ್ನು ನಾವು ನಡೆಸುತ್ತಾ ಇದ್ದೇವೆ. ಇದನ್ನು ನಾವು ಬದಲಾವಣೆ ಮಾಡುವುದು ಹೇಗೆ? ಇದರ ಬಗ್ಗೆ ಮಂತ್ರಿಮಂಡಲದಲ್ಲೂ ಅಥವಾ ಬೇರೆ ಕಡೆಯಲ್ಲೋ ವೈಯಕ್ತಿಕವಾಗಿ ಗಮನವನ್ನು ಹರಿಸಬೇಕು. ಇದರ ಬಗ್ಗೆ ಚರ್ಚೆಯನ್ನು ಮಾಡಿ ಈ ದೇಶದ ಇಷ್ಟೊಂದು ಬೊಕ್ಕಸ ಈ ರೀತಿಯಾಗಿ ನಷ್ಟದ ಉದ್ಯಮಗಳಿಗಾಗಿ ಹಾಳಾಗುತ್ತಿದೆ, ನಾವು ಯಾರನ್ನು ಸಾಕಲಿಕ್ಕಾಗಿ ಕೊಡುತ್ತಿದ್ದೇವೆ. ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದೆ ಅದು ಕುಂಠಿತವಾಗುತ್ತಿದೆ. ನಿಮಗೆ ಯೋಚನೆ ಮಾಡುವಂತಹ

ವ್ಯವಧಾನ ಇಲ್ಲ, ಇವತ್ತು ಮೈಸೂರಿನ ಮಿನರಲ್ಸ್ ಇದೆ (ಎಂಎಂಎಲ್) ಹಿಂದೆ ಇದು ಸರ್ಕಾರದ ಒಂದು ಉದ್ಯಮವಾಗಿತ್ತು, ಇವತ್ತು ಅದು ಏನಾಗಿದೆ, ಎಷ್ಟು ಸಮಯದಿಂದ ಇದೆ, ನಾವು ಇದರ ಬಗ್ಗೆ ಹಿಂದಿನ ಸರ್ಕಾರಕ್ಕೆ ಸಾಕಷ್ಟು ಸಾರಿ ಹೇಳಿದ್ದೇನೆ. ಸುಮಾರು 4000 ನೌಕರರಿಗೆ, ಇವತ್ತು ಸಂಬಳವನ್ನು ಕೊಡುವುದಕ್ಕೆ ಹಣವಿಲ್ಲ ಅವರನ್ನು ಹಾಗೆಯೇ ಇಟ್ಟುಕೊಂಡಿದ್ದೀರಿ. ಸ್ವಲ್ಪಸ್ವಲ್ಪ ಹಣವನ್ನು ಎಲ್ಲಿಂದಲೋ ತಂದು ಅವರಿಗೆ ಕೊಡುತ್ತಿದ್ದೀರಿ, ಗಣಿಗಳನ್ನು ಮುಚ್ಚಿದ್ದೀರಿ, ಆದರೆ ಬೇರೆ ಇಲಾಖೆಯಲ್ಲಿ ಅನೇಕ ಖಾಲಿಯಿರುವಂತಹ ಹುದ್ದೆಗಳು ಇದ್ದು ಅವರನ್ನು ತುಂಬಿದ್ದೀರಾ? ನಮ್ಮ ಆಸ್ಪತ್ರೆಗಳಲ್ಲಿ ಜವಾನರು ಇಲ್ಲ, ಡ್ರೈವರ್‌ಗಳಿಲ್ಲ, ಇವತ್ತು ಅರಣ್ಯ ಇಲಾಖೆಯಲ್ಲಿ ವಾಚರ್‌ಗಳಿಲ್ಲ, ಈ ಹುದ್ದೆಗಳನ್ನು ತುಂಬುವಂತಹ ವ್ಯವಧಾನ ಮಾಡಲಿಲ್ಲ. ಸರ್ಕಾರ ಎರಡು ಇಲಾಖೆಗಳಲ್ಲಿ ಒಂದು ಹೊಂದಾಣಿಕೆಯನ್ನು ಮಾಡಿಸುವಂತಹ ವ್ಯವಧಾನ ನಿಮಗಿಲ್ಲ. ಅದು ಒಂದು ಕಡೆ ನಷ್ಟವಾಗುತ್ತಿದೆ, ಇಲ್ಲಿ ಸಿಬ್ಬಂದಿಯಿಲ್ಲದೆ ಜನರಿಗೆ ಸೌಲಭ್ಯವನ್ನು ಕೊಡುವುದಕ್ಕಾಗುತ್ತಿಲ್ಲ. ಇವೆರಡರ ಸಂಬಂಧವನ್ನು ಕಲ್ಪಿಸುವುದಕ್ಕೆ ನಿಮ್ಮಿಂದ ಆಗುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ನಿಮ್ಮ ಸರ್ಕಾರವನ್ನು ನಡೆಸುತ್ತಿದ್ದೀರಿ? ಇವತ್ತು ಈ ಸದನದಲ್ಲಿ ಹಿರಿಯ ಸಚಿವರಾದಂತಹ ಶ್ರೀ ರಂಗನಾಥ್‌ರವರು ಇದ್ದಾರೆ, ಅವರ ಕೈಯಲ್ಲಿ ಅರಣ್ಯ ಇಲಾಖೆ ಇದೆ, ಅವರು ಇದನ್ನು ಸರಿ ಮಾಡಬಹುದೆಂದು ನಮ್ಮೆಲ್ಲರ ನಿರೀಕ್ಷೆಯಾಗಿದೆ. ಆದರೆ ಆರು ತಿಂಗಳಲ್ಲಿ ಅವರ ಕಡೆಯಿಂದ ಸರಿಮಾಡುವುದಕ್ಕೆ ಆಗುವುದಿಲ್ಲ. ಆ ಇಲಾಖೆಗೆ ಸಿಬ್ಬಂದಿಯೂ ಒಂದು ಕಡೆ ಇಲ್ಲ, ಇವತ್ತು ಏನಾಗಿದೆ ಎಂದರೆ, ಅವರು ಏನು ಮಾಡುವ ಸ್ಥಿತಿಯಲ್ಲಿ ಇದ್ದಾರೆ? ನಮ್ಮಲ್ಲಿ ಸಂಜೆ ರಾತ್ರಿ ವಾಹನಗಳನ್ನು ತೆಗೆದುಕೊಂಡು ಹಳ್ಳಿಗಳಿಗೆ ಹೋಗುತ್ತಿದ್ದರು. ಕೆಲವು ರಸ್ತೆಗಳಲ್ಲಿ ನಿಂತುಕೊಂಡು ಚೆಕ್ ಮಾಡುತ್ತಿದ್ದರು. ಆಗ ಸ್ವಲ್ಪ ಹೆದರಿಕೆಯಾದರೂ ಇತ್ತು, ಮಾನ್ಯ ಸಚಿವರೇ ಈಗ ಆ ಹೆದರಿಕೆಯೂ ಇಲ್ಲ. ನಮ್ಮ ತಾಲ್ಲೂಕಿನ ಒಬ್ಬ ರೇಂಜರ್‌ನ್ನು ತಾವು ಏಕೆ ಓಡಾಡುವುದಿಲ್ಲವೆಂದು ಕೇಳಿದರೆ, ಅವರು ನಮಗೆ ವಾಹನ ಇಲ್ಲವೆಂದು, ಆ ಕೆಲಸವನ್ನು ನಾವು ಮಾಡುವುದಕ್ಕಾಗುವುದಿಲ್ಲವೆಂದು, ಈ ಪರಿಸ್ಥಿತಿಯಲ್ಲಿ ಆತನು ಮಾತನಾಡುತ್ತಾನೆ. ಈ ರೀತಿಯಾದರೆ ಕಾಡು ಎಲ್ಲಿ ಉಳಿಯುತ್ತದೆ? ನಾವೆಲ್ಲರೂ ಮಲೆನಾಡಿನವರು, ಸಾಕಷ್ಟು ನಾವು ಅರಣ್ಯದ ಕಡೆಯಿಂದ ಬಂದವರು. ನಾವು ಒಂದೊಂದು ಹಳ್ಳಿಗಳಿಗೆ ಹೋಗುವಾಗಲು 3-4 ಕಿ.ಮೀ. ಸೂರ್ಯನ ಕಿರಣವು ನಮ್ಮ ಮೈಗೆ ತಾಗುತ್ತಿರಲಿಲ್ಲ. ಅಷ್ಟೊಂದು ದಟ್ಟವಾಗಿರತಕ್ಕಂತಹ ಕಾಡಿನ ಮಧ್ಯೆ ನಾವು ಓಡಾಡುತ್ತಿದ್ದವರು. ಇವತ್ತು ಆ ಕಾಡು ಏನಾಗಿದೆ? ಬರಡಾಗಿದೆ, ಆ ಕಾಡು ಪೂರ್ಣವಾಗಿ ನಾಶವಾಗುತ್ತಿದೆ ನಿಮ್ಮ ಒಂದು ಕೆಎಫ್‌ಡಿಸಿಯಲ್ಲಿ ಒಬ್ಬ ಒಳ್ಳೆಯ ಎಂ.ಡಿಯವರನ್ನು ಕೂರಿಸಿದ್ದೀರಿ ಆ ವ್ಯಕ್ತಿ ಪ್ರಾಮಾಣಿಕವಾಗಿದ್ದಾನೆ, ಅಲ್ಲಿ ಏನೂ ತೊಂದರೆಯಿಲ್ಲ. ಆದರೆ ಅಲ್ಲಿ ಅವರ ಕೆಳಗಿರುವಂತಹ ಸಿಬ್ಬಂದಿ ಹೇಗಿದ್ದಾರೆ? ನಮ್ಮ ಶಿವಮೊಗ್ಗದಲ್ಲಿ ಇ.ಡಿ. (Executive Director) ಎಂಬುವವರು ಇದ್ದಾರೆ. ನಾನು ಮೊನ್ನೆದಿನ ಕೇಳಿದಂತಹ ಪ್ರಶ್ನೆಗೆ ತಾವು ಉತ್ತರವನ್ನು ಕೊಟ್ಟಿದ್ದೀರಿ, ಅವರು ಇಂಥ

ಕಡೆಯಿಂದಲೇ ಲಕ್ಷಗಟ್ಟಲೆ ಪಾಲಿಥೀನ್ ಬ್ಯಾಗ್‌ಗಳನ್ನು ಕೊಳ್ಳಬೇಕೆಂದು ಅವರಿಗೆ ನಿಯಮಾವಳಿಗಳು ಇದೆ, ಅವರು ಯಾರನ್ನು ಮಾತನಾಡಿಸಲಿಲ್ಲ. ಅವರು ಯಾರೋ ಗೊತ್ತಿದ್ದವರಿಗೆ ಪರ್ಸೆಂಟೇಜ್ ಕೊಡುವಂತವರನ್ನು ಪ್ರೈವೇಟ್‌ನವರ ಹತ್ತಿರ ಹೋಗಿ ಸುಮಾರು 10-15 ಲಕ್ಷರೂಪಾಯಿಗಳ ಪಾಲಿಥಿನ್ ಬ್ಯಾಗ್‌ಗಳನ್ನು ಕೊಂಡುಕೊಂಡು ಬಂದಿದ್ದಾರೆ. ನಮ್ಮ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಬುಲ್ಡೋಜರ್‌ಗಳು ತುಕ್ಕು ಹಿಡಿದು ಬಿದ್ದಿದೆ. ಆ ಇಲಾಖೆಯವರು ಅದನ್ನು ವಹಿಸಿಕೊಂಡು ಬುಲ್ಡೋಜರ್‌ನಿಂದ ಓಡಿಸಿ, ಹೊಸ ಪ್ಲಾಂಟೇಷನ್‌ನ್ನು ಮಾಡಬಹುದಾಗಿತ್ತು. ಅಲ್ಲಿ ಆ ಇಲಾಖೆಯವರು ತಂದಿರುವಂತಹ ಟೈಮ್, ರಸೀತಿ ಎಲ್ಲವೂ ಕರೆಕ್ಟಾಗಿ ಸಿಗುತ್ತದೆ. ಇವರು ಪ್ರೈವೇಟ್ ಬುಲ್ಡೋಜರ್‌ಗಳನ್ನು ತೆಗೆದುಕೊಂಡಿದ್ದಾರೆ, ಏಕೆ ಅಡ್ವರ್‌ಟೈಸ್‌ಮೆಂಟ್ ಮಾಡಲಿಲ್ಲವೆಂದು ಕೇಳಿದರೆ, ನಾವು ಈಗಾಗಲೇ 3 ದರಪಟ್ಟಿಯನ್ನು ತೆಗೆದುಕೊಂಡಿದ್ದೇವೆ, ಅದರಲ್ಲಿ ಬಂದಿರುವ ಲೋಯೆಸ್ಟ್ ಕೊಟೇಶನ್‌ಗೆ ಅಪ್ರೂವ್‌ಲನ್ನು ಕೊಟ್ಟಿದ್ದೇನೆ ಎಂದು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಅವರಿಗೆ ಸಂಬಳವ್ನು ಕೊಡುವುದಕ್ಕೆ ಹಣವಿಲ್ಲ. ಅದರೂ ಕೂಡ ಒಬ್ಬೊಬ್ಬ ಅಧಿಕಾರಿಗಳು ಈ ರೀತಿಯಾಗಿ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಅವರನ್ನು ವ್ಯತ್ಯಾಸ ಮಾಡುವುದಕ್ಕೆ ಆಗಲಿಲ್ಲ. ಸಾಗರ ತಾಲ್ಲೂಕಿನಲ್ಲಿ ಒಂದು ಕಡೆ ಇದೇ ಇಲಾಖೆ ಲಕ್ಷಗಟ್ಟಲೆ ಹಣವನ್ನು ಹಾಕಿ ನರ್ಸರಿಯನ್ನು ಮಾಡಿದೆ. ಕಳೆದ 4 ವರ್ಷದಿಂದ ಅದನ್ನು ಎತ್ತಲಿಲ್ಲ, ಅಲ್ಲಿ ಗಿಡ ಹೋಗಿ ಮರವಾಗಿದೆ, ನರ್ಸರಿಯಲ್ಲಿ ಬೆಳೆಸಿರುವುದು ಅಲ್ಲಿಯೇ ಇದೆ. ಹಿಂದಿನ ಸಾರಿ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಸಹ ಇದುವರೆಗೂ ಏನು ಆಗಲಿಲ್ಲ. ನಮಗೆ ಆ ಅಧಿ ಕಾರಿಗಳನ್ನು ಅಲ್ಲಾಡಿಸುವುದಕ್ಕೂ ಸಹ ಆಗಲಿಲ್ಲ. ಇವತ್ತು ಒಬ್ಬೊಬ್ಬ ಅಧಿಕಾರಿಯ ಬೊಕ್ಕಸವನ್ನು ತುಂಬುವುದಕ್ಕೆ ನಮ್ಮ ಇಲಾಖೆಗಳಿರಬೇಕು, ನಿಮ್ಮ ತುಮರಿನಲ್ಲಿ ಕೆಎಫ್‌ಡಿಸಿಯವರು ಒಂದು ನರ್ಸರಿಯನ್ನು ಮಾಡಿದ್ದಾರೆ, ಮಾನ್ಯ ತಿಮ್ಮಪ್ಪನವರೆ, ನಾಲ್ಕು ವರ್ಷದಿಂದ ಅಲ್ಲಿ ನರ್ಸರಿಯ ಗಿಡಗಳನ್ನು ತೆಗೆದುಕೊಂಡು ಹೋಗಲಿಲ್ಲ. ಇದು ನಿಮಗೆ ಗೊತ್ತಿದೆಯೋ, ಇಲ್ಲವೋ, ಅಲ್ಲಿ 2-3 ತಾಲ್ಲೂಕಿಗೋಸ್ಕರ ನರ್ಸರಿಯನ್ನು ಮಾಡಿದ್ದಾರೆ, ನಾನು ಎಲ್ಲಿ ಮಾಡಿದ್ದಾರೆಂಬ ಬಗ್ಗೆ ಕರೆಕ್ಟಾಗಿ ಜಾಗವನ್ನು ಹೇಳುತ್ತೇನೆ. ತಾವು ನೋಡಿ ಬನ್ನಿ ನಿಮಗೆ ತೃಪ್ತಿಯಾದರೆ ಸಾಕು, ಬೇಕಾದರೆ ನಾನು ಸಹ ಬರುತ್ತೇನೆ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಫೋಟೋಗಳನ್ನು ಸಹ ತೆಗೆದುಕೊಂಡು ಬಂದುಕೊಟ್ಟರು ಹೋದ ಸಾರಿಯೂ ನಾನು ಅದರ ಬಗ್ಗೆ ಎತ್ತಿ ಪ್ರಸ್ತಾಪ ಮಾಡಿದೆ. ಅಲ್ಲಿ ಏನು ಮಾಡಲಿಲ್ಲ. 4 ವರ್ಷದಿಂದ ಪಾಲಿಥಿನ್ ಬ್ಯಾಗ್‌ಗಳನ್ನು ನರ್ಸರಿಯಿಂದ ಎತ್ತದೆ ಹೋದರೆ, ಅದು ಏನಾಗಬಹುದು? ಅದೆಲ್ಲವನ್ನು ಎತ್ತಿ ಇವತ್ತು ಹೊಳೆಗೆ ಹಾಕಿರಬಹುದು. ಇವತ್ತು ನಾವು ಈ ಬಗ್ಗೆ ಮಾತನಾಡಿದ್ದೇವೆಂದು ಗೊತ್ತಾಗುತ್ತದೆ, ಅದನ್ನು ಹೊಳಗೆ ಎಸೆಯುತ್ತಾರೆ. ಈ ಪರಿಸ್ಥಿತಿಯಲ್ಲಿ ಆ ಇಲಾಖೆಯು ನಡೆಯುತ್ತಿದೆ. ಅಲ್ಲಿ ವಾಚರ್‌ಗಳಿಗೆ ಸಂಬಳವಿಲ್ಲ, ಬೇರೆಯವರಿಗೂ ಸಂಬಳವನ್ನು ಕೊಡುವಂಹ

ಪರಿಸ್ಥಿತಿಯಲ್ಲಿಲ್ಲ. ಆ ವಿಂಗ್‌ನ್ನೇ ತೆಗೆದುಹಾಕಬೇಕಾಗುತ್ತದೆ. ಆದರಲ್ಲಿದ್ದಂತಹ ವಾಚರ್‌ಗಳನ್ನು ನಮ್ಮ ರೆಗ್ಯುಲರ್ ಆರಣ್ಯ ಇಲಾಖೆಯಲ್ಲಿ ಅವರುಗಳ ವಾಚರ್‌ಗಳ ಕೊರತೆಯಿದೆ, ಅಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದೆ. ಇದನ್ನು ಏಕೆ ಮರ್ಜ್ ಮಾಡಬಾರದು? ಇವತ್ತು ಏನಾಗಿದೆ?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಇದನ್ನು ಮುಚ್ಚಿಬಿಡಿ, ಮರ್ಜ್ ಮಾಡಿ ಎಂದು ಹೇಳುತ್ತೀರಿ, ಅಲ್ಲಿರುವಂತಹ ಅಧಿಕಾರಿಗಳು ಸಹ ಈ ಮಾತನ್ನು ಹೇಳುತ್ತಿದ್ದಾರೆ. ಅಲ್ಲಿ ಯಾರು ನಷ್ಟ ಮಾಡಿದ್ದಾರೆ, ಯಾರು ಇವತ್ತು ಅಲ್ಲಿ ಸಂಬಳ ಕೊಡುವುದಕ್ಕೆ ದುಡ್ಡಿಲ್ಲದ ಹಾಗೆ ಮಾಡಿದ್ದರೋ ಅವರು ಇದೇ ಆರ್ಗ್ಯುಮೆಂಟನ್ನೇ ಹೇಳುತ್ತಾರೆ. ಆಗ ನಾನು ಒಂದೊಂದು ಸಾರಿ ಯೋಚನೆ ಮಾಡುವಂತಹ ಪರಿಸ್ಥಿತಿ ಬರುತ್ತದೆ. ನೀವು ಹೇಳಿದ ಹಾಗೆ ಕೆಳಗಡೆ ಎಲ್ಲಾ ವಸ್ತುಸ್ಥಿತಿ. ಈಗ ಅವರಿಗೆ ಸಂಬಳ ಕೊಡತಕ್ಕಂಥ ವ್ಯವಸ್ಥೆಯಾಗಿದೆ. ಅದನ್ನು ಹೇಗೆ ರಿಯುಟಿಲೈಸ್ ಮಾಡಬೇಕು ಎನ್ನುವುದು ಕೂಡ ಆಗಿದೆ. ಒಂದೊಂದು ಸಾರಿ ಇದೆಲ್ಲ ಸರಿಮಾಡಬೇಕಾದರೆ ನಾವು ನೀವು ಅವರ ತಂಟೆಗೇ ಹೋಗದಿದ್ದರೆ ಅದು ಸರಿಹೋಗುತ್ತದೆ. ಹೀಗೆ ಇಲ್ಲಿ ಮಾತನಾಡಿದರೆ ಅವರು ನಾಳೆ ನಮ್ಮ ಹತ್ತಿರವೇ ಬರುತ್ತಾರೆ. ಅದಾಯಿತು - ಇದಾಯಿತು ಎಂದು ಹೇಳುತ್ತಾರೆ. ಅವರಿಗೆ ನಾವು ರಕ್ಷಣೆ ಕೊಡುವುದರಿಂದಲೇ ಹೀಗೆ ಆಗಿದೆ.

ಶ್ರೀ ಅರಗ ಜ್ಞಾನೇಂದ್ರ: ತಾವು ಒಂದೊಂದು ಸಾರಿ ನಿಷ್ಕರುಣೆಗಳಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಾವು ಬಹಳ ಹಿರಿಯರು ಇದ್ದೀರಿ. ಈ ಇಲಾಖೆಯಲ್ಲಿ ಎಲ್ಲರಿಗೂ ಒಂದೇ ಸಮನಾಗಿ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್: ಅದರಲ್ಲಿ ಅನುಮಾನವೇ ಪಡಬೇಕಾಗಿಲ್ಲ. ಆದರೆ ಮುಚ್ಚಬೇಕು ಎಂದು ಅವರು ಹೇಳುತ್ತಾರೆ. ಈ ಆರ್ಗ್ಯುಮೆಂಟ್ ಹೇಗೆ? ನಷ್ಟ ಮಾಡಿದ್ದಾರೆ. ನಷ್ಟ ಮಾಡಬೇಡಿ, ಇದಕ್ಕೆ ಏನು ಪರಿಹಾರ ಎಂದರೆ ಮುಚ್ಚಿಬಿಡಬೇಕೆಂದು ಹೇಳುತ್ತಾರೆ. ಅದನ್ನು ಮುಚ್ಚಿಬಿಟ್ಟು ನಾವೆಲ್ಲರೂ ಮನೆಗೆ ಹೋಗಬೇಕು. ಅಲ್ಲಿ 340 ಚಿಲ್ಲರೆ ಜನ ಕೆಲಸಗಾರರು ಇದ್ದಾರೆ. ಅವರಿಗೆ ಸಂಬಳ ಎಲ್ಲಿಂದ ಕೊಡಬೇಕು? ನಾವು ಸರ್ಕಾರದಿಂದ ಕೊಡುವುದಾ? ಅದನ್ನು ಮಾಡಿದ್ದು ಏತಕ್ಕೆ? ಇದನ್ನು ಸುಲಭವಾಗಿ ಅವರು ಹೇಳುತ್ತಾರೆ. ಅದಕ್ಕೆ ನಾವು ನೀವು ಸ್ವಲ್ಪ ದೂರ ಇಟ್ಟು ಬಿಟ್ಟರೆ ಎಷ್ಟೋ ಕಡಿಮೆಯಾಗುತ್ತಾ ಹೋಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ: ಸ್ವಾಮಿ, ಈಗ ಸಾವಿರಾರು ಎಕರೆ ಭೂಮಿ ಇದೆ. ಕೆ.ಪಿ.ಎಲ್. ಅಂತ ಹೇಳಿ, ಕರ್ನಾಟಕ ಪಲ್ಪ್‌ಬೋರ್ಡ್ ಲಿಮಿಟಡ್ ಕಾರ್ಪೊರೇಷನ್ ಅಂತಹೇಳಿ ಮಾಡಿದ್ದೀರಿ. ಅದರ ಭೂಮಿಯನ್ನು ಪೂರ್ಣ ಹಸ್ತಾಂತರ ಮಾಡಿದ್ದೀರಿ ಆ ಇಲಾಖೆಗೆ. ಅವರ ಕೈಗೆ ದುಡ್ಡೂ ಕೊಡಲಿಲ್ಲ. ಎಷ್ಟೋ ಎಕರೆ ಪ್ಲಾಂಟೇಶನ್ ಮಾಡಿ

ಎಂದು ಹೇಳಿ ಹಾಗೆ ಕೊಟ್ಟಿದ್ದನ್ನು ದುರುಪಯೋಗ ಮಾಡಿದಂಥ ಅಧಿಕಾರಿಗಳು ಅಲ್ಲಿ ಇದ್ದಾರೆ. ಅವರ ಮೇಲೆ ಏನು ಕಠಿಣವಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ನಾವು ಯಾರೂ ಮಧ್ಯಪ್ರವೇಶ ಮಾಡುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್: ನಾನು ನೋಡುತ್ತಾ ಇದ್ದೆ. ವರಾಹಿ ಪ್ರಾಜೆಕ್ಟ್ ಯಾವಾಗ ಆಗಿರುವುದು? 1994ನೇ ಇಸವಿಯಲ್ಲಿ ಆಗಿದ್ದು ಇಲ್ಲಿಯವರೆಗೂ ಎನ್‌ಕ್ವೈರಿ ಮುಗಿಯದೇ ಇರತಕ್ಕದ್ದು ಇದೆ. ಆದ್ದರಿಂದ ಆರು ತಿಂಗಳಲ್ಲಿ ನಾನೇನೂ ಮೆಸ್ಮರಿಸಂ ಮಾಡುತ್ತೇನೆ ಎಂದು ಹೇಳಿ ತಾವು ಭಾವಿಸಿದರೆ, ಈ ಸದನ ಭಾವಿಸಿದರೆ ಅದು ಆಗದೇ ಇರತಕ್ಕಂಥ ಕೆಲಸ. 1994ರಿಂದ ಎನ್‌ಕ್ವೈರಿ ಮುಗಿದಿಲ್ಲ. ಇದೆಲ್ಲ ಅದರಲ್ಲಿ ಇದೆ. ಇದು ಸ್ವಲ್ಪ ಕಷ್ಟಕ್ಕೆ ತಂದಿಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ನಾನು ಹೇಳುವುದೇನೆಂದರೆ ಎಲ್ಲವನ್ನು ನೀವು ಸರಿ ಮಾಡುತ್ತೇನೆ ಎನ್ನುವುದಾದರೆ ಅದನ್ನು ನೀವು ಸರಿಮಾಡಿ. ನಾನು ಮುಚ್ಚಬೇಕು ಎಂದು ಹೇಳುವುದಿಲ್ಲ. ಎಂ.ಎಂ.ಎಲ್ ಇರಬಹುದು, ನಿಮ್ಮ ಕೆ.ಫ಼್.ಡಿ.ಸಿ. ಇರಬಹುದು, ಅದನ್ನು ಸರಿಮಾಡುತ್ತೇವೆ, ಲಾಭದಾಯಕವಾಗಿ ಮಾಡುತ್ತೇವೆ, ಅದನ್ನು ಬಲಪಡಿಸಿ ಈ ಜನಕ್ಕೆ.....

ಶ್ರೀ ಕೆ.ಎಚ್.ರಂಗನಾಥ್: ಎಲ್ಲಿಯತನಕ ಅದು ನಮ್ಮ ಕಡೆ ಇರುತ್ತದೆ ಅದನ್ನು ಸರಿಮಾಡಬೇಕು, ಇಲ್ಲದಿದ್ದರೆ ಮನೆಗೆ ಹೋಗಬೇಕು. ಇವೆರಡೇ ಹೊರತು ಮೂರನೇ ವಿಚಾರವೇ ಇಲ್ಲ.

ಶ್ರೀ ಅರಗ ಜ್ಞಾನೇಂದ್ರ: ನಾನು ಇದನ್ನು ಮುಚ್ಚಬೇಕು ಎಂದು ಹೇಳುವವನೇ ಅಲ್ಲ. ಈ ಸ್ಥಿತಿಯಲ್ಲಿ ಸಂಬಳ ಕೊಡುವುದಕ್ಕೆ ಆಗದೇ ಅವರನ್ನು ಸಾಕುವುದಕ್ಕಿಂತ ಅದನ್ನು ಮುಚ್ಚಿ. ಅಲ್ಲಿಗೆ ತೆಗೆದುಕೊಂಡು ಹೋಗಿರತಕ್ಕಂಥ ಅಧಿಕಾರಿಗಳು ಯಾರು? ಎಲ್ಲಿಯೂ ಸಲ್ಲದವರು ಅಲ್ಲಿ ಸಲ್ಲಿದ್ದಾರೆ. ಬೇಡದ ಅಧಿಕಾರಿಗಳನ್ನು ಅಲ್ಲಿ ತೆಗೆದುಕೊಂಡುಹೋಗಿ ಹಾಕುವಂಥಾದ್ದು ಆಗಿದೆ. ಕೆಲಸ ಮಾಡದೇ ಇರತಕ್ಕಂಥ ಸೋಂಬೇರಿ ಆಗಿರತಕ್ಕಂಥ, ಗಂಟು ಹೊಡೆಯತಕ್ಕಂಥ ಅಧಿಕಾರಿಗಳನ್ನು ಆ ಇಲಾಖೆಯಲ್ಲಿ ಸಾಕಿ ನೀವು ಮಾಡಿರತಕ್ಕಂಥಾದ್ದು, ಅದನ್ನು ದುರಸ್ತಿ ಮಾಡುವುದಾದರೆ ನನ್ನದೇನೂ ತೊಂದರೆ ಇಲ್ಲ. ಇಂತಹ ಅನೇಕ ಸಂಗತಿಗಳು ಇವೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅಲ್ಪಸಂಖ್ಯಾತರ ಬಗ್ಗೆ ವಿಶೇಷವಾಗಿರತಕ್ಕಂಥ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದ್ದೀರಿ. ನಾನು ಅದರಲ್ಲಿ ನೋಡಿದೆ. ನನ್ನ ಚಿಂತೆ ಏನೆಂದರೆ ಇಲ್ಲಿ ''ಅಲ್ಪಸಂಖ್ಯಾತರ ನಾಲ್ಕು ವಸತಿ ಶಾಲೆಗಳನ್ನು ನಾವು ಮಾಡುತ್ತೇವೆ'' ಎಂದು ಇದೆ. ಇದರಿಂದ ಏನಾಗಬಹುದು? ಇರತಕ್ಕಂಥ ವಿದ್ಯಾರ್ಥಿನಿಲಯಗಳಲ್ಲಿ ಅಲ್ಪಸಂಖ್ಯಾತರ ಮಕ್ಕಳಿಗೆ ರಿಸರ್ವೇಶನ್ಸ್ ಇಡಿ. ನಿಮ್ಮ ಸರ್ಕಾರಕ್ಕೆ ಇಚ್ಛೆ ಇಲ್ಲ. ಅಲ್ಪಸಂಖ್ಯಾತರ ಮಕ್ಕಳು ನಮ್ಮ ಮಕ್ಕಳು ಎಲ್ಲರೂ ಒಟ್ಟಿಗೆ

ಓದಬೇಕು, ಒಟ್ಟಿಗೆ ಊಟ ಮಾಡಬೇಕು. ಒಟ್ಟಿಗೆ ಅವರೆಲ್ಲರೂ ಕ್ರೀಡಾಂಗಣದಲ್ಲಿ ಆಟ ಆಡಬೇಕು. ಆವಾಗ ಅವರಲ್ಲಿ ಭ್ರಾತೃತ್ವ ಭಾವನೆ ನಿರ್ಮಾಣವಾಗುತ್ತದೆ. ಈ ದೇಶದಲ್ಲಿ ಅಲ್ಪಸಂಖ್ಯಾತರನ್ನು ಬೇರೆ ಇಟ್ಟಷ್ಟೂ ನೀವು ಅಧಿಕಾರದಲ್ಲಿ ಉಳಿಯುತ್ತೀರಿ ಎನ್ನುವ ಭಾವನೆ ನಿಮ್ಮಲ್ಲಿ ಇದ್ದರೆ ಅದನ್ನು ತೆಗೆದುಹಾಕಬೇಕಾಗುತ್ತದೆ. ಈ ದೇಶದಲ್ಲಿ ಆ ರೀತಿ ಪ್ರತ್ಯೇಕತಾ ಮನೋಭಾವನೆಯನ್ನು ನಾವು ನಾವೇ ಮಾಡುವುದಾಗಿದೆ. ಏಕೆಂದರೆ ಅವರ ಓಟು ಕಾಯಂ ನಿಮಗೆ ಬೇಕು. ಈ ದೇಶದಲ್ಲಿ ಎಲ್ಲರೂ ಕೂಡ ಅಣ್ಣತಮ್ಮಂದಿರ ಹಾಗೆ ಬದುಕಬೇಕು ಎಂದರೆ ಆ ಮಕ್ಕಳನ್ನೂ ಕೂಡ ಒಂದೇ ವಿದ್ಯಾರ್ಥಿನಿಲಯದಲ್ಲಿ ಇಡುವುದಕ್ಕೆ ಅವಕಾಶಮಾಡಿ ಕೊಡಿ. ರಾಜ್ಯಪಾಲರ ಭಾಷಣದಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಮುಂದಿನ ಪರಿಣಾಮ ಏನಾಗುತ್ತದೆ ಎಂದು ಯೋಚನೆ ಮಾಡಲಿಲ್ಲ. ಯಾವುದೇ ಒಂದು ವರ್ಗಕ್ಕೆ ತೃಪ್ತಿ ತರತಕ್ಕಂಥ ಕೆಲಸ ಬೇಡ. ಇರತಕ್ಕಂಥ ವಿದ್ಯಾರ್ಥಿನಿಲಯಗಳ ಸಂಖ್ಯೆ ಜಾಸ್ತಿ ಮಾಡಿ ಅವರ ಮಕ್ಕಳು, ನಮ್ಮ ಮಕ್ಕಳು ಎಲ್ಲರೂ ಒಟ್ಟಿಗೆ ಊಟ ಮಾಡಲಿ, ಒಟ್ಟಿಗೆ ಮಲಗಲಿ. ಬೆಳೆಯುತ್ತಾ ಬೆಳೆಯುತ್ತಾ ಅವರಿಗೆ ನಾವು ಬೇರೆ ಅಲ್ಲ, ನೀವು ಬೇರೆ ಅಲ್ಲ ಎನ್ನುವ ಭಾವನೆ ನಿರ್ಮಾಣವಾಗುತ್ತದೆ. ಇದರಿಂದ ಇಡೀ ಸಾಮಾಜಿಕ ವ್ಯವಸ್ಥೆ ಸರಿಹೋಗುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಬೇಕೇ ಹೊರತು ನೀವು ಪ್ರತ್ಯೇಕವಾಗಿ ಹಾಸ್ಟೆಲ್ ತೆಗೆದುಕೊಳ್ಳಿ, ಪ್ರತ್ಯೇಕವಾಗಿ ಇರತಕ್ಕಂಥ ಕಾಲೇಜು ತೆಗೆದುಕೊಳ್ಳಿ, ಪ್ರತ್ಯೇಕವಾಗಿ ಇರತಕ್ಕಂಥ ವಿದ್ಯಾರ್ಥಿನಿಲಯ ತೆಗೆದುಕೊಳ್ಳಿ ಎಂದರೆ ಎಲ್ಲಿಯವರೆಗೆ ನೀವು ತೆಗೆದುಕೊಂಡು ಹೋಗಿ ಮುಟ್ಟಿಸುತ್ತೀರಿ? ದಯವಿಟ್ಟು ಮುಂದಿನ ಪರಿಣಾಮವನ್ನು ಆಲೋಚನೆ ಮಾಡತಕ್ಕದ್ದು ತೀರಾ ಅವಶ್ಯಕತೆ ಇದೆ.

ಅಧ್ಯಕ್ಷರು: ಜ್ಞಾನೇಂದ್ರ ಅವರೇ, ತಮಗೆ ಇನ್ನೂ ಎಷ್ಟು ಹೊತ್ತು ಬೇಕು?

ಶ್ರೀ ಅರಗ ಜ್ಞಾನೇಂದ್ರ: ನಾನು ಈಗ ಪ್ರಾರಂಭ ಮಾಡುತ್ತಿದ್ದೇನೆ.

ಅಧ್ಯಕ್ಷರು: ಪ್ರಶ್ನೆ ಹಾಗಲ್ಲ. ಇವತ್ತು ಏಳು-ಏಳೂವರೆ ಗಂಟೆಯಾಗಲಿ ಮುಗಿಸಬೇಕು. ನಾಳೆ ಯಾರಿಗೂ ಮಾತನಾಡುವುದಕ್ಕೆ ಅವಕಾಶ ಇಲ್ಲ. ಮುಖ್ಯ-ಮಂತ್ರಿಗಳಿಂದ 11 ಗಂಟೆಗೆ ರಿಪ್ಲೈ. ಆದಾದಮೇಲೆ ಪ್ರಶ್ನೋತ್ತರ ಇರುತ್ತದೆ.

ಶ್ರೀ ಆರಗ ಜ್ಞಾನೇಂದ್ರ: ಇನ್ನೂ ಹತ್ತು-ಇಪ್ಪತ್ತು ನಿಮಿಷ ಕೊಟ್ಟರೆ ಸಾಕು. ನಾನು ಈ ಸಲ ಬಜೆಟ್‌ನಲ್ಲಿ ಮಾತನಾಡಲಿಲ್ಲ.

ಅಧ್ಯಕ್ಷರು: ಅಕಸ್ಮಾತ್ ಯಾರಾದರೂ ಉಳಿದರೆ ಅವರು ಡಿಮ್ಯಾಂಡ್ ಮೇಲೆ ಮಾತನಾಡಲಿ. ಅದಕ್ಕೆ ಆರೇಳು ದಿವಸ ಕೊಟ್ಟಿರುತ್ತೇವೆ. ನಿಮ್ಮ ಪೈಕಿ ಉಳಿದವರು ಇದ್ದರೆ ಅವರು ಆಗ ಮಾತನಾಡಲಿ.

(ಅಧ್ಯಕ್ಷ ಪೀಠದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್.ಯಾವಗಲ್ ಅವರು ಉಪಸ್ಥಿತರಾದರು)

ಶ್ರೀ ಅರಗ ಜ್ಞಾನೇಂದ್ರ: ಈ ಕಾಂಗ್ರೆಸ್ ಸರ್ಕಾರಕ್ಕೂ ಹೆಂಡದ ದೊರೆಗಳಿಗೂ ಬಹಳ ನಂಟು. ಇವರು ರಾಜ್ಯವನ್ನು ಆಳುವುದು, ಇವರನ್ನು ಅವರು ಆಳುವುದು. ಇದು ಈ ರಾಜ್ಯದಲ್ಲಿ ಪರಿಪಾಠ. ಇವರು ಆಡಳಿತಕ್ಕೆ ಬಂದಾಗೆಲ್ಲ ಹೆಂಡದ ದೊರೆಗಳಿಗೆ ಸುಭಿಕ್ಷೆ, ಸಂತೋಷ ಮತ್ತು ಸುಗ್ಗಿ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಅವರು ಹಬ್ಬ ಆಚರಿಸುತ್ತಾರೆ. ನಮ್ಮವರು ಬಂದಿದ್ದಾರೆ ಎಂದು ಹೇಳಿ ಅವರಿಗೆ ಸಂತೋಷ.

ಶ್ರೀ ಕೆ.ಅಭಯಚಂದ್ರ: ಮಾನ್ಯ ಅಧ್ಯಕ್ಷರೇ.....

ಶ್ರೀ ಅರಗ ಜ್ಞಾನೇಂದ್ರ: ಉದಾಹರಣೆಗಳನ್ನು ನಾನು ಹೇಳುತ್ತೇನೆ, ಸುಮ್ಮಸುಮ್ಮನೆ ಹೇಳುವುದಿಲ್ಲ, ಆಮೇಲೆ ನೀವು ಮಾತನಾಡಿ. ಸ್ವಾಮಿ, ಅವರ ಮರ್ಜಿಯನ್ನು ಎಲ್ಲಿಯವರೆಗೆ ಹಿಡಿಯಬೇಕೋ ನನಗೆ ಗೊತ್ತಿಲ್ಲ. 1992ರಲ್ಲಿ ಯಾರು ಆಳುತ್ತಿದ್ದುದು? 1992ರಲ್ಲಿ ಇವರು ಆಳುತ್ತಿದ್ದರು. 1992ರಲ್ಲಿ ನಮ್ಮ ಒಂದಿಷ್ಟು ಜನ ಅಧಿಕಾರಿಗಳು 8 ಕೋಟಿ ರೂಪಾಯಿಗಳನ್ನು ಸರ್ಕಾರದ ಸಂಚಿತ ನಿಧಿಯಿಂದ ಡ್ರಾ ಮಾಡಿ ಡಿಸ್ಟಿಲರಿ ಮಾಲೀಕರಿಗೆ ಕೊಟ್ಟರು. ಈ ರಾಜ್ಯದಲ್ಲಿ ನೀವು ಮಜಾಮಾಡಿ, ಸುಖವಾಗಿರಿ, ತೊಂದರೆಗೆ ಒಳಗಾಗಬೇಡಿ ಎಂದು ಕೊಟ್ಟರು. ನಾನು ಮೊನ್ನೆ ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದಾರೆ. ಆವತ್ತು ಒಟ್ಟು 7ಕೋಟಿ 46ಲಕ್ಷ 89ಸಾವಿರದ 418ರೂಪಾಯಿಗಳನ್ನು ಡ್ರಾ ಮಾಡಿದರು. ಇವತ್ತಿಗೆ ಎಂಟು ವರ್ಷ ಆಯಿತು. ಅಲೆಕ್ಸಾಂಡರ್, ಐ.ಎ.ಎಸ್. ಅಧಿಕಾರಿಯಾಗಿರತಕ್ಕಂಥವರು ಆವತ್ತು ಆರ್ಥಿಕ ಆಯುಕ್ತರು. ಅವರು ಇವತ್ತು ಈ ಸರ್ಕಾರದಲ್ಲಿ ಮಾನ್ಯ ಶಾಸಕರು, ಈ ಸದನದಲ್ಲಿ ಇದ್ದಾರೆ. ಅವರಿಗೆ ಒಂದು ಕ್ವಾಲಿಫಿಕೇಶನ್. ಆರ್ಥಿಕ ಇಲಾಖೆಯಲ್ಲಿ ಅಂದಿನ ಉಪಕಾರ್ಯದರ್ಶಿಯಾಗಿದ್ದವರು ಹೆಚ್.ಹೆಚ್.ಸೇಠ್. ಶ್ರೀ ಬುಳ್ಳಾ ಸುಬ್ಬರಾವ್, ಐ.ಎ.ಎಸ್. ಅಧಿಕಾರಿಗಳು ಅಂದಿನ ಅಬ್ಕಾರಿ ಆಯುಕ್ತರು. ನಮ್ಮ ಶಿವಮೊಗ್ಗದಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು ಶ್ರೀ ಲಕ್ಷ್ಮೀನಾರಾಯಣ ಅಂತ ಹೇಳಿ, ಅವರು ಅವತ್ತಿನ ಅಬ್ಕಾರಿ ಉಪಆಯುಕ್ತರು. ಅಭಯಚಂದ್ರರವರೇ, ಆವತ್ತು ನೀವು ಇರಲಿಲ್ಲವೆಂದು ಕಾಣುತ್ತದೆ. ಯಾರ ಗಂಟು ಇದು? ಮಂತ್ರಿಗಳು ಅಥವಾ ಸರ್ಕಾರ ನಮ್ಮದ್ಯಾರದ್ದೇ ಮನೆಗಂಟಾಗಿದ್ದರೆ ಹೀಗೆ ಎತ್ತಿಕೊಟ್ಟುಬಿಡುತ್ತಿದ್ದರಾ? ಇವರಿಗೆ ನೇಣು ಹಾಕುತ್ತಿರಲಿಲ್ವೆ? ಸಾರ್ವಜನಿಕರ ದುಡ್ಡನ್ನು, ಗಂಟನ್ನು ಹೀಗೆ ಎತ್ತಿಕೊಟ್ಟು ಬಿಟ್ಟಿದ್ದಾರೆ. ಇವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಮಂತ್ರಿಮಂಡಲದಲ್ಲಿ ನಿರ್ಣಯವಾಗಿದೆ. ಯಾರ ಮೇಲೆ ಕಠಿಣ ಕ್ರಮ ತೆಗೆದುಕೊಂಡಿದ್ದೀರಿ? 1992 ರಿಂದ 94ರವರೆಗೆ ನೀವೇ ಇದ್ದಿರಿ; ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇವತ್ತು ಬಂದು ಆರು ತಿಂಗಳಾಯಿತು. ಹೇಗೆ ನೀವು ಇದನ್ನು ವಸೂಲು ಮಾಡುತ್ತೀರಿ ಎಂದು ಕೇಳಿದರೆ 'ಡಿಸ್ಟಿಲರಿ ಅವರಿಗೆ

ನೋಟೀಸ್ ಕೊಡುವ ಮೂಲಕ ವಸೂಲು ಮಾಡಲು ಸಚಿವಸಂಪುಟ ಅನುಮೋದನೆ ಪಡೆದು ಕ್ರಮ ಕೈಗೊಳ್ಳಲಾಗುವುದು' ಎಂದು ಮೊನ್ನೆ ನಾನು ಕೇಳಿದ ಪ್ರಶ್ನೆಗೆ ಬಂದಿರಕ್ಕಂಥ ಉತ್ತರದಲ್ಲಿದೆ. 1992ನೇ ಇಸವಿಯಲ್ಲಿ 8 ಕೋಟಿ ಹೋಗಿರತಕ್ಕಂಥಾದ್ದು. ಬ್ಯಾಂಕಿನಲ್ಲಿ ಫಿಕ್ಸಡ್ ಡಿಪಾಸಿಟ್ ಇಟ್ಟಿದ್ದರೂ 16 ಕೋಟಿ ಆಗುತ್ತಿತ್ತು. ಆದರೆ ಏನೂ ಮಾಡಲಿಲ್ಲ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ ಏಕೆ? ಡಿಸ್ಟಿಲರಿ ಮಾಲೀಕರು ನಿಮ್ಮ ಮೇಲೆ ಒತ್ತಡ ತಂದಿದ್ದಾರೆ. ಅವರು ನಮಗೆ ಕೊಟ್ಟಿದ್ದು, ನೀವು ಸುಮ್ಮನೆ ಇರಿ, ಕ್ರಮ ತೆಗೆದುಕೊಳ್ಳಬೇಡಿ ಎಂದು ಅವರು ಹೇಳಿದ್ದಾರೆ. ಅದಕ್ಕಾಗಿ ನಾನು ಹೇಳಿದ್ದು ಸರ್ಕಾರವನ್ನು ಆಳತಕ್ಕವರು ಡಿಸ್ಟಿಲರಿ ಮಾಲೀಕರು, ಹೆಂಡದ ದೊರೆಗಳು ಎಂದು. ಅದಕ್ಕಾಗಿ ನಾನು ಹೇಳಿದ್ದು, ನೀವು ಬೇಜಾರು ಮಾಡಿಕೊಳ್ಳಬೇಡಿ. ನಾನು ಉದಾಹರಣೆ ಸಹಿತ ಹೇಳುತ್ತಿದ್ದೇನೆ. ಸ್ಪಿರಿಟ್ ವಿಷಯದಲ್ಲಿ ಬಾಟಲಿಂಗ್ ಹಗರಣ ಆವತ್ತೇ ನಡೆದದ್ದು. ಮಾನ್ಯ ಅಧ್ಯಕ್ಷರೇ, 164 ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡಿದ್ದಾರೆ. ಬಜೆಟ್‌ನಲ್ಲಿ ನೋಡಿ ನಮಗೆ ಬಹಳ ಸಂತೋಷವಾಯಿತು. ನಾನು ತಿಳಿದುಕೊಂಡಿದ್ದೆ ಇವರು ಬಹಳ ಬಡವರು ಇರಬಹುದು ಎಂದು. ನನ್ನ ಕ್ಷೇತ್ರದಲ್ಲಿ ಸುಮಾರು 200-250 ಮನೆಗಳಿಗೆ ಹಾಕಿದ್ದ ಭಾಗ್ಯಜ್ಯೋತಿ ದೀಪಗಳನ್ನು, ನೀವು ಹಣ ಕಟ್ಟಲಿಲ್ಲವೆಂದು 2ವರ್ಷಗಳ ಹಿಂದೆ ಎಲ್ಲವನ್ನೂ ಕಿತ್ತು ಹಾಕಿದ್ದಾರೆ. ಒಂದು ತಿಂಗಳಿಗೆ 2-3 ರೂಪಾಯಿ ಕಟ್ಟಬೇಕಾಗಿತ್ತು. ಆದರೆ, ಅವರು ಕಟ್ಟಲಿಲ್ಲ. ಎರಡು ಬಲ್ಬು ಹಾಕಿದ್ದಾರೆ. ಇಂತಹ ಕಾರಣ ಕೊಟ್ಟು, ಆ ಮನೆಗಳ ದೀಪಗಳನ್ನೆಲ್ಲಾ ಕಿತ್ತು ಹಾಕಿದ್ದಾರೆ. ಅವರು ಮೊನ್ನೆದಿನ ಬಂದು ಹೇಳಿದರು. 164 ಕೋಟಿ ರೂಪಾಯಿಗಳನ್ನು ಸರ್ಕಾರದವರು ಮನ್ನಾ ಮಾಡಿದ್ದಾರೆಂದು ತಿಳಿಯಿತು, ಅದು ನಮಗೂ ಸೇರುತ್ತದೆಯೇ ಮತ್ತು ನಮಗೆ ಈ ಲೈಟ್ ಸಿಗುತ್ತದೆಯೇ ಎಂದು ಕೇಳಿದರು. ಅದಕ್ಕೆ ನಾನು ಅದು ನಿಮಗೆ ಸಿಗುವುದಿಲ್ಲ; ನಿಮ್ಮದಲ್ಲವೆಂದು ಹೇಳಿದೆ. ಮನ್ನಾ ಮಾಡಿದ್ದಾರೆಂದು ಅವರಿಗೆ ಭಾರಿ ಖುಷಿಯಾಗಿತ್ತು. ಇದರಲ್ಲಿ ಬಡವರು, ದಲಿತರು ಯಾರು ಎಂದು ನಾನು ನೋಡುತ್ತಾ ಇದ್ದೆ. ಅಧ್ಯಕ್ಷರೇ, ಅವರೆಲ್ಲಾ ಸೇರಿ ಸರ್ಕಾರಕ್ಕೆ ಮಕ್‌ಮಲ್ ಟೋಪಿ ಹಾಕುವುದಕ್ಕಾಗಿ ಒಂದು ಪಾರ್ಟನರ್‌ಷಿಪ್ ಡೀಡ್ ಮಾಡಿಕೊಂಡಿದ್ದಾರೆ. ಇದರಲ್ಲಿ 15ಜನ ಪಾರ್ಟನರ್ಸ್ ಇದ್ದಾರೆ. ಜೆ.ಪಿ.ನಾರಾಯಣಸ್ವಾಮಿ, ದಾಸಪ್ಪನವರು, ಪಾಲ್ ಟಿ.ಜಾನ್, ಸತೀಶ್‌ಚಂದ್ರ ಹೆಗಡೆಯವರು, ವೆಂಕಯ್ಯ ಗುತ್ತೇದಾರ್‌ರವರು ಹೀಗೆ ಒಟ್ಟು 15 ಜನ ಇದ್ದಾರೆ. ಬಹಳ ಮಜ ಅಂದರೆ, ಈ ಪಾರ್ಟನರ್‌ಷಿಪ್ ಡೀಡ್ ಓದಬೇಕು. ಇದು ಬಹಳ ಚೆನ್ನಾಗಿದೆ. ಇದರಲ್ಲಿ ಅವರು ಎಲ್ಲವನ್ನೂ ಮಾಡಿಕೊಂಡಿದ್ದಾರೆ. ಏನೆಂದರೆ, "The name of the firm shall be that of Karnataka Excise Syndicate. The partners may change its name to any other name or names as the partners decide from time to time." ಅವರು ಯಾವಾಗ ಬೇಕಾದರೂ ಹೆಸರು ಬದಲಾಯಿಸಿಕೊಳ್ಳಬಹುದಂತೆ.

ಆಮೇಲೆ ಸ್ಥಳವನ್ನೂ ಕೂಡ ಅವರು ಎಲ್ಲಿ ಬೇಕಾದರೂ ಬದಲಾವಣೆ ಮಾಡಿಕೊಳ್ಳಬಹುದಂತೆ. ಇದು ಈ ಮೊಬೈಲ್ ಇದ್ದ ಹಾಗೆ. ಇಂತಹ ಅನೇಕ ಕಂಡೀಷನ್ಸ್ ಇದರಲ್ಲಿ ಇವೆ. ಇದನ್ನು ಬೇಕಾದರೆ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಇದು ರಿಜಿಸ್ಟರ್ಡ್ ಫರ್ಮ್. ಈ ಬಡವರಿಗೆ, ದಾಸಪ್ಪ ಕಂಪನಿಗೆ ಎಷ್ಟೆಷ್ಟು ಎಂದು ನಾನು ನೋಡುತ್ತಾ ಇದ್ದೆ. ಈ 164 ಕೋಟಿಯಲ್ಲಿ ದಾಸಪ್ಪ ಕಂಪನಿ ಒಬ್ಬರಿಗೆ 24 ಕೋಟಿ ರೂಪಾಯಿಗಳು ಮನ್ನಾ ಆಗುತ್ತಿದೆ. ಪಾಪ ಬಡವರು, ದಲಿತರು, ಇವತ್ತು ಕಟ್ಟುವುದಕ್ಕೆ ಏನೂ ಇಲ್ಲ. ಅವರೆಲ್ಲಾ ಇನ್‌ಕಮ್ ಸರ್ಟಿಫಿಕೇಟ್ ತಂದು ಕೊಡುತ್ತಾರಲ್ಲ. ಬ್ಯಾಂಕಿನಿಂದ ಸಾಲ್ವೆನ್ಸಿ ಸರ್ಟಿಫಿಕೇಟ್ ತಂದುಕೊಡುತ್ತಾರಲ್ಲ. ಟೆಂಡರ್ ಕರೆಯುವಾಗ ನಿಲ್ಲಬೇಕಾದರೆ 2 ಲಕ್ಷದ ಸಾಲ್ವೆನ್ಸಿ ಸರ್ಟಿಫಿಕೇಟ್ ತಂದುಕೊಡುತ್ತಾರೆ ಮತ್ತು ಬ್ಯಾಂಕ್ ಗ್ಯಾರಂಟಿ ತಂದುಕೊಡುತ್ತಾರೆ. ಇವು ಕೂಡ ಬೋಗಸ್ ಅಧ್ಯಕ್ಷರೇ. ಆದರಲ್ಲಿ ಕೂಡ ಇವರಿಗೆ ವಸೂಲಿ ಮಾಡಲಿಕ್ಕೆ ಬರಲಿಲ್ಲ. ಕಳೆದ ಹಲವಾರು ವರ್ಷಗಳಿಂದ ಬಾಕಿ. ಈ ರೀತಿ ಫರ್ಮ್ ಮಾಡಿಕೊಂಡು ಸರ್ಕಾರಕ್ಕೆ ಮಕ್‌ಮಲ್ ಟೋಪಿ ಎಳೆದು, ಸರ್ಕಾರದ ಬೊಕ್ಕಸಕ್ಕೆ ನಷ್ಟ ಮಾಡಲಿಕ್ಕೋಸ್ಕರ ಈ ರೀತಿ ಕುತಂತ್ರ ಮಾಡತಕ್ಕ ಜನರಿಗೆ ಸೌಲಭ್ಯ. ಇದರಲ್ಲಿ ಯಾರು ಯಾರು ಇದ್ದಾರೆ? ಪಾಲ್ ಟಿ.ಜಾನ್ ಇವರು ಈಗಾಗಲೇ ಹೇಳಿದ ಹಾಗೆ ಮಂತ್ರಿಗಳು ಇದ್ದಾರೆ. ಅವರು ಮಂತ್ರಿಗಳು ಹೌದೇ ಅಲ್ಲವೇ ಎಂದು ತಾವು ಹೇಳಬೇಕು. ರಮಾನಾಥ ರೈ ಅವರೇ, ಇವರು ನಿಮಗೆ ಗೊತ್ತೆ? ಕೊಡಗಿನ ನಾಣಯ್ಯನವರಿಗೆ ಗೊತ್ತಿರಬಹುದು.

ಶ್ರೀ ಎಂ.ಎಂ.ನಾಣಯ್ಯ: ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಪಾರ್ಟನರ್‌ಷಿಪ್ ಫರ್ಮ್ ಕಂಪನಿ ಆಕ್ಟ್ ಬಗ್ಗೆ ಹೇಳಿದ್ದಾರೆ. ಹೆಸರು ಮತ್ತು ಸ್ಥಳ ಬದಲಾವಣೆ ಮಾಡುವ ಬಗ್ಗೆ ಹೇಳಿದ್ದಾರೆ. ಇದೆರಡಕ್ಕೂ ಕಂಪನಿ ಆಕ್ಟ್‌ನಲ್ಲಿ ಅವಕಾಶ ಇದೆ. ಮತ್ತು ಪಾರ್ಟನರ್‌ಷಿಪ್ ಆಕ್ಟ್‌ನಲ್ಲಿಯೂ ಪ್ರಾವಿಷನ್ ಇದೆ. ಸರ್ಕಾರದ ಕಾನೂನಿನ ಪ್ರಕಾರ ಮಾಡಲಾಗಿದೆ, ಇದನ್ನು ಹೊಸದಾಗಿ ಮಾಡಿರುವುದಲ್ಲ. ಅವರು ಪಾಲ್ ಜಾನ್ ಯಾರು ಎಂದು ಕೇಳುತ್ತಾರೆ, ಅವರು ಮಂತ್ರಿಗಳಲ್ಲ. ಅವರು ಹೊರಗಡೆ ವ್ಯಾಪಾರ ಮಾಡುವವರು. ಪಾಲ್ ಜಾನ್ ಅವರು ಮಂತ್ರಿಗಳಲ್ಲ.

ಶ್ರೀ ಅರಗ ಜ್ಞಾನೇಂದ್ರ: ಇವರು ಮಂತ್ರಿಗಳ ಮಗನೇ.. ಇವರಿಗೂ, ಅವರಿಗೂ ಸಂಬಂಧ ಇದೆಯೋ ಇಲ್ಲವೋ...

ಶ್ರೀ ಎಂ.ಎಂ.ನಾಣಯ್ಯ: ಹೌದೋ ಅಲ್ಲವೋ ಎಂದು ಇದನ್ನು ವೆರಿಫೈ ಮಾಡಬೇಕು. ಇದರ ಬಗ್ಗೆ ವೆರಿಫೈ ಮಾಡಿ ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಇವರು ನಿಮ್ಮ ಜಿಲ್ಲೆಯವರು ಅಲ್ಲವೇ?

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಇವರು ಸ್ಪಷ್ಟವಾಗಿ ಹೇಳಿದ್ದಾರೆ. ಆ ವ್ಯಕ್ತಿ ಯಾರು? ಅವರು ನಿಮಗೆ ಗೊತ್ತಿಲ್ಲದೇ ಇದ್ದರೆ, ಕನಿಷ್ಟ ನಿಮ್ಮ ಜಿಲ್ಲೆಯವರು ಹೌದೋ ಅಲ್ಲವೋ. ಏಕೆ, ಅವರನ್ನು ಕೇಳಿದ್ದಾರೆಂದರೆ, ಅವರು ಎಕ್ಸೈಸ್ ಮಂತ್ರಿಗಳು.

ಶ್ರೀ ಕೆ.ಅಭಯಚಂದ್ರ: ಅವರು ಮಂತ್ರಿಗಳಲ್ಲ.

ಶ್ರೀ ಡಿ.ವಿ.ಸದಾನಂದಗೌಡ: ಅಭಯಚಂದ್ರರವರೇ, ನಿಮ್ಮ ವಕಾಲತ್ತು ಆಮೇಲೆ ಬರಲಿ. ನನ್ನ ವಕಾಲತ್ತು ಮೊದಲು ಬರಲಿ. ಪ್ರಾಮಾಣಿಕವಾಗಿ ಎಕ್ಸೈಸ್ ಡಿಪಾರ್ಟ್‌ಮೆಂಟನ್ನು ಹೊತ್ತಂಥ ಮಂತ್ರಿಗಳು, ಎಕ್ಸೈಸ್‌ಗೆ ಸಂಬಂಧಪಟ್ಟ ಒಂದು ಅಗ್ರಿಮೆಂಟ್ ಅದರೊಳಗೆ ಆಗಿದೆ. ಅದರ ಆಧಾರದಲ್ಲಿರುವ ಜನಗಳು ಈ ಸದನಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ಸಂಬಂಧಿಕರು ಹೌದೋ ಅಲ್ಲವೋ. ಹೆಚ್ಚಾಗಿ ನಮ್ಮ ಜ್ಞಾನೇಂದ್ರ ಅವರಿಗೆ ತಿಳಿದಿರುವ ಹಾಗೆ ಅವರು ಕೊಡಗು ಜಿಲ್ಲೆಯವರು. ಕೊಡಗು ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ತಾವಿದ್ದೀರಿ. ಕೊಡಗು ಜಿಲ್ಲೆಯ ಎಲ್ಲಾ ವಿಚಾರಗಳಗೂ ತಮಗೆ ಗೊತ್ತಿದೆ. ಆ ಕೊಡುಗು ಜಿಲ್ಲೆಯ ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಹಾಗೆ, ಎಕ್ಸೈಸ್ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಎಂಬ ಸಂಶಯದಿಂದ ನಮ್ಮ ಮಿತ್ರರಾದ ಜ್ಞಾನೇಂದ್ರರವರು ಕೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ನಿಮ್ಮ ಜಿಲ್ಲೆಯಲ್ಲಿ ನ್ಯಾಷನಲ್ ಡಿಸ್ಟಲರಿ ಅಂಡ್ ಅಲೈಡ್ ಪ್ರಾಡೆಕ್ಟ್ ಪ್ರೈವೇಟ್ ಲಿಮಿಟೆಡ್ ಎಂದು ಇವರು ಮಾಡಿದ್ದರೇ? ಇವತ್ತು ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಜಾನ್ ಡಿಸ್ಟಲರಿ ಹೆಸರು ಬದಲಾವಣೆಯಾಗಿದೆ. ನ್ಯಾಷನಲ್ ಡಿಸ್ಟಲರಿ 5.46 ಕೋಟಿ ತೆರಿಗೆ ಬಾಕಿ ಇದೆ. ಇದು ಹೌದೇ, ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಸಿ.ಬೈರೇಗೌಡ: ಅವರು ಸಿಂಡಿಕೇಟ್ ಮಾಡಿಕೊಂಡು ಏನು ಮಾಡಿದ್ದಾರೆ, ಸರ್ಕಾರಕ್ಕೆ ಏನಾದರೂ ನಷ್ಟ ಆಗಿದೆಯೇ? ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟವಾಗಿ ಹೇಳಿ. ಏಕೆಂದರೆ, ನಮಗೆ ಆ ವಿಚಾರ ಗೊತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ: 164 ಕೋಟಿ ರೂಪಾಯಿಗಳ ಮನ್ನಾ ಮಾಡಿದ್ದಾರಲ್ಲ. ಅದರಲ್ಲಿ ಈ ಸಿಂಡಿಕೇಟಿನದೇ.

ಚೇರ್ಮನ್: ತಾವು ಏನು ಹೇಳಬೇಕೋ ಅದನ್ನು ನೇರವಾಗಿ ಹೇಳಿ. ಏಕೆಂದರೆ, ಇನ್ನೂ ಮಾತನಾಡುವವರಿಗೆ ಸಮಯ ಬೇಕಾಗಿದೆ. ಚರ್ಚೆಗೆ ಇಳಿಯುವುದು ಬೇಡ.

ಶ್ರೀ ಅರಗ ಜ್ಞಾನೇಂದ್ರ: ಇವರ ಅಬ್ಜೆಕ್ಟ್, ಡಿಸ್ಟಲರಿ ಮಾಡುವಂಥಾದ್ದು, ಟೋಪಿ ಹಾಕುವಂಥಾದ್ದು, ಇದೆಲ್ಲಾ. ಈ ಮಸಲತ್ತು, ಇದನ್ನೆಲ್ಲಾ ತಮ್ಮ ಮೂಲಕ ಸರ್ಕಾರಕ್ಕೆ

ಕಳುಹಿಕೊಡುತ್ತೇನೆ. ಆಗ ನಿಮಗೆ ಏನಾದರೂ ತೃಪ್ತಿಯಾಗುತ್ತದಯೇ ಎಂದು ನೋಡಿ. ಇವತ್ತು ಈ ಪಾರ್ಟ್‌ನರ್‌ಷಿಪ್ ಡೀಡ್ ಏಪ್ರಿಲ್ 1991, ಇದು ನಿಮ್ಮ ಕಾಲದಲ್ಲೇ, ಇಂತಹ ಕೆಲಸಗಳು ಆಗುವುದೆಲ್ಲಾ ನಿಮ್ಮ ಕಾಲದಲ್ಲೇ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಲೇ ಇಂತಹ ಡೀಡ್‌ಗಳು ಮಾಡಿಕೊಂಡು ಅವರ ಬಹಳ ಜಬರ್‌ದಸ್ತ್ ಆಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದಸ್ಯರು ಇಂತಹವೆಲ್ಲಾ ನಡೆಯುವುದು ನಿಮ್ಮ ಕಾಲದಲ್ಲಿಯೇ ಎಂದು ಒಂದು ಗುಂಡು ಹಾರಿಸಿದರು. ಕಾಂಟ್ರಾಕ್ಟ್ ಕಾನೂನುಗಳು ಇವೆ, ಕಂಪನಿ ಕಾನೂನುಗಳು ಇವೆ, ಪಾರ್ಟನರ್‌ಷಿಪ್ ಆಕ್ಟ್ ಇದೆ. ಆ ಫರ್ಮ್ ಅಥವಾ ಕಂಪನಿ ಆಕ್ಟ್ ಪ್ರಕಾರವಾಗಿ ಒಂದು ಕಂಪನಿಯಲ್ಲಿ ಪಾರ್ಟನರ್‌ಷಿಪ್ ಬರುತ್ತದೆ. ಯಾರು ಬೇಕಾದರೂ, ಯಾರ ಕಾಲದಲ್ಲಿ ಬೇಕಾದರೂ ಇದನ್ನು ಮಾಡಿಕೊಳ್ಳಬಹುದು. ಅವೆಲ್ಲವೂ ಕೂಡ ಆಯಾ ಕಾನೂನಿನ ವ್ಯಾಪ್ತಿಯಲ್ಲಿ ಇರಬೇಕು. ಆ ಫರ್ಮ್‌ಗಳ ಮುಖಾಂತರ ಯಾರಾದರೂ ತಮ್ಮ ಸ್ಥಾನಮಾನವನ್ನು ದುರುಪಯೋಗ ಮಾಡಿಕೊಂಡು ಅನ್ ಡ್ಯೂ ಅಡ್ವಾನ್‌ಟೇಜ್ ತೆಗೆದುಕೊಂಡು, ಮಾಡಿದರೆ ಅದು ವಿಷಯಕ್ಕೆ ಅನ್ವಯಿಸುತ್ತದೆ. ಆದರೆ, ನಿಮ್ಮ ಕಾಲದಲ್ಲಿ ಪಾರ್ಟನರ್‌ಷಿಪ್ ಫರ್ಮ್ ಮಾಡಿದ್ದೇ ತಪ್ಪು, ಅದರಲ್ಲಿ ಇರುವುದೇ ತಪ್ಪು ಎಂದು ಹೇಳಿದರೆ. it is a subject matter for debate.

ಶ್ರೀ ಅರಗ ಜ್ಞಾನೇಂದ್ರ: ಪಾರ್ಟನರ್‌ಷಿಪ್ ಫರ್ಮ್ ಬೇಕಾದಷ್ಟು ಇವೆ. ನಾನು ಇದನ್ನು ಉಲ್ಲೇಖ ಮಾಡುವ ಉದ್ದೇಶ ಏನೆಂದರೆ, ಸರ್ಕಾರಕ್ಕೆ, ಸಾರ್ವಜನಿಕ ಬೊಕ್ಕಸಕ್ಕೆ ಟೋಪಿ ಹಾಕುವವರು ಮಾಡಿಕೊಂಡಿರತಕ್ಕ ಫರ್ಮ್ ಇದು. ಆ ಕೆಲಸವನ್ನು ಮಾಡಿದ್ದಾರೆ. ಡಿಸ್ಟಲರಿಯಲ್ಲಿ, ಬಾಕಿ ಉಳಿಸಿಕೊಂಡಿದ್ದ 164 ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವಲ್ಲ. ನಿಮಗೆ ನಷ್ಟ ಶೂನ್ಯ, ಪ್ರೊಡಕ್ಷನ್ ಏನೂ ಇಲ್ಲ, ನಮ್ಮ ಹತ್ತಿರ ಜೀರೋ ಪ್ರೊಡಕ್ಷನ್ ಎಂದು ತೋರಿಸಿದವರು ಎಲ್ಲಾ ಇದರಲ್ಲೇ ಇರುವುದು. ಇವರೆಲ್ಲಾ ಸೇರಿ ಫರ್ಮ್ ಮಾಡಿಕೊಂಡಿದ್ದು. ಈಗಾಗಲೇ ನಾನು ಹೇಳಿದೆ, ಜಾನ್ ಡಿಸ್ಟಲರಿ, ನ್ಯಾಷನಲ್ ಡಿಸ್ಟಲರಿ ಅಂಡ್ ಅಲೈಡ್ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್ ಅದನ್ನು ಮುಚ್ಚಿ ಕೊಡಗಿನಲ್ಲಿ, ಕುಶಾಲನಗರದಲ್ಲಿ.

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಆರ್ಗ್ಯುಮೆಂಟ್ ನಮಗೆ ಕಾಂಪೀಟ್ ಆಗುತ್ತಾ ಇಲ್ಲ. ನೀವು ಏನು ಹೇಳಬೇಕೆಂದು ನಿಮ್ಮ ಮನಸ್ಸಿನ ಒಳಗೆ ಇದೆಯೋ, ಅದು ಹೊರಕ್ಕೆ ಬರುವಾಗ ತಡೆದು ಬರುತ್ತಿದೆ.

4.50 ಪಿ.ಎಂ

ಶ್ರೀ ಅರಗ ಜ್ಞಾನೇಂದ್ರ: ಅಲ್ಲಿ ಸರ್ಕಾರಕ್ಕೆ ಕೊಡುವ ತೆರಿಗೆ ಬಾಕಿ ಇಟ್ಟುಕೊಂಡರು.

ಇಲ್ಲಿ ಬಂದು ಬೇರೆ ಜಾನ್ ಡಿಸ್ಟಿಲರಿ ಅಂತ ಮಾಡಿದರು. ಬಾಕಿ ವಸೂಲಿ ಮಾಡಬೇಕೆಂದು ಹೇಳಿ ಭಾರಿ ಕಟ್ಟುನಿಟ್ಟಿನ ಆಜ್ಞೆಯನ್ನು ಶ್ರೀ ತಂಗರಾಜು ಐ.ಎ.ಎಸ್. ಅಧಿಕಾರಿ ಒಂದು ಆಜ್ಞೆಯನ್ನು ಹೊರಡಿಸಿದರು. ಹಳೆ ಬಾಕಿಯನ್ನು ವಸೂಲಿ ಮಾಡಬೇಕು ಅಂತ ಹೇಳಿ, ಅವರು ಈ ಆಜ್ಞೆಯಲ್ಲಿ ಉಲ್ಲೇಖ ಮಾಡುತ್ತಾರೆ. 'ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ವೇದಿಕೆಗಳಲ್ಲಿ ಅಬಕಾರಿ ಬಾಕಿ ಸಂಬಂಧದಲ್ಲಿ ಇಲಾಖೆ ಅತ್ಯಂತ ನಿರ್ದಯವಾಗಿ ಟೀಕೆಗೆ ಒಳಪಡುತ್ತಿದೆ. ಸಾಮಾನ್ಯವಾಗಿ ಇಲಾಖೆಯ ದಕ್ಷತೆಯನ್ನು ಬಾಕಿ ವಸೂಲಾತಿಯ ಮೇಲೆ ಅಳೆಯಲಾಗುತ್ತಿದೆ. ಆದ್ದರಿಂದ ಅತಿ ಹೆಚ್ಚು ಪ್ರಾಮುಖ್ಯತೆಯನ್ನು ಈ ಬಾಕಿ ವಸೂಲಾತಿಯಲ್ಲಿ ನೀಡಲಾಗುತ್ತದೆ. ಈ ಸಂಬಂಧದಲ್ಲಿ ಕೆಳಗೆ ನಮೂದಿಸಿರುವ ಅಬಕಾರಿ ಕಾಯ್ದೆ ಕಲಂ 65, 63, 64ರ ಕಡೆಗೆ ಗಮನ ಸೆಳೆಯಲಾಗಿದೆ.

ಶ್ರೀ ಡಿ.ವಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದರು ಇದರ ವಿಚಾರಗಳು ಸರಿಯಾಗಿ ಹೊರಗೆ ಬರುತ್ತಿಲ್ಲ ಅಂತ, ನಿಜ. ಅವರನ್ನು ನಾವು ಶ್ಲಾಘನೆ ಮಾಡಬೇಕು. ಬೇನಾಮಿ ಹೆಸರಿನಲ್ಲಿ ಸರ್ಕಾರದ ಹಣವನ್ನು ಲೂಟಿ ಹೊಡೆಯುವಂತಹ ಜನರು ಇವತ್ತು ಅಧಿಕಾರ ಹಿಡಿದು ಸದನದಲ್ಲಿ ಕುಳಿತುಕೊಂಡಿದ್ದಾರೆ ಎಂದು ಮಾನ್ಯ ಅರಗ ಜ್ಞಾನೇಂದ್ರ ಅವರು ಅಂಕಿಅಂಶಗಳ ಮುಖಾಂತರ ಹೇಳುತ್ತಿದ್ದಾರೆ. ಯಾರು ಬೇನಾಮಿ ಹೆಸರಿನಲ್ಲಿ ಸರ್ಕಾರಕ್ಕೆ ಬರಬೇಕಾದ ತೆರಿಗೆಗಳನ್ನು ಪಾವತಿ ಮಾಡಬೇಕಾಗಿತ್ತೋ ಅದನ್ನು ಮಾಡದೇ, ಇಲ್ಲಿಗೆ ಬರಬೇಕಾದಾಗ ಅವರು ಆ ಹೆಸರನ್ನು ಬದಲಾಯಿಸಿ ಸರ್ಕಾರಕ್ಕೆ ಪಂಗನಾಮ ಹಾಕಿದವರು ಇಲ್ಲಿ ಕುಳಿತುಕೊಂಡಿದ್ದಾರೆ ಅಂತಹವರಿಗೆ ತಾವು ರಕ್ಷಣೆ ಕೊಡುತ್ತಿದ್ದೀರಿ. ತಾವು ಪಾರದರ್ಶಕ ಸರ್ಕಾರವನ್ನು ಕೊಡುತ್ತೇವೆ, ಯಾರು ಭ್ರಷ್ಟರು ಇದ್ದಾರೆ ಅವರನ್ನು ನಾವು ದೂರ ಇಡುತ್ತೇವೆ ಎಂದು ಹೇಳಿದವರು, ತಾವು ಆದರೆ ಅಂತಹವರಿಗೆ ಇವತ್ತು ಮಣೆ ಹಾಕಿ ದೊಡ್ಡ ದೊಡ್ಡ ಸ್ಥಾನ ಮಾನಗಳನ್ನು ಕೊಡುತ್ತಿದ್ದೀರಿ ಎಂದು ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರ ಪ್ರಶ್ನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಅವರು ಹೇಳುವುದನ್ನು ಬಿಟ್ಟು, ಇವರು ಅದಕ್ಕೆ ಇನ್ನೊಂದು ರೀತಿ ಉಪ್ಪು ಖಾರ ಹಾಕಿ ಹೇಳುವುದಕ್ಕೆ ಹೊರಟರು. ಏಕೆಂದರೆ ನಾವು ಇಲ್ಲಿ ಕುಳಿತಿದ್ದೇವೆ, ನಮಗೂ ಅರ್ಥವಾಗಬೇಕಲ್ಲ. ಅವರು ಸುಮ್ಮನೇ ಹೇಳಿಬಿಟ್ಟರು. ಅದು ಹೇಗೆ ಏನು ಅಂತ ನನಗೂ ಅರ್ಥವಾಗಲಿಲ್ಲ. ಅದಕ್ಕೋಸ್ಕರ ಖಚಿತವಾಗಿ ಏನಾದರೂ ಇದ್ದರೆ ಹೇಳಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, 5.46 ಕೋಟಿ ರೂಪಾಯಿಗಳಿಗೆ ಅಲ್ಲಿ ಟೋಪಿ ಹಾಕಿ ಡಿಸ್ಟಿಲರಿ ಹೆಸರನ್ನು ಚೇಂಜ್ ಮಾಡಿಕೊಂಡು ಜಾನ್ ಡಿಸ್ಟಿಲರಿ ಅಂತ ಹೇಳಿ ಬೆಂಗಳೂರಿನಲ್ಲಿ ತಂದು ಇಟ್ಟು, ಇಲ್ಲೂ ಕೂಡ 41 ಲಕ್ಷ ಪಂಗನಾಮ ಹಾಕಿದ್ದಾರೆ.

ಇದು ಸರ್ಕಾರಕ್ಕೆ ಕೊಡಬೇಕಾದಂತಹ ಬಾಕಿ. ಅವರಿಗೆ ಬಳುವಳಿ ಏನು ತಾವು ಕೊಟ್ಟಿದ್ದು? ಆ ಬಾಕಿ ಹಣವನ್ನು ವಸೂಲಿ ಮಾಡಬಾರದಾಗಿತ್ತಾ? ತಾವೆಲ್ಲ ಮಾಜಿ ಮಂತ್ರಿಗಳಾಗಿದ್ದವರು. ನಮ್ಮ ವಿಪ್ ನಾಡಗೌಡರು ಇದ್ದರಲ್ಲ ಅವರ ಬಾಕಿ ಹೇಗೆ ವಸೂಲಿ ಆಯಿತು? ಇವರದ್ದು ತಾವು ಕೋಟಿಗಟ್ಟಲೆ ಹಣವನ್ನು ಮನ್ನಾ ಮಾಡುತ್ತೀರಿ. ನಿಮ್ಮ ಪಾರ್ಟಿ ಮಂತ್ರಿಗಳು ಏನು ಮಾಡಿದ್ದರು ಅವರು ನಿಮ್ಮ ಪಕ್ಷದವರು ಅಲ್ಲವೇ? ಅವರು ಕಾರು ಅಡ್ಡಗಟ್ಟಿದರು. ಅವರು ಡಿಸ್ಟಿಲರಿ ಮಾಲೀಕರು ಅಲ್ಲ ಪಾಪ. ಅದಕ್ಕಾಗಿ ವಸೂಲಿ ಆಯಿತು. ಅವರು ಬಾಕಿ ಕೊಡಬೇಕೆಂದು ಹೇಳಿ ಕೋರ್ಟ್ ಆರ್ಡರ್ ಆಯಿತು, ಅವರು ಒಂದು ಲಕ್ಷ ರೂಪಾಯಿಗಳನ್ನು ಕಟ್ಟಿದ್ದರು. ಅವರು ಬಾಕಿ ಕಟ್ಟಿದ ದಾಖಲಾತಿಯನ್ನು ತೋರಿಸಿದರು ಬಿಡಲಿಲ್ಲ.

ಶ್ರೀ ಸಿ ಬೈರೇಗೌಡ: ಅವರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮನೆ ಬಾಡಿಗೆ ಮರಮುಟ್ಟು ಇದರ ಬಾಕಿ ಕೊಡಬೇಕಾಗಿತ್ತು, ಆ ಬಗ್ಗೆ ಅವರು ಮಾತನಾಡುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಮಂತ್ರಿಗಳು ಕೊಡಬೇಕಾದ ಬಾಕಿ ಬಗ್ಗೆ ಕೋರ್ಟ್ ಆರ್ಡರ್ ಆಯಿತು, ಆ ವಸೂಲಾತಿಯನ್ನು ಬಹಳ ಕಡ್ಡಾಯವಾಗಿ ಮಾಡಿದರು. ಪಾಪ ನಮ್ಮ ಮಾಜಿ ಮಂತ್ರಿಗಳು ಕಟ್ಟಿದರು ಅದರಲ್ಲಿ ಏನೂ ಇಲ್ಲ. ಆ ರೀತಿ ಕಡ್ಡಾಯವಾಗಿ ಇವರ ಬಾಕಿಯನ್ನು ಏಕೆ ವಸೂಲಿ ಮಾಡಬಾರದಾಗಿತ್ತು ಅಂತ ನನ್ನ ಪ್ರಶ್ನೆ. ಸರ್ಕಾರದಲ್ಲಿ ಏನಾಗಿದೆ ನಮ್ಮ ಅಧಿಕಾರಿಗಳಿಗೆ ಏಕೆ ಮಾಡಲಿಲ್ಲ? ಇವರು ದಿವಾಳಿಯಾಗಿದ್ದರೆ ಅಡ್ಡಿ ಇಲ್ಲ. ಅವರೆಲ್ಲ ಚೆನ್ನಾಗಿದ್ದಾರೆ. ಸಾಕಷ್ಟು ಆಸ್ತಿ ಮಾಡಿದ್ದಾರೆ. ಅವರು ತಲೆ ತಲಾಂತರದವರೆಗೂ ಕುಳಿತು ತಿನ್ನುವಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಅವರ ಬಾಕಿ ವಸೂಲಾತಿ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ. ನಮ್ಮ ಆಶ್ರಯ ಮನೆಯವರಿಗೆ ನೀವು ನೋಟೀಸ್ ಕೊಡುವುದಕ್ಕೆ ಹೊರಟಿದ್ದೀರಿ. ಅವರ ಮನೆಗಳನ್ನು ಜಪ್ತಿ ಮಾಡುವುದಕ್ಕೆ ಹೊರಟಿದ್ದೀರಿ. ಇವರಿಗೆ 163 ಕೋಟಿಯನ್ನು ಮನ್ನಾ ಮಾಡುತ್ತೀರಿ? ನಾನು ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕೇಳುತ್ತೇನೆ, ತಾವು ಇವತ್ತು ಅಧಿಕಾರದಲ್ಲಿದ್ದೀರಿ ತಮ್ಮ ಮುಖ್ಯಮಂತ್ರಿಗಳು ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿರತಕ್ಕಂಥವರು. ಇವರಿಗೆ 163 ಕೋಟಿ ರೂಪಾಯಿಗಳನ್ನು ಮನ್ನಾ ಮಾಡುವ ಪ್ರಸ್ತಾವವನ್ನು ಬಜೆಟ್‌ನಲ್ಲಿ ಇಟ್ಟಿದ್ದೀರಲ್ಲ ಇವರಿಗೆ ಏಕೆ ಮಾಡಲಿಲ್ಲ? ಕಾಗೋಡು ಸತ್ಯಾಗ್ರಹ ನಡೆದು 50ವರ್ಷಗಳು ಆಯಿತು. ಇವತ್ತು ಈ ಬಗ್ಗೆ ಬಹಳ ಲೇಖನಗಳು ಬರುತ್ತಿವೆ. ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ತಾವು ಸಾರ್ವಜನಿಕವಾಗಿ ಬೆಳೆದಿರುವಂಥಾದ್ದು ಅಲ್ಲಿಂದ. ಇವತ್ತು ತಾವೆಲ್ಲಾ ಅಧಿಕಾರದಲ್ಲಿದ್ದೀರಿ, ಆಗ ಉಳುವವನೇ ಹೊಲದೊಡೆಯ ಅಂತ ಹೇಳಿ ಗೇಣಿ ರೈತರದ್ದು ಒಂದಷ್ಟು ಹಣ ಬಾಕಿ ಇದೆಯಲ್ಲ ಆ ಹಣ ಇಡೀ ರಾಜ್ಯದಲ್ಲಿ 10-15 ಕೋಟಿ ಆಗಬಹುದು, ಅದಕ್ಕಿಂತ ಜಾಸ್ತಿ ಇರಲಿಕ್ಕೆ ಇಲ್ಲ ನನಗೆ ತಿಳಿದ ಮಟ್ಟಿಗೆ, ಕಾಗೋಡು ಸತ್ಯಾಗ್ರಹದ 50 ನೇ ವರ್ಷದ ಕೊಡುಗೆ ಅಂತ ಹೇಳಿ ಇವರ ಈ ಬಾಕಿ ಹಣವನ್ನು ಏಕೆ ಮನ್ನಾ ಮಾಡಬಾರದು? ಈ

ಬಗ್ಗೆ ಏಕೆ ಘೋಷಣೆ ಮಾಡಬಾರದು? ಹಾಗೆ ಮಾಡಿದ್ದರೆ ಅವರಿಗೆ ಎಷ್ಟು ಸಂತೋಷವಾಗುತ್ತಿತ್ತು, ಎಷ್ಟು ಸಾವಿರ ಕುಟುಂಬಗಳು ಇವತ್ತು ತಮ್ಮ ಸೆರು ಹೇಳುತ್ತಿದ್ದರು? ಅವರ ಬಾಕಿಯನ್ನು ಏಕೆ ಮನ್ನಾ ಮಾಡಲಿಲ್ಲ? ಇಲ್ಲಿ ಕೋಟ್ಯಾಧಿಪತಿಗಳ ಬಾಕಿ ಹಣವನ್ನು ಮನ್ನಾ ಮಾಡುವುದರಲ್ಲಿ ನೀವು ಸಂತೋಷ ಕಾಣುತ್ತೀರಿ, ಏನು ಸಂತೋಷ ನಿಮಗೆ? ಏನು ಉದ್ದೇಶ ನಿಮಗೆ? ಬಡವರ ಬಾಕಿ ಹಣವನ್ನು ಏಕೆ ಮನ್ನಾ ಮಾಡುವುದಿಲ್ಲ? ಆಶ್ರಯ ಮನೆಗಳ ಯೋಜನೆಯಲ್ಲಿ ಸಾಲದ ಕಂತನ್ನು ಪಾವತಿ ಮಾಡದೇ ಇರತಕ್ಕಂಥವರದ್ದು ಜಫ್ತಿ ಮಾಡುತ್ತೀರಿ, ಅವರೆಲ್ಲಾ ಕೂಲಿಕಾರರು ಕಾರ್ಮಿಕರು, ದಲಿತರು ಆ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರ ಹಣವನ್ನು ಮನ್ನಾ ಮಾಡಬಹುದಿತ್ತು. ಈ ಮಾತನ್ನು ತಾವು ಹೇಳಿದ್ದರೆ ಬಹುಶಃ ನಿಮ್ಮ ಸರ್ಕಾರಕ್ಕೆ ಇನ್ನಷ್ಟು ಶಕ್ತಿ ಬರುತ್ತಿತ್ತು. ಆ ಜನರು ನಿಮಗೆ ಮತ ಕೊಟ್ಟು ಕಳುಹಿಸಿದ್ದಾರೆ. ಅವರ ಬಾಕಿಯನ್ನು ಮನ್ನಾ ಮಾಡಿದ್ದರೆ ಹೌದಪ್ಪ ನಾವು ಒಂದು ಮತ ನೀಡಿದೆವು ನಮ್ಮ ಸಾವಿರಾರು ರೂಪಾಯಿಗಳ ಹಣ ಮನ್ನಾ ಮಾಡಿದರು ಎನ್ನುವ ಸಂತೋಷ ಇರುತ್ತಿತ್ತು. ಇದು ನಮ್ಮ ಸರ್ಕಾರ ನಾವು ಮತ ಕೊಟ್ಟು ಕಳುಹಿಸಿದ ಸರ್ಕಾರ ಎನ್ನುವ ಅಭಿಮಾನ ಪಡುತ್ತಿದ್ದರು. ದಲಿತರ ಮತ ಬೇಕು ನಿಮಗೆ, ಸೌಲಭ್ಯಗಳನ್ನು ಡಿಸ್ಟಿಲರಿ ಮಾಲೀಕರಿಗೆ ಕೊಡುತ್ತೀರಿ, ಅವರ ಬಾಕಿಯನ್ನು ಮನ್ನಾ ಮಾಡುತ್ತೀರಿ, ಅವರು ಇಂತಹ ಪಾಟ್ನರ್‌ಷಿಪ್ ಡೀಡ್ ಮಾಡಿಕೊಂಡು, ಮತ್ತೊಂದು ಮಾಡಿಕೊಂಡು ಸರ್ಕಾರಕ್ಕೆ ಪಂಗನಾಮ ಹಾಕುತ್ತಲೇ ಇದ್ದಾರೆ. ಅಂತಹವರಿಗೆ ತಾವು ಅವಕಾಶ ಮಾಡಿಕೊಡುತ್ತೀರಿ, ಇವರಿಗೆ ನೀವು ಏನು ಬಳುವಳಿಯನ್ನು ಕೊಟ್ಟಿದ್ದೀರಿ? ಸರ್ಕಾರಕ್ಕೆ ಪಂಗನಾಮ ಹಾಕಿರತಕ್ಕಂಥವರನ್ನು ಕರೆದುಕೊಂಡು ಬಂದು ಮಂತ್ರಿ ಮಾಡಿ ಕೂರಿಸುತ್ತೀರಿ. ನಿಮಗೆ ನೈತಿಕ ಹಕ್ಕು ಇದೆಯೇ? ಹಳ್ಳಿಯಲ್ಲಿ ಒಬ್ಬ ಅಧಿಕಾರಿ 10 ರೂಪಾಯಿ ಲಂಚ ಕೇಳಿದ, ಹಳ್ಳಿಯಲ್ಲಿ ಒಬ್ಬ ವಿಲೇಜ್ ಅಕೌಂಟೆಂಟ್ 25ರೂಪಾಯಿ ಲಂಚ ಕೇಳಿದ ಅಂತ ಹೇಳಿ ಅವನನ್ನು ದಬಾಯಿಸುತ್ತೇವೆ. ಇದು ಭಾರಿ ದೊಡ್ಡ ಲಂಚ ಅಂತ ಹೇಳಿ, ಇದೇನು ಇದು, ಹಾಗಾದರೆ ಈ ಭ್ರಷ್ಟಾಚಾರ ಏನು? ಇಂತಹವರನ್ನು ಮಂತ್ರಿ ಮಾಡಿ ಕೂರಿಸಿದರೆ ಯಾರಾದರೂ ಅಧಿಕಾರಿ ವಸೂಲಿಗೆ ಹೋಗುತ್ತಾರೆಯೇ ಅಧ್ಯಕ್ಷರೇ, ಆ ಅಧಿಕಾರಿಗಳಿಗೆ ಧೈರ್ಯ ಬರುತ್ತದೆಯೇ? ಆ ಲಾಬಿ ಎಷ್ಟು ಪ್ರಬಲವಾಗಿ ಇವತ್ತು ನಿಮ್ಮನ್ನು ಆಟ ಆಡಿಸುತ್ತಿದೆ? ಇವತ್ತು ಹೆಂಡದ ದೊರೆಗಳಿಗೆ ಲಾಭ ಮಾಡಿಕೊಡುವಂತಾದ್ದು. ಆಮೇಲೆ ಟಿ.ಕೆ.ಇನ್‌ಸ್ಟಿಟ್ಯೂಟ್ ಆಫ಼್ ಟೆಕ್ನಾಲಜಿ, ನಾಯಂಡಳ್ಳಿ, ಇದೇ ಟಿ.ಜಾನ್, ಗೆ ಇಂಜೀನಿಯರಿಂಗ್ ಕಾಲೇಜು, 1992-93ರಲ್ಲಿ

ಛೇರ್ಮನ್: ತಾವು ಯಾರಾದರೂ ಮಂತ್ರಿಗಳ ಹೆಸರು ಪ್ರಸ್ತಾಪ ಮಾಡಬೇಕಾದರೆ ಮೊದಲು ನೋಟೀಸ್ ಕೊಡಬೇಕು. ನೋಟೀಸ್ ಕೊಡದೇ ಪ್ರಸ್ತಾಪ ಮಾಡುವಂತಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ಈಗ ಇಂಜಿನಿಯರಿಂಗ್ ಕಾಲೇಜು ಕೊಟ್ಟಿದ್ದಾರೆ. ಇವರು

ಯಾರು ಅಂತ ತಾವೇ ಹೇಳಬೇಕು ನಮಗೆ ಗೊತ್ತಿಲ್ಲ. ಇವರು ಈ ಕಾಲೇಜನ್ನು ಎಲ್ಲಿ ಪ್ರಾರಂಭ ಮಾಡಿದ್ದಾರೆ? ನನ್ನ ಹತ್ತಿರ ಒಂದು ವರದಿ ಇದೆ. ಈ ಡಿಸ್ಟಿಲರಿ ಶೆಡ್‌ನಲ್ಲಿ ಇಂಜೇನಿಯರಿಂಗ್ ಕಾಲೇಜು. ಇವರು ಯಾವುದೇ ಪ್ರಾಥಮಿಕ ಅಗತ್ಯತೆಗಳನ್ನು ಪೂರೈಸಿಲ್ಲ. ಆದರೂ ಇವರ ರೆಕಗ್ನಿಷನ್ ಅನ್ನು ರದ್ದು ಮಾಡಲಿಲ್ಲ. ಕಾಲೇಜು ನಡೆಯುತ್ತಿದೆ. ನಾನು ಕೇಳುತ್ತೇನೆ ಇವತ್ತು ಈ ಇಂಜಿನೀಯರಿಂಗ್ ಕಾಲೇಜಿನಲ್ಲಿ ಶರಾಬು ತಯಾರು ಮಾಡುವ ಸಬ್ಜೆಕ್ಟ್‌ನ್ನು ಹೇಳಿ ಕೊಡುತ್ತಾರೆಯೇ? ಎಲ್ಲರಿಗೂ ಕೂಡ ನಾವು ಕಾನೂನು ಹೇಳುತ್ತೇವೆ. ಇವರಿಗೆ ಇದರಿಂದ ಲಾಭ ಆಗುವುದಿಲ್ಲವೇ? ಇವರು ಯಾವುದೇ ಪ್ರಾಥಮಿಕ ಅಗತ್ಯಗಳನ್ನು ಪೂರೈಸಿರುವುದಿಲ್ಲ. ಅಲ್ಲಿ 2.5 ಎಕರೆ ಜಾಗ ಇದೆ. ಪ್ರಮೋದ್ ಫುಡ್ ಪ್ರಾಡಕ್ಟ್ ಅವರ ಎರಡೂವರೆ ಎಕರೆ ಜಾಗವನ್ನು ಮೂರು ವರ್ಷಕ್ಕೆ ಲೀಸ್‌ಗೆ ತೆಗೆದುಕೊಂಡಿದ್ದಾರೆ. ಅವರು ಯಾವುದೇ ಅಗತ್ಯತೆಗಳನ್ನು ಪೂರೈಸಿಲ್ಲ. ಸಮರ್ಪಕವಾಗಿ ಒಂದು ಇಂಜಿನೀಯರಿಂಗ್ ಕಾಲೇಜು ನಡೆಸುವಂತಹ ವ್ಯವಸ್ಥೆ ಆಗಿಲ್ಲ. ವಿದ್ಯಾರ್ಥಿಗಳಿಂದ ಹಣ ಹೊಡೆಯುವುದಕ್ಕಾಗಿ ಇಂಜಿನೀಯರಿಂಗ್ ಕಾಲೇಜು. ಇದೇ ಡಿಸ್ಟಿಲರಿ ಮಾಲೀಕರಿಗೆ ಈ ಕಾಲೇಜು ಕೊಟ್ಟಿದ್ದೀರಿ. ಇವರು ಮಕ್ಕಳು ಥಾಮಸ್ ಟಿ.ಜಾನ್ ಮತ್ತು ಇನ್ನೊಬ್ಬರು. ಇಬ್ಬರು ಕೂಡ ಜಮೀನು ಖರೀದಿ ವ್ಯವಹಾರದಲ್ಲಿ ಸ್ಟಾಂಪ್ ಡ್ಯೂಟಿಯನ್ನು ಕೊಟ್ಟಿಲ್ಲ. ಇವತ್ತು ಕೂಡ ಕೇಸ್ ನಡೆಯುತ್ತಿದೆ. ಯಾವುದೋ ಒಂದು ರಸ್ತೆ ಕಡೆ ಮುಖ ಮಾಡಿದ್ದೇವೆ ಅಂತ ಹೇಳಿ ಸ್ಟಾಂಪ್ ಡ್ಯೂಟಿಯನ್ನು ಲಪಟಾಯಿಸುವುದಕ್ಕೆ ವ್ಯವಸ್ಥೆ ಮಾಡಿರತಕ್ಕಂಥಾದ್ದು. ನನ್ನ ಹತ್ತಿರ ದಾಖಲಾತಿ ಇದೆ. ನಾನು ಇದನ್ನು ತಮಗೆ ಕಳುಹಿಸಿ ಕೊಡುತ್ತೇನೆ. ಇವರು ಯಾರು? ಇಂತಹ ದೊರೆಗಳಿಗೆ ಏಕೆ ಸರ್ಕಾರ ನಮಸ್ಕಾರ ಹಾಕಿಕೊಂಡು ಕೆಲಸ ಮಾಡುತ್ತಿದೆ? ಇದು ನಿಮ್ಮ ಸರ್ಕಾರಕ್ಕೆ ಶೋಭೆ ತರತಕ್ಕಂಥ ಸಂಗತಿಯೇ? ಇವತ್ತು ಅನೇಕ ಜನ ಶಾಸಕರು ಮಂತ್ರಿಗಳಾಗುವುದಕ್ಕೆ ಅರ್ಹರಿದ್ದಾರೆ. ನಮ್ಮ ಮಾನ್ಯ ಮುದ್ದಹನುಮೇಗೌಡರು ಆಗಾಗ ಸರ್ಕಾರದ ಪರವಾಗಿ ಸಮರ್ಥನೆ ಮಾಡಿಕೊಳ್ಳುತ್ತಾರೆ ಅವರು ಏನೂ ಮಾಡುವುದಕ್ಕೆ ಆಗಲಿಲ್ಲ. ಅವರು ಮೊದಲನೇ ಸಲ ಮಂತ್ರಿಯಾಗುತ್ತಾರೆಂದು ನಾವು ತಿಳಿದಿದ್ದೆವು. ಆದರೆ ಆಗಲಿಲ್ಲ. ಆದರೆ ಈಗಲೂ ಸಮರ್ಥನೆ ಮಾಡಿಕೊಳ್ಳುತ್ತಾರೆ. ನಮ್ಮ ಕರಿಯಣ್ಣನವರು ದಲಿತರು, ಅವರು ನನ್ನ ಸ್ನೇಹಿತರು, ಅವರು ನಗುತ್ತಿದ್ದಾರೆ. ಈ ರೀತಿಯಲ್ಲಿ ನಿಮ್ಮ ಸರಕಾರ ಶೋಭೆ ತರತಕ್ಕಂಥ ನಿಟ್ಟಿನಲ್ಲಿ ಪ್ರಯತ್ನ ನಡೆಯುತ್ತಾ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣಕ್ಕೂ ನಿಮ್ಮ ನಡವಳಿಕೆಗೂ ಅಜಗಜಾಂತರದ ವ್ಯತ್ಯಾಸವಿದೆ. ನಿಮ್ಮ ಬಗ್ಗೆ ಇಡೀ ರಾಜ್ಯದ ಜನರ ಯೋಚನೆ ಮಾಡುತ್ತಿದ್ದಾರೆ. ಮೊನ್ನೆಯ ದಿವಸ ಮಲ್ಯರವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಅದು ನಮ್ಮ ಮಾನ್ಯ ಮುಖ್ಯಮಂತ್ರಿಯವರ ಕುರಿತಾಗಿ ಇತ್ತು. ಅದನ್ನು ಓದಿ ನಮಗೆ ಬಹಳ ನೋವು ಉಂಟಾಯಿತು. ಸಾರ್ವಜನಿಕ ಜೀವನದಲ್ಲಿರತಕ್ಕಂಥ ಜನಗಳು ಎಷ್ಟು ಮಕ್ಕರ ಮಾಡಬಹುದು? ಎಷ್ಟು ಗೇಲಿ ಮಾಡಬಹುದ? ಎಂದು ಯೋಚಿಸುವಂತಾಯಿತು. ''ನನ್ನ ಹೆಂಡದ ಉತ್ಪಾದನೆಯನ್ನು ನನ್ನ ಸಂಸ್ಥೆಯ

ಉತ್ಪಾದನೆಯನ್ನು ಕೃಷ್ಣ ಮತ್ತು ಅವರ ಪಕ್ಷವು ಯಾವರೀತಿಯಲ್ಲಿ ಬಳಸಿಕೊಂಡಿದೆ? ಎಂದು ಹೇಳಿದ್ದಾರೆ. ಅದಕ್ಕೆ ಸರಿಯಾಗಿರತಕ್ಕಂಥ ಪ್ರತಿಕ್ರಿಯೆಯನ್ನು ನೀವು ಕೊಡಬೇಕಾಗಿತ್ತು. ರಾಜಕೀಯ ಪಕ್ಷಗಳು ಮತ್ತು ರಾಜಕೀಯ ಕಾರ್ಯಕರ್ತರು ಇವೊತ್ತು ನಗೆಪಾಟಲಿಗೆ ಗುರಿಯಾಗಿರತಕ್ಕಂಥಾದ್ದು ಇದೇ ವ್ಯವಸ್ಥೆಯಿಂದ. ಅದಕ್ಕಾಗಿಯೇ ಅವರು ನೀವೇ ಏಕೆ ಮಂತ್ರಿಯಾಗಿರುವುದು? ನಾನು ಕೂಡ ರಾಜಕೀಯ ಪ್ರವೇಶ ಮಾಡುತ್ತೇನೆ ಅಂತ ಹೇಳಿ ಬಂದಿರಬಹುದು. ಆದರೆ ಈ ರೀತಿಯ ಹೇಳಿಕೆಗಳಿಂದ ನಮ್ಮ ಸಾರ್ವಜನಿಕ ಜೀವನದ ಮೌಲ್ಯಗಳು ಕುಸಿದು ಹೋಗುತ್ತಿವೆ. ಹೀಗೆ ಏಕೆ ಆಗುತ್ತಿದೆ? ಇದನ್ನು ಪರಿರ್ವನೆ ಮಾಡುವುದು ಹೇಗೆ? ಇದರ ಬಗ್ಗೆ ನಾವು ಸಾಮಾಜಿಕ ಪರಿವರ್ತನೆಯನ್ನು ಮಾಡಬೇಕಾಗುತ್ತದೆಯಲ್ಲವೆ?

ಶ್ರೀ ಕೆ.ಹೆಚ್.ರಂಗನಾಥ್: ಹಾಗೆ ಹೇಳಿಕೆ ಕೊಟ್ಟವರು ಯಾರು?

ಶ್ರೀ ಅರಗಜ್ಞಾನೇಂದ್ರ: ಯಾರು ಎಂದು ಕೇಳಲು ಹೇಳಿಕೆ ಕೊಟ್ಟವರು ನಗಣ್ಯ ವ್ಯಕ್ತಿಯೆ? ಯು.ಬಿ.ಮಲ್ಯರವರು ನಗಣ್ಯವ್ಯಕ್ತಿ ಎಂದು ಪರಿಗಣಿಸಲ್ಪಟ್ಟವರೆ?

ಶ್ರೀ ಕೆ.ಹೆಚ್.ರಂಗನಾಥ್: ನಾವು ಅವರ ಮುಖ ನೋಡಿಲ್ಲ. ತಮಗೆ ಅವರು ಪರಿಚಿತರು ಹಾಗೂ ತಾವುಗಳು ನೋಡಿರಬಹುದು. ಇಂಥ ವಿಚಾರಗಳು ಮಾತನಾಡಲು ಮತ್ತು ಕೇಳಲು ಚೆನ್ನಾಗಿ ಇರುತ್ತವೆ. ದಿನವೂ ಯಾರೋ ಹೇಳಿಕೆ ಕೊಡುತ್ತಿರುತ್ತಾರೆ ಎಂದು ಮುಖ್ಯಮಂತ್ರಿಯವರು ಅದಕ್ಕೆ ಉತ್ತರ ಕೊಡುತ್ತಾ ಕುಳಿತುಕೊಳ್ಳಲು ಸಾಧ್ಯವೆ? ಹಾಗೆ ನೀವು ಕೊಡುತ್ತೀರಾ? ನಿಮ್ಮ ಪ್ರಧಾನಿಗಳು ಕೊಡುತ್ತಾರೆಯೇ? ಅದು ಸಾಧ್ಯವಾಗುವುದಿಲ್ಲ. ಅದು ಕ್ರಮವೂ ಅಲ್ಲ. ಇಲ್ಲಿ ಯಾರನ್ನು ಸಮರ್ಥನೆ ಮಾಡಿಕೊಳ್ಳುವುದಲ್ಲ.

ಶ್ರೀ ಆರಗ ಜ್ಞಾನೇಂದ್ರ: ತಾವು ಹೇಗೆ ಬೇಕಾದರೂ ಸಮರ್ಥನೆ ಮಾಡಬಹುದು. ಅವರು ಹೇಳಿರತಕ್ಕಂಥ ಸ್ಟೇಟ್‌ಮೆಂಟ್ ಏನಿದೆ, ಅದು ಬಹಳ ಆಘಾತಕರವಾದಂಥಾದ್ದು. ನೀವು ಮಲ್ಯರವರನ್ನು ನಗಣ್ಯ ವ್ಯಕ್ತಿ ಎಂದು ಭಾವಿಸಿರಬಹುದು.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಅಧ್ಯಕ್ಷರೇ, ರಾಜಕೀಯ ಪಕ್ಷಗಳಿಗೆ ಹಣ ಸಹಾಯವನ್ನು ಕೊಟ್ಟುಕೊಂಡು ಬಂದಿರುವುದು ನಡೆದುಕೊಂಡು ಬಂದಿರಬಹುದು. ಮಾನ್ಯ ಸದಸ್ಯರ ಪಕ್ಷಕ್ಕೂ ಕೂಡ ಯಾರಾದರೂ ಕೊಡುತ್ತಾ ಇರಬಹುದು. ನಾನು ಕೊಟ್ಟಿದ್ದೇನೆ ಎಂದು ಯಾರೂ ಹೇಳುವುದಿಲ್ಲ. ಹಾಗೆಯೇ ನಾವು ಬಳಸಿಕೊಂಡಿದ್ದೇವೆ ಎಂದು ಯಾರೂ ಹೇಳುವುದಿಲ್ಲ. ಈ ರಾಷ್ಟ್ರದಲ್ಲಿ ಯಾವ ಪಕ್ಷದವರು ತೆಗೆದುಕೊಂಡಿಲ್ಲ ಎಂದು ಹೇಳಲಿ? ನಾವು ಒಬ್ಬರಿಂದಲೂ ಸಹಾಯವನ್ನು ತೆಗೆದುಕೊಂಡಿಲ್ಲವೆಂದು ಎಲ್ಲಾ ಪಕ್ಷದ ಅಧ್ಯಕ್ಷರುಗಳು ಹೇಳಲಿ? ಹಾಗೆ ಎಲ್ಲರೂ ಸ್ಟೇಟ್‌ಮೆಂಟ್‌ನ್ನು ಕೊಡಲಿ.

ಹಾಗಿದ್ದಲ್ಲಿ ಕಂಪನಿ ಆಕ್ಟ್‌ನ್ನು ಕೂಡಲೇ ತಿದ್ದುಪಡಿ ಮಾಡಿ. ಯಾರಿಗೂ ಒಂದು ಕಾಸನ್ನು ಕೊಡಬಾರದು ಎಂದು ಆಕ್ಟ್ ಆಗಲಿ. ಎಲೆಕ್ಷನ್ ಕಮಿಶನ್ ಕೂಡ ಆ ಕುರಿತು ತಿದ್ದುಪಡಿ ಮಾಡಲಿ. ಪೀಪಲ್ಸ್ ರೆಪ್ರೆಸೆಂಟೇಟಿವ್ ಆಕ್ಟ್‌ಗೆ ತಿದ್ದುಪಡಿ ಮಾಡಲಿ. ಸುಮ್ಮನೆ ಚೆಂದಕ್ಕೆ ಮಾತನಾಡಿದರೆ ಆಗುವುದಿಲ್ಲ. ಯಾರೋ ಹೇಳಿದ್ದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಹೇಳಿದರೆ ಹೇಗಾಗುತ್ತದೆ?

ಶ್ರೀ ಶಿವಣ್ಣ: ನಾವು ಏನು ಹತ್ತು ವರ್ಷದ ಹಿಂದೆ ವರ್ತಕರಿಂದ ರಾಜಕಾರಣಕ್ಕಾಗಿ ಕಾಡಿ, ಬೇಡಿ ತಂದಿದ್ದು ಹಣ ಏನಿದೆ ಅದೆಲ್ಲ ಈ ಹೊತ್ತು ಮಾಯವಾಗಿದೆ, ಇಂಡಸ್ಟ್ರೀಸ್ ಏನಿತ್ತು ಅವು ಮಾಯವಾಗಿದೆ. ದುರದೃಷ್ಟವಶತ್ ನಮ್ಮ ಅರಗಜ್ಞಾನೇಂದ್ರ ಹೇಳಿದಂತೆ ಮಲ್ಯರಂಥವರ ಮತ್ತೆ ಜೆ.ಪಿ.ನಾರಾಯಣಸ್ವಾಮಿಯವರ ಎದುರು ಸರಕಾರದವರು ಮತ್ತು ಬೇರೆ ಯಾರೇ ಆದರೂ ಕೈ ಒಡ್ಡಿ ಸರ್ವನಾಶವಾಗುತ್ತದೆ ಎಂದು ಜನರು ಜ್ಞಾಪಿಸಿಕೊಳ್ಳುತ್ತಾರೆ. ಹಾಗೆ ಆಗದಿರಲಿ ಎಂದು ನಮ್ಮ ಅನಿಸಿಕೆ; ಹಾಗಾಗಿ ಈ ಸಮಾಜ ಸರ್ವನಾಶವಾಗಿದೆ.

ಶ್ರೀ ಕೆ.ಹೆಚ್.ರಂಗನಾಥ: ನಾನು ಇಲ್ಲಿ ಸಂಬಂಧಪಡದವರ ಹೆಸರುಗಳನ್ನು ಹೇಳಲು ಹೋಗುವುದಿಲ್ಲ. ನಮಗೆ ಸಾಕಷ್ಟು ವಿಚಾರಗಳು ಗೊತ್ತಿವೆಯೆಂದು ಎಲ್ಲವನ್ನೂ ಮಾತನಾಡಲು ಸಾಧ್ಯವೇ? ಅವರಿಗೆ ಚೆನ್ನಾಗಿ ಕಂಡಿದೆ ಎಂದು ಅವರು ಮಾತನಾಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ತಮ್ಮ ಸಮರ್ಥನೆಯನ್ನು ಹೇಗೆ ಬೇಕಾದರೂ ಮಾಡಿಕೊಳ್ಳಿ. ಯು.ಜಿ.ಮಲ್ಯರವರು ನಗಣ್ಯ ವ್ಯಕ್ತಿ, ಅವರು ಕೊಟ್ಟ ಹೇಳಿಕೆಗೆ ಉತ್ತರ ಕೊಡುವಂಥಾದ್ದು ಅಲ್ಲವೇ ಅಲ್ಲ, ಅದು ಓದಿ ಬಿಡುವಂತಾದ್ದು ಎಂದು ನಾನಂತೂ ಭಾವಿಸುವುದಿಲ್ಲ ಅದಕ್ಕೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸುವಂಥ ಅವಶ್ಯಕತೆ ಇತ್ತು. ಅದಕ್ಕೆ ಸರಿಯಾದ ರೀತಿಯಲ್ಲಿ ಹೇಳಬೇಕಾಗಿತ್ತು. ಈ ಹೆಂಡದ ಲಾಬಿಯು ಏನೇನು ಮಾಡುತ್ತಿದೆ ಎಂದು ನಾನು ಹೇಳಿದ್ದೇನೆ. ಜನರು ಅದಕ್ಕೂ ಇದಕ್ಕೂ ತಾಳೆ ಹಾಕಿದಾಗ ಅವರಿಗೆ ಯಾವ ಉತ್ತರವನ್ನು ಕೊಡುತ್ತೀರಿ? ನಿಮ್ಮ ಕಿವಿಗೆ ಮಾತ್ರ ಇಂಪಾಗುವ ರೀತಿಯಲ್ಲಿ ಎಲ್ಲರಿಗೂ ಹೇಳುವುದಕ್ಕಾಗುವುದಿಲ್ಲ. ಇಲ್ಲಿ ನಾವು ಸಾರ್ವಜನಿಕ ಮೌಲ್ಯಗಳನ್ನು ಎತ್ತಿಹಿಡಿಯಬೇಕಾಗಿತ್ತು. ಅದನ್ನು ನಿಮ್ಮ ಸರಕಾರದವರು ಮಾಡಿಲ್ಲ. ಇದರ ಪರಿಣಾಮವನ್ನು ರಾಜ್ಯದ ಜನರು ಅನುಭವಿಸಬೇಕಾಗಿದೆ. ನಿಮ್ಮ ಸರಕಾರವು ಎಷ್ಟು ದಿನಗಳ ಕಾಲ ನಡೆಯುತ್ತದೆ, ಯಾವರೀತಿಯಲ್ಲಿ ನಡೆಯುತ್ತದೆ ಎಂಬುದನ್ನು ನಮಗೆ ಹೇಳುವುದಕ್ಕಾಗುವುದಿಲ್ಲ. ಇಲ್ಲಿ ಸದನಕ್ಕೆ ಮಂತ್ರಿಗಳು ಬರಬೇಕಾದರೆ ನಾವು ಇಲ್ಲಿ ಬಾಯ್‌ಕಾಟ್ ಮಾಡಬೇಕು. ಅಥವಾ ಬರಲಿಲ್ಲವಲ್ಲ ಎಂದು ಧರಣಿ ಮಾಡಬೇಕು. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಧರಣಿ, ಬಾಯ್‌ಕಾಟ್ ಮಾಡಿದ್ದರೆ ಸರಿಯಾಗಿದೆ ಎನ್ನಬಹುದು. ಆದರೆ ನಾವು ಮಂತ್ರಿಗಳು

ಸದನಕ್ಕೆ ಬರಲಿಲ್ಲ ಎಂದು ಬಾಯ್‌ಕಾಟ್ ಮಾಡುವ ದುರಾದೃಷ್ಟಕರ ಸ್ಥಿತಿ ಬಂದಿದೆ. ಇದನ್ನು ನೀವು ಬದಲಾವಣೆ ಮಾಡಿಕೊಂಡರೆ ತುಂಬಾ ಒಳ್ಳೆಯದು. ರಾಜ್ಯದ ಜನರ ಹಿತದೃಷ್ಟಿಯಿಂದ ಅದನ್ನು ಮಾಡಬೇಕು. ನೀವು ರಾಜ್ಯಪಾಲರ ಭಾಷಣದಲ್ಲಿ ಏನೆಲ್ಲಾ ಹೇಳಿಸಿದ್ದೀರಿ. ಅವುಗಳನ್ನು ದಯಮಾಡಿ ಕೃತಿಗಿಳಿಸಿರಿ. ಸಮಿತಿಗಳನ್ನು ಮಾಡುವುದು, ಆಯೋಗಗಳನ್ನು ಮಾಡುವುದು ಅದಕ್ಕೆ ಮುಂದಾಗಿದ್ದೀರಿ. ತಮ್ಮ ಸರಕಾರವು ಆಯೋಗ ಮಾಡುವ ಸರಕಾರ ಎಂದು ಆಗಬಾರದು. ನಿಮ್ಮ ಸರಕಾರವು ಆಡಳಿತ ಮಾಡುವಂಥ ಸರಕಾರ ಆಗಲಿ. ಆಡಳಿತದಲ್ಲಿ ಬಿಗಿ ಇರುವಂತಾಗಬೇಕು. ಈ ರಾಜ್ಯದ ಕನಸನ್ನು ನನಸು ಮಾಡುವಂಥ ಸರಕಾರ ನಿಮ್ಮದ್ದಾಗಬೇಕು. ನಿಮ್ಮ ಸರಕಾರವು ನಾಳೆಯೇ ಬಿದ್ದು ಹೋಗಲಿ ಎಂದು ಹಾರೈಸುವುದಿಲ್ಲ. ನಿಮ್ಮ ಸರಕಾರವು ಐದು ವರ್ಷಗಳ ಕಾಲ ಆಡಳಿತ ಮಾಡಬೇಕೆಂದು ಜನರು ನಿಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ನೀವು ನಿಮ್ಮ ಆಡಳಿತವನ್ನು ಮಾಡಿ ಮುಗಿಸಿ. ಆದರೆ ನಿಮ್ಮ ನಡವಳಿಕೆಗಳನ್ನು ನೋಡಿದಾಗ ಯಾರಿಗೂ ಒಬ್ಬರಿಗೊಬ್ಬರಿಗೆ ಸಂಪರ್ಕವಿಲ್ಲ. ಸಾಮರಸ್ಯ ಇಲ್ಲ. ಯಾರ ಮಾತನ್ನು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ. ಮುಖ್ಯಮಂತ್ರಿಯವರು ಇಲ್ಲಿ ಬಂದು ಕುಳಿತುಕೊಂಡಿದ್ದರೂ ಕೂಡ ಮಂತ್ರಿಗಳು ಬಾರದೇ ಇರುತ್ತಾರೆ. ಸರಕಾರದ ಅಧಿ ಕಾರಿಗಳು ಸದನದಲ್ಲಿ ಬಂದು ಕುಳಿತುಕೊಳ್ಳುವುದಿಲ್ಲ. ಈ ಒಂದು ದುರವಸ್ಥೆಯಲ್ಲಿ ಸರಕಾರವು ಜನರಿಗೆ ಹೇಗೆ ಸ್ಪಂದಿಸುತ್ತಿದೆ ಎಂಬ ಬಗ್ಗೆ ನಮ್ಮಲ್ಲಿ ಅನುಮಾನಗಳು ಮೂಡುತ್ತಿವೆ. ಮಾನ್ಯ ರಾಜ್ಯಪಾಲರ ಬಾಯಲ್ಲಿ ಭಾಷಣ ಮಾಡಿಸಿದ ಹಾಗೆ ಆಗುವುದಿಲ್ಲ. ಅದನ್ನು ನಡವಳಿಕೆಗಳಲ್ಲಿಯೂ ತೋರಿಸಿ ರಾಜ್ಯದ ಜನರಿಗೆ ಒಳ್ಳೆಯದನ್ನು ಮಾಡಬೇಕೆಂದು ಹಾರೈಸಿ ನನಗೆ ಅವಕಾಶ ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಸಿ.ಬೈರೇಗೌಡ (ವೇಮುಗಲ್): ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಲಿಂಗಪ್ಪನವರು ನಮ್ಮ ರಾಜ್ಯದ ಘನತೆವೆತ್ತ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ವಂದನಾ ನಿರ್ಣಯವನ್ನು ಇಲ್ಲಿ ಮಂಡಿಸಿದ್ದಾರೆ. ನಾನು ಈ ನಿರ್ಣಯವನ್ನು ವಿರೋಧಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರ ಭಾಷಣದ ಮೊದಲನೇ ಕಂಡಿಕೆಯಲ್ಲಿ ''ಇದು ಹೊಸ ಸಹಸ್ರಮಾನದ ಮೊದಲ ಅಧಿವೇಶನ'' ಒಂದು ಹೊಸ ಸಹಸ್ರಮಾನವು ಪ್ರಾರಂಭ ಆಗುತ್ತಾ ಇದೆ, ಅದರ ಪ್ರಾರಂಭದಲ್ಲಿಯೇ ರಾಜ್ಯಪಾಲರ ಭಾಷಣವು ಈ ಸದನದ ಮುಂದಿದೆ, ನಮ್ಮ ಮುಂದಿದೆ. ಇದರಲ್ಲಿ ಮುಂದೆ ಹೋಗಿ ಸರಕಾರದವರು ರಾಜ್ಯಪಾಲರವರಿಂದ ಏನು ಹೇಳಿಸಿದ್ದಾರೆ? ''ಜನತೆಯು ಹೊಸ ನಿರೀಕ್ಷೆಗಳೊಂದಿಗೆ ಹೊಸ ಕನಸುಗಳನ್ನು ಕಾಣುತ್ತಲೇ ಹೊಸ ಯುಗದ ಹೊಸ್ತಿಲಲ್ಲಿ ನಾವಿದ್ದೇವೆ.'' - ಅನ್ನತಕ್ಕಂಥ ಭಾರಿ ದೊಡ್ಡ ದೊಡ್ಡ ಮಾತುಗಳನ್ನು ಸಹ ರಾಜ್ಯಪಾಲರ ಮೂಲಕ ಹೇಳಿಸಿದ್ದಾರೆ. ಹೀಗೆ ಈ ಭರವಸೆಗಳನ್ನು ಹುಟ್ಟಿಸತಕ್ಕಂಥ ಮಾತುಗಳನ್ನು ಆಡತಕ್ಕಂಥಾದ್ದರ ಜೊತೆಗೆ

ಮುಂದಾದರೂ ಇದನ್ನು ಕೃತಿಗಿಳಿಸತಕ್ಕಕಂಥ ಕೆಲಸಗಳು ಈ ಸರಕಾರದಲ್ಲಿ ಆಗಿದೆಯೇ ಎಂದು ನೋಡಿದ್ದೇ ಆದರೆ ಅದು ಒಂದು ದೊಡ್ಡಶೂನ್ಯ ಎಂಬುದು ನಮಗೆ ವ್ಯಕ್ತವಾಗುತ್ತದೆ. ಇಷ್ಟೊಂದು ಭರವಸೆಗಳನ್ನು ಮೂಡಿಸಿರತಕ್ಕಂಥ ಸರಕಾರ, ಅದರ ನೇತೃತ್ವವನ್ನು ವಹಿಸಿರತಕ್ಕಂಥ ಮಾನ್ಯ ಮುಖ್ಯಮಂತ್ರಿಯವರು ಸಹ ಅಷ್ಟೇ ಬಲಯುತವಾಗಿ ಇರತಕ್ಕಂಥಾದ್ದು ಕೂಡ ಅಷ್ಟೇ ಅವಶ್ಯಕವಾಗಿದೆ. ಆದರೆ ದುರದೃಷ್ಟವಶಾತ್ ಇವೊತ್ತಿನ ದಿವಸ ಇವರು ಹೇಳಿರತಕ್ಕಂಥಾದ್ದಕ್ಕೂ ಮತ್ತು ಆ ಶಕ್ತಿ ಮತ್ತು ಬಲ ಮುಖ್ಯಮಂತ್ರಿಯವರಿಗಿದೆಯೇ ಎಂದು ಕೇಳಿದರೆ ಖಂಡಿತವಾಗಿಯೂ ಸಹ ಇಲ್ಲ ಎನ್ನುವುದು ಅವರ ಕೃತಿಗಳಿಂದ ಮತ್ತು ಅವರ ನಡವಳಿಕೆಗಳಿಂದ ವ್ಯಕ್ತವಾಗುತ್ತಾ ಇದೆ. ಮಾನ್ಯ ಕೃಷ್ಣರವರು ಬಹಳ ಹೆಚ್ಚು ಹೆಚ್ಚು ಓದಿರತಕ್ಕಂಥವರು, ವಿದೇಶಗಳಲ್ಲಿ ಹೋಗಿ ಓದಿ ಬಂದಿರತಕ್ಕಂಥವರು. ಈ ಸದನದಲ್ಲಿ ಮತ್ತು ದೇಶದ ಎತ್ತರವಾದ ಸ್ಥಾನಗಳಲ್ಲಿ ರಾಜ್ಯ ಸಭೆಯಲ್ಲಿ ಲೋಕ ಸಭೆಗಳಲ್ಲಿ ಕೆಲಸ ಮಾಡಿರತಕ್ಕಂಥವರು. ಇಲ್ಲಿ ಮಾನ್ಯ ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು, ಕೇಂದ್ರದಲ್ಲೂ ಕೂಡ ಮಂತ್ರಿಗಳಾಗಿ ಕೆಲಸಮಾಡಿರತಕ್ಕಂಥವರು, ಇಷ್ಟೊಂದು ಅಪಾರವಾದ ಅನುಭವ ಇರತಕ್ಕಂಥವರು ಒಬ್ಬ ರಾಜಕಾರಣಿಯಾಗುವುದಕ್ಕಿಂತ ಬದಲಾಗಿ ಒಬ್ಬ ಮುತ್ಸದ್ಧಿಯಾಗುತ್ತಾರೆ ಎನ್ನತಕ್ಕಂಥ ಒಂದು ನಂಬಿಕೆ, ಆಸೆ ನನಗಂತೂ ಕೂಡ ಇತ್ತು. ಈ ಸದನದಲ್ಲಿ ಅಲ್ಲಿ ಮೇಲುಗಡೆ ಗಾಂಧೀಜಿಯವರ ಭಾವಚಿತ್ರವನ್ನು ನೋಡುತ್ತಿದ್ದೇವೆ, ಆ ಕಡೆ ಬಾಬು ರಾಜೇಂದ್ರ ಪ್ರಸಾದ್‌ರವರ ಭಾವಚಿತ್ರವನ್ನು ನಾವು ನೋಡುತ್ತಿದ್ದೇವೆ. ಈ ಕಡೆ ನೆಹರು ಅವರ ಭಾವಚಿತ್ರವನ್ನು ನೋಡುತ್ತಿದ್ದೇವೆ, ಹನುಮಂತಯ್ಯನವರ ಭಾವಚಿತ್ರವನ್ನು ನಾವು ನೋಡುತ್ತಿದ್ದೇವೆ. ಡಾ:ರಾಧಕೃಷ್ಣನ್‌ರವರ ಭಾವಚಿತ್ರವನ್ನು ನೋಡುತ್ತಿದ್ದೇವೆ. ಸರ್ದಾರ್‌ಪಟೇಲ್‌ರವರ ಭಾವಚಿತ್ರವನ್ನು ನೋಡುತ್ತಿದ್ದೇವೆ. ಅಂಬೇಡ್ಕರ್‌ರವರ ಭಾವಚಿತ್ರವನ್ನು ನೋಡುತ್ತಿದ್ದೇವೆ. ನಾನು ಅಂದುಕೊಂಡಿದ್ದುದು ಏನೆಂದರೆ ಇವರ ಪೈಕಿ ಇಷ್ಟೊಂದು ಭಾವಚಿತ್ರಗಳನ್ನು ನೋಡುತ್ತಿರತಕ್ಕಂಥವರ ಪೈಕಿ ಒಬ್ಬರ ಮಟ್ಟಕ್ಕಾದರೂ ಕೂಡ ಇವರು ಏರುತ್ತಾರೆ ಎನ್ನತಕ್ಕ ಆಸೆ ನನಗಿತ್ತು. ಇವರೆಲ್ಲರೂ ಇಲ್ಲದಿದ್ದರೂ ಸಹಿತ ಕೊನೆಯ ಪಕ್ಷ ಈ ರಾಜ್ಯದಲ್ಲಿ ಹುಟ್ಟಿ ಮಾನ್ಯ ಕೃಷ್ಣ ಅವರು ಕುಳಿತಿರುವ ಜಾಗದಲ್ಲಿ ಕುಳಿತಿದ್ದ ಮಾನ್ಯ ಹನುಮಂತಯ್ಯನವರ ಮಟ್ಟಕ್ಕಾದರೂ ಕೂಡ ಏರುತ್ತಾರೆ ಎನ್ನತಕ್ಕಂಥ ಆಸೆ-ನಿರೀಕ್ಷೆ ನನ್ನದಾಗಿತ್ತು. ಆದರೆ ಇವತ್ತಿನ ದಿವಸ ಆ ಆಸೆಯೂ ಇಲ್ಲ. ನಾನು ನಿರೀಕ್ಷೆ ಮಾಡಿದ್ದು ಇವತ್ತು ಪೂರ್ತಿಯಾಗಿ ತಪ್ಪು ಎನ್ನುವ ಭಾವನೆ ನನ್ನಲ್ಲಿ ಮೂಡುತ್ತಿದೆ. ಇದಕ್ಕೆ ನಾನು ಅನೇಕ ಕಾರಣಗಳನ್ನು ಕೊಡುತ್ತಾ ಹೋದರೆ ಬಹಳ ಸಮಯ ಬೇಕಾಗುತ್ತದೆ. ಆದ್ದರಿಂದ ನಾನು ಹೆಚ್ಚಿನ ಸಮಯವನ್ನು ಅದಕ್ಕೆ ವಿನಿಯೋಗಿಸದೆ ಇವತ್ತು ಹೊಸ ಮುಖ್ಯಮಂತ್ರಿಗಳು ಬಂದಿರತಕ್ಕಂಥದ್ದರ ಜೊತೆಗೆ ಹಿಂದೆ ನಾವು ಅಧಿಕಾರದಲ್ಲಿದ್ದೆವು. ಬದಲಾಗಿ ಹೊಸ ಸರ್ಕಾರ ಬಂದಿದೆ. ಹೊಸ ಪಕ್ಷ ಅಲ್ಲದಿದ್ದರೂ ಸರ್ಕಾರ ಬದಲಾವಣೆಯಾದ ಹಾಗೆ ಮುಖ್ಯಮಂತ್ರಿಗಳು ಬದಲಾವಣೆಯಾಗಿ ಇವತ್ತಿನ ದಿವಸ

ಅವರು ಬಂದಿದ್ದಾರೆ. ಆ ರೀತಿ ಬಂದಂಥ ಸಮಯದಲ್ಲಿ ಇವತ್ತು ಏನು ನಡೆಯುತ್ತಿದೆ, ಈ ಮುಖ್ಯಮಂತ್ರಿಗಳು ಬಹಳ ಅಶಕ್ತ ಮುಖ್ಯಮಂತ್ರಿಗಳು ಎಂದು ಇವತ್ತು ಸಾಬೀತಾಗಿದೆ. ಇವತ್ತಿನ ದಿವಸ ಜನರು ರಾಜ್ಯದ ಮೂಲೆ ಮೂಲೆಗಳಲ್ಲಿ ಮಾತನಾಡುತ್ತಿದ್ದಾರೆ. ಇಷ್ಟೊಂದು ದುರ್ಬಲ ಮುಖ್ಯಮಂತ್ರಿಗಳು ಇವತ್ತು ರಾಜ್ಯದಲ್ಲಿ ಇರಲಿಲ್ಲ ಎಂದು ಜನರು ಇವತ್ತಿನ ದಿವಸ ಮಾತನಾಡಿಕೊಳ್ಳುತ್ತಿದ್ದಾರೆ. ದುರ್ಬಲರು ಎನ್ನುವುದಕ್ಕೆ ಕಾರಣವೇನೆಂದರೆ ಇವತ್ತು ಈ ಕಡೆ ಇದ್ದಂಥ ಪಕ್ಷಗಳನ್ನು ಒಡೆದರು. ಈ ಕಡೆ ಇದ್ದ ಪಕ್ಷಗಳನ್ನು ಒಡೆದು ಕೆಲವರನ್ನು ಅವರ ಕಡೆಗೆ ತೆಗೆದುಕೊಂಡರು. ಅಷ್ಟೇ ಅಲ್ಲ, ಈ ಭಾಗದಲ್ಲಿದ್ದಂಥ ಅನೇಕ ಸದಸ್ಯರನ್ನೂ ಕೂಡ ಸೆಳೆದುಕೊಂಡರು. ಹಿಂದೆ ನಿಮ್ಮ ಸರ್ಕಾರವಿದ್ದಾಗ ನಡೆದಿಲ್ಲವೇ ಎಂದು ತಾವು ಕೇಳಬಹುದು. ನಿಜ, ನಡೆದಿದೆ. ನಡೆದಿಲ್ಲ ಎಂದು ನಾನು ಹೇಳುವುದಿಲ್ಲ. ಇವರಿಗೆ 132 ಸದಸ್ಯರ ಸಂಖ್ಯಾಬಲ ಇದೆ. 132 ಸದಸ್ಯರ ಸಂಖ್ಯಾಬಲ ಇದ್ದರೂ ಸಹಾ ಉಳಿದವರ ಅವಶ್ಯಕತೆ ಏನಿದೆ? ಅವಶ್ಯಕತೆ ಇರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಅವಶ್ಯಕತೆ ಏನೂ ಇರಲಿಲ್ಲ. ಆದರೆ ಭೈರೇಗೌಡರ ಕಾಟ ತಡೆಯಲಾರದೆ ಈ ಕಡೆಗೆ ಬರುವುದಕ್ಕೆ ಹೊರಟಿದ್ದು.

ಶ್ರೀ ಭೈರೇಗೌಡ: ಆಗಲಿ. ನಮ್ಮ ಕಡೆಯಿಂದ ನಾವಂತೂ ಕೂಡ ಯಾರಿಗೂ ಕಾಟ ಕೊಡುವ ಆ ಗಳಿಗೆಯಲ್ಲಿ ಹುಟ್ಟಿ ಬಂದಂಥವರಲ್ಲ. ನಮ್ಮಿಂದ ಕೂಡ ಯಾರೂ ಹೋಗಿಲ್ಲ. ಆದರಿಂದ ಇವತ್ತಿನ ದಿವಸ ಈ ಅವಶ್ಯಕತೆ ಇಲ್ಲದಿದ್ದರೂ ಸಹಿತ ಯಾವ ಕಾರಣದಿಂದ ನೀವು ಇವರನ್ನೆಲ್ಲಾ ತಮ್ಮ ಜೊತೆಗೆ ಸೆಳೆದು ಕೊಂಡಿದ್ದೀರಿ ಎನ್ನುವುದೇ ನೀವು ಬಹಳ ದುರ್ಬಲರು ಎನ್ನುವುದಕ್ಕೆ ಅಷ್ಟೇ ಸಾಕು ಸಾಕ್ಷಿ. ಇನ್ನು ಸಾಕ್ಷಿಯೆಲ್ಲಾ ಅನಾವಶ್ಯಕ. ನಿಮ್ಮದೇ ಆದ ಸಂಖ್ಯೆ 132 ಇದ್ದರೂ ಸಹಾ ಇಲ್ಲಿ ಸಿಕ್ಕಿ ಸಿಕ್ಕಿದವರನ್ನೆಲ್ಲಾ ಕೂಡ ತಮ್ಮ ಕಡೆ ಸೆಳೆದುಕೊಳ್ಳುವ ಪ್ರಯತ್ನ ಮಾಡಿದ್ದೀರಲ್ಲ, ಇದೇ ದುರ್ಬಲತೆಯ ಹೆಗ್ಗುರುತು. ಈ ದುರ್ಬಲತೆಯ ಹೆಗ್ಗುರುತಿನಿಂದ ರಾಜ್ಯದಲ್ಲಿ ಇವತ್ತಿನ ದಿವಸ ಏನೇನು ಮಾಡುತ್ತೇವೆ ಎಂದು ಹೇಳಿದ್ದಾರೆ, ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿಯಂಥ ಅವಶ್ಯಕ ವಲಯಗಳ ಸುಧಾರಣೆಗೆ ಆದ್ಯತೆ ನೀಡುತ್ತೇವೆ ಎಂದು ಹೇಳಿಕೊಂಡಿದ್ದಾರೆ. ಕೃಷಿ ಬಗ್ಗೆ ನಾನು ಹೆಚ್ಚಿಗೆ ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಬಹುಶಃ ಬೇರೆ ಸಂದರ್ಭ ಸಿಕ್ಕುತ್ತೆ ಎಂದು ನಾನಂತೂ ಕೂಡ ಭಾವಿಸಿದ್ದೇನೆ, ಆಗ ಹೆಚ್ಚಿಗೆ ಮಾತನಾಡುವವನಿದ್ದೇನೆ. ಅದರ ಜೊತೆಯಲ್ಲಿ ಕಂಡಿಕೆ 32 ರಲ್ಲಿ ಏನು ಹೇಳಿದ್ದಾರೆಂದರೆ: '' ಕಳೆದ ಶಮಾನದಲ್ಲಿದ್ದ ಆಡಳಿತದ ಪರಿಕಲ್ಪನೆ ಕ್ರಮೇಣ ಬದಲಾಗುತ್ತಾ ಬಂದಿದೆ''. ಹೌದು. ದಿನಕಳೆದಂತೆ, ವರ್ಷ ಕಳೆದಂತೆ ಬದಲಾವಣೆಯಾಗುತ್ತಿರತಕ್ಕಂಥದ್ದು ಅದು ಸಮಾಜದ ಒಂದು ಕ್ರಿಯೆ. ಅದನ್ನೇ ಚಲನಶೀಲ ಸಮಾಜವೆಂದು ಕರೆಯುವುದು. ಸಮಾಜವಾಗಲಿ,

ವ್ಯವಸ್ಥೆಯಾಗಲಿ ಬದಲಾವಣೆಯಾಗುತ್ತಿರುತ್ತದೆ, ಇಂದು ನಾವು ಏನನ್ನು ನಂಬಿದ್ದೇವೋ ನಾಳೆ ಅದು ನಮ್ಮ ನಂಬಿಕೆಯಿಂದ ದೂರವಾಗಬಹುದು. ಅದು ಬದಲಾವಣೆಯಾಗುತ್ತಿರುತ್ತದೆ. ಅದನ್ನೇ ನಾವು ಚಲನಶೀಲ ಸಮಾಜವೆಂದು ಕರೆಯುತ್ತೇವೆ. ವ್ಯವಸ್ಥೆಯನ್ನು ಕೂಡ ಅದೇರೀತಿಯಾಗಿ ಕರೆಯುತ್ತೇವೆ. ಲಕ್ಷಾಂತರ ಜನರ ಭವಿಷ್ಯವನ್ನು ಗಣ್ಯವರ್ಗವು ನಿಯಂತ್ರಿಸುವ ಕಾಲ ಹೋಯಿತು. ಕೆಲವರೇ ಹಿಂದೆ ಇದ್ದ ರಾಜಮಹಾರಾಜರುಗಳು, ಚಕ್ರವರ್ತಿಗಳು ಎಂದು ಯಾರು ಆಡಳಿತವನ್ನು ನಡೆಸುತ್ತಿದ್ದರೋ ಅವರು ಕೆಲವರಾಗಿರುವವರು ಜನರ ಆಗುಹೋಗುಗಳನ್ನು, ಬದುಕನ್ನು ನಿಯಂತ್ರಿಸುವ ಕಾಲ ಹೋಗಿ ಇವತ್ತು ಜನಸಾಮಾನ್ಯರು ಮೂಲತಃ ಚುನಾಯಿತರಾಗಿರುವವರು ಬಂದು ಇವತ್ತಿನ ದಿವಸ ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕೆ ನಾವು ಮುಂದಾಗಿದ್ದೇವೆ ಎಂದು ನಾನು ಅರ್ಥಮಾಡಿಕೊಂಡಿರುವ ರೀತಿ ಇನ್ನು ಮುಂದೆ ಹೋಗಿ ಹಿಂದೆ ಸರ್ಕಾರವೂ ಒಂದು ನಿಯಂತ್ರಣ ಸಂಸ್ಥೆಯಾಗಿ ಕೆಲಸ ಮಾಡುತ್ತಿತ್ತು. ''ಈ ಸಹಸ್ರಮಾನದ ಪ್ರಾರಂಭದಲ್ಲಿ ಸರ್ಕಾರ ಬದಲಾವಣೆ ಮತ್ತು ಪ್ರಗತಿಯ ಚಾಲಕಶಕ್ತಿ ಎಂಬ ವ್ಯಾಖ್ಯಾನ ನೀಡಲಾಗುತ್ತಿದೆ.'' ಏನು ಸ್ವಾಮಿ? ಏನೇನು ಸಾಧನೆ ಮಾಡಿದ್ದೀರಿ. ನಾನಂತೂ ಪ್ರಥಮದಲ್ಲಿ ಇವರು ಮಾಡಿದ ಭಾಷಣದ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗಿಲ್ಲ. ಏಕೆಂದರೆ ಹೊಸದಾಗಿರುವ ಸರ್ಕಾರ. ಅವಧಿ ಕೊಡೋಣ. ಇವರಿಗೆ ಸಮಯವನ್ನು ಕೊಡೋಣ ಎನ್ನುವ ಕಾರಣಕ್ಕೋಸ್ಕರ ನಾನು ಹೆಚ್ಚಿಗೆ ಮಾತನಾಡಲಿಲ್ಲ. ಆಗ ವಸ್ತುವೂ ಸಹಾ ಇರಲಿಲ್ಲ. ಈಗ ಸರ್ಕಾರ ಬಂದು ಆರು ತಿಂಗಳು ನಡೆಯುತ್ತಾ ಬಂದಿದೆ. ಆರು ತಿಂಗಳಲ್ಲಿ ಇವತ್ತಿನ ದಿವಸ ಆಗಿರುವುದೇನೆಂದರೆ ಶೂನ್ಯ. ಆದರೆ ಇಲ್ಲಿ ಬಳಸಿರುವ ಪದಗಳು ಅದರಲ್ಲೂ ಮುಖ್ಯವಾಗಿ ಇಲ್ಲಿ ಮುಂದೆ ಇದೇ ಕಂಡಿಕೆಯಲ್ಲಿ ಏನು ಹೇಳುತ್ತಾರೆಂದರೆ, ''ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಬೇಕಾದ್ದು ತೀವ್ರ ಅಗತ್ಯ ಇದೆ. ನನ್ನ ಸರ್ಕಾರವು ಆಡಳಿತದಲ್ಲಿ ಭ್ರಷ್ಟಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಲು ಜನಪರ ಆಡಳಿತವನ್ನು ನೀಡಲು ಪ್ರಯತ್ನಿಸುತ್ತದೆ'' ಎನ್ನುವ ದೊಡ್ಡ ದೊಡ್ಡ ಮಾತುಗಳನ್ನೆಲ್ಲಾ ಹೇಳಿದ್ದಾರೆ. ಆಡಳಿತದಲ್ಲಿ ಏನಾದರೂ ಸಣ್ಣಪುಟ್ಟ ಕುರುಹುಗಳಾದರೂ ಇರಬೇಕಲ್ಲ. ಆ ಸಣ್ಣಪುಟ್ಟ ಕುರುಹುಗಳು ಇವತ್ತಿನದಿವಸ ಕಾಣದೇ ಇರುವ ರೀತಿಯಲ್ಲಿ ಕಳೆದ ಆರು ತಿಂಗಳಿಂದ ಇವರ ಆಡಳಿತ ನಡೆದಿದೆ. ಇವತ್ತು ಸಣ್ಣ ಉದಾಹರಣೆಯನ್ನು ಕೊಡುವುದಕ್ಕೋಸ್ಕರ ಬೇರೆ ಕಡೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆಯಲ್ಲಿ ಇವತ್ತು ಅವರದೇ ಆಡಳಿತ ಪಕ್ಷದಲ್ಲಿರುವ ಮಾನ್ಯ ಸದಸ್ಯರೊಬ್ಬರು ಆತ್ಮಾನಂದರವರು ಒಂದು ಪ್ರಶ್ನೆಯನ್ನು ಕಳುಹಿಸಿದ್ದಾರೆ. ಆ ಪ್ರಶ್ನೆ ಯಾವ ರೀತಿ ಇದೆಯೆಂದರೆ ನಾನು ಎಲ್ಲವನ್ನೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ''ಮಂಡ್ಯ ಜಿಲ್ಲಾ ಪಂಚಾಯಿತಿಯಲ್ಲಿ ಹಾಗೂ ಇತರ ಬಾಬ್ತಿನಲ್ಲಿ ಹಣದ ದುರುಪಯೋಗ, ಅವ್ಯವಹಾರವಾಗಿದೆಯೆಂದು ಆರೋಪಿಸಿ ಮಂಡ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮತ್ತು ಸದಸ್ಯರು ಸರ್ಕಾರಕ್ಕೆ ಮನವಿಯನ್ನು

ಸಲ್ಲಿಸಿದ್ದಾರೆಯೇ?'' ಎಂದು ಪ್ರಶ್ನೆ . ಉತ್ತರ 'ಬಂದಿದೆ' ಎಂದು ಹೇಳುತ್ತಾರೆ. ಹಾಗಿದ್ದಲ್ಲಿ ಅದರ ವಿವರಗಳೇನು ಎಂದು ಕೇಳಿದ್ದಾರೆ. ಇದರಲ್ಲಿ ವಿವರಗಳು 9 ಇವೆ. ಸಮಯ ಹೆಚ್ಚಿಗೆ ಬೇಕಾದ್ದರಿಂದ ನಾನು ಓದುವುದಕ್ಕೆ ಹೋಗುವುದಿಲ್ಲ. ಏನು ಮಾಡಿದ್ದೀರಿ ಕ್ರಮ? ನಿಮ್ಮದೇ ಸರ್ಕಾರ. ನಿಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳು. ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಪಾರದರ್ಶಕತೆ ಮತ್ತು ಭ್ರಷ್ಟಾಚಾರ ರಹಿತವಾದಂಥ ಸರ್ಕಾರ ಎಂದು ಹೇಳಿದ್ದೀರಿ. ಎಲ್ಲಿದೆ ಸ್ವಾಮಿ? ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ.ಎಸ್.ಆತ್ಮಾನಂದ: ಅಲ್ಲಿ ಅಧ್ಯಕ್ಷರು ತಮ್ಮವರೇ ಇರುವುದು.

೫.೨೦ ಪಿ.ಎಂ.

ಶ್ರೀ ಸಿ.ಭೈರೇಗೌಡ: ನಮ್ಮವರೆ ಇರಬಹುದು, ನಾನೇ ಇರಬಹುದು, ಆದರೆ ತಪ್ಪು ಮಾಡಿರುವುದು ಮುಖ್ಯವೇ ವಿನಹ ಇವರು ಯಾವ ಪಕ್ಷದವರು, ಇವರು ಯಾರು ಎಂಬುದು ಮುಖ್ಯವಲ್ಲ. ಇಲ್ಲಿ ತಾವೆಯೇ ಪ್ರಶ್ನೆ ಕೇಳಿದ್ದೀರಿ, ಆದರೆ ತೆಗೆದುಕೊಂಡಿರುವ ಕ್ರಮವೇನು? ತಮ್ಮ ಜಿಲ್ಲೆ, ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ, ಆಡಳಿತ ಪಕ್ಷದ ಸದಸ್ಯರು ಕೇಳಿರುವ ಪ್ರಶ್ನೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆಪಾದನೆಗಳ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ ನಂತರ ಕ್ರಮ ತೆಗೆದುಕೊಳ್ಳುವುದಾಗಿ ಉತ್ತರದ ಕೊನೆಯಲ್ಲಿ ಹೇಳಿದ್ದಾರೆ. ನಂತರ ಎಂದರೆ ಯಾವತ್ತು? ಇನ್ನೊಂದು ಶತಮಾನ ಆಗಬೇಕೆ ಅಧಿಕಾರಕ್ಕೆ ಬಂದು ಆರು ತಿಂಗಳುಗಳಾಗಿದೆ, ಭ್ರಷ್ಟಾಚಾರ ರಹಿತ ಸರ್ಕಾರ ಮಾಡುವುದಾಗಿ ಹೇಳಿದ್ದೀರಿ. ಆದರೆ ಮಾಡಿರುವುದೇನು?

ಶ್ರೀ ಜಿ.ರಾಜುಗೌಡ: ಪಾರದರ್ಶಕತೆಯನ್ನು ಉಂಟು ಮಾಡುವುದಕ್ಕಾಗಿಯೇ ನಾವು ಪ್ರಶ್ನೆಯನ್ನು ಹಾಕಿರುವುದು. ಪಾರದರ್ಶಕತೆಯನ್ನು ತೋರಿಸಬೇಕು ಎಂಬ ಉದ್ದೇಶದಿಂದಲೇ ನಾವು ಆ ಪ್ರಶ್ನೆಯನ್ನು ಹಾಕಿದ್ದು. ಇದನ್ನು ತಾವು ದಯಮಾಡಿ ಅರ್ಥ ಮಾಡಿಕೊಳ್ಳಿ.

ಶ್ರೀ ಎಂ.ಎಸ್.ಆತ್ಮಾನಂದ: ಇದರ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳಿ ಹದಿನೈದು ದಿವಸಗಳಾಯಿತು. ಅಲ್ಲಿನ ಆಡಳಿತ ವೈಖರಿಯ ಬಗ್ಗೆ ಈ ರೀತಿ ಆರೋಪ ಮಾಡಿದ್ದಾರೆ, ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡಿ ಎಂದು ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಸೇರಿ ಕೊಟ್ಟಿದ್ದೇವೆ.

ಶ್ರೀ ಸಿ.ಭೈರೇಗೌಡ: ಅವರು ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಿ ಜನಪರ ಆಡಳಿತ ನೀಡಲು ಪ್ರಯತ್ನಿಸುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಆರು ತಿಂಗಳುಗಳಾದರೂ ಅಲ್ಲಿ ಸಾರ್ವಜನಿಕರ ಹಣವನ್ನು ಲೂಟಿ ಮಾಡಿರುವವರ ಬಗ್ಗೆ ಇಲ್ಲಿಯವರೆಗೂ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಷತೆಯನ್ನು

ಹೋಗಲಾಡಿಸುವ ಕ್ರಮವಿದು ಎಂದು ನಾವು ತಿಳಿದುಕೊಳ್ಳಬೇಕೋ, ಎಲ್ಲಿದೆ ದಕ್ಷತೆಯೆಂಬ ವಿಚಾರ. ಇಂಥ ಪದಗಳನ್ನು ತಾವು ಬಳಸಿ ಅದಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೀರಿ. ಇನ್ನೊಂದು ಪ್ರಶ್ನೆಯನ್ನು ನನ್ನ ಸ್ನೇಹಿತರಾದ ಸುರೇಶ್‌ಕುಮಾರ್‌ರವರು ಕೇಳಿದ್ದಾರೆ. ಅದೇನೆಂದರೆ, 1-1-1994 ರಿಂದ 1-2-2000 ಇಸವಿಯ ವರೆಗೆ ಲೋಕಾಯುಕ್ತ ಇಲಾಖೆ ಎಷ್ಟು ಅಧಿಕಾರಿಗಳ ಮನೆಯ ಮೇಲೆ ದಾಳಿ ನಡೆಸಿದೆ ಎಂದು ಅವರು ಕೇಳಿದ್ದಾರೆ. ದಾಳಿ ನಡೆಸಲಾದ ಅಧಿಕಾರಿಗಳ ಹೆಸರು, ದೊರಕಿದ ಆಸ್ತಿಯ ಪ್ರಮಾಣ ಮತ್ತು ಅವರ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಗಳನ್ನು ನೀಡಬೇಕೆಂದು ಪ್ರಶ್ನೆ ಕೇಳಿದ್ದಾರೆ. ಸರ್ಕಾರ ನೀಡಿರುವ ಉತ್ತರದಲ್ಲಿ 103 ಅಧಿಕಾರಿಗಳ ಮೇಲೆ ದಾಳಿ ನಡೆದು ಕ್ರಮ ತೆಗೆದುಕೊಂಡಿರುವ ಬಗ್ಗೆ ಇದೆ. ಇದರಲ್ಲಿ ಬಹಳ ದೊಡ್ಡ ದೊಡ್ಡ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಆದರೆ ಒಬ್ಬರ ಮೇಲು ಇಲ್ಲಿಯವರೆಗೆ ಸಹ ಕನಿಷ್ಟ ಪಕ್ಷ ಅಮಾನತ್ತಿನಲ್ಲಿ ಇಡುವ ಕೆಲಸವಾಗಿಲ್ಲ. ಇದು ತಮ್ಮ ದಕ್ಷತೆ, ಪಾರದರ್ಶಕತೆಯೆ?

ಶ್ರೀ ಕಾಗೋಡು ತಿಮ್ಮಪ್ಪ: ಅಷ್ಟೊಂದು ಗಾತ್ರದ ಗೆಡ್ಡೆ ಬೆಳೆದು ನಿಂತಿದೆ, ಅದಕ್ಕೆ ಆಪರೇಷನ್ ಮಾಡಿ ತೆಗೆಯಬೇಕಾದರೆ ಸಮಯ ಬೇಕಲ್ಲವೆ?

ಶ್ರೀ ಸಿ.ಬೈರೇಗೌಡ: ನಾನು ಅವರಿಗೇನು ಹೇಳಿಕೊಡಬೇಕಾಗಿಲ್ಲ. ನಮ್ಮ ಸರ್ಕಾರ ಇದ್ದಾಗ ನಾನು ತೆಗೆದುಕೊಂಡಿದ್ದ ಕ್ರಮಗಳ ಬಗ್ಗೆ ಅವರೇ ಪ್ರತ್ಯಕ್ಷದರ್ಶಿಗಳು. ಯಾರು ಈ ರೀತಿ ಆಪಾದನೆಗೆ ಒಳಪಟ್ಟಿದ್ದರೋ ಅಂಥ ಅಧಿಕಾರಿಯನ್ನು ದಸ್ತಗಿರಿ ಮಾಡಿಸಿ ಪೋಲೀಸ್ ಜೀಪಿನಲ್ಲಿ ಠಾಣೆಗೆ ಕಳಿಸಿರುವುದನ್ನು ತಾವೇ ನೋಡಿದ್ದೀರಿ. ನೀವು ಏನು ಮಾಡಿದ್ದೀರಿ? ಈ 103 ಅಧಿಕಾರಿಗಳ ಮೇಲೆ ಒಬ್ಬರ ಮೇಲಾದರೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಕಾಗೋಡುತಿಮ್ಮಪ್ಪ: ಪಿಳ್ಳೆ ಹಕ್ಕಿ ಸಿಕ್ಕಿದರೆ ಚರ ಚರ ಅಂತ ಚಾಕುವನ್ನು ಹಾಕಿದರು. ಆದರೆ ದೊಡ್ಡ ಹಕ್ಕಿಯನ್ನೇಕೆ ತಾವು ಹಿಡಿಯಲಿಲ್ಲ?

ಶ್ರೀ ಸಿ.ಬೈರೇಗೌಡ: ತಾವು ಏಕೆ ಹಿಡಿಯಲಿಲ್ಲ? ಆ ರೀತಿ ಹೇಳಿಕೊಂಡಿರುವವರು ತಾವು. ಇನ್ನೊಮ್ಮೆ ರಾಜ್ಯಪಾಲರ ಭಾಷಣವನ್ನು ಓದಲೆ? ಹಾಗಿದ್ದರೆ ರಾಜ್ಯಪಾಲರ ಭಾಷಣದಲ್ಲಿ ಈ ಪದಗಳನ್ನೆಲ್ಲ ಏಕೆ ಬಳಸಿದಿರಿ? ಪಾರದರ್ಶಕತೆ, ಭ್ರಷ್ಟಾಚಾರ ರಹಿತ, ಅದಕ್ಷತೆ ಎನ್ನತಕ್ಕ ಪದಗಳನ್ನು ರಾಜ್ಯಪಾಲರ ಭಾಷಣದಲ್ಲಿ ಬಳಸಿರತಕ್ಕವರು ತಾವು. 1994ರಲ್ಲಿ ನಡೆದಿರಲಿ ಅಥವಾ ತಾವು ಅಧಿಕಾರಕ್ಕೆ ಬಂದಮೇಲೆ ನಡೆದಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವುದು ತಮ್ಮ ಕರ್ತವ್ಯ. ತಾವೇ ಆ ರೀತಿ ಕೆಲಸ ಮಾಡಿದ್ದರೆ, ತಾವೇನು ರಾಜ್ಯಪಾಲರ ಭಾಷಣದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ತರಬೇಕಾದ ಅಗತ್ಯವಿದೆ, ಆಡಳಿತದಲ್ಲಿ ಭ್ರಷ್ಟಾಚಾರ ಮತ್ತು ಅದಕ್ಷತೆಯನ್ನು ಹೋಗಲಾಡಿಸಿ ಜನಪರ ಆಡಳಿತವನ್ನು ನೀಡಲು ಪ್ರಯತ್ನಿಸುತ್ತೇವೆಂದು

ಹೇಳಿದ್ದರೆ, ಅದಕ್ಕೆ ಅರ್ಥ ಬರುತ್ತಿತ್ತು. ಇವರ ಪ್ರಕಾರ ಜನಪರವಾದ ಆಡಳಿತ ಎಂದರೆ ಯಾರನ್ನು ಮುಟ್ಟುವುದಿಲ್ಲ, ಹಿಂದೆ ಬಂದರೆ ಒದೆಯುವುದಿಲ್ಲ, ಮುಂದೆ ಬಂದರೆ ಹಾಯುವುದಿಲ್ಲ. ಅದು ನಮ್ಮ ಸರ್ಕಾರದ ನೀತಿಯೆಂದು ರಾಜ್ಯಪಾಲರ ಭಾಷಣದಲ್ಲಿ ನಮೂದಿಸಿದ್ದರೆ ನಾವು ಇದನ್ನು ಪ್ರಶ್ನೆ ಮಾಡಲು ಹೋಗುತ್ತಿರಲಿಲ್ಲ. ನನಗೆ ತಿಳಿದಮಟ್ಟಿಗೆ ಇವರೆಲ್ಲರನ್ನು ಅಮಾನತ್ತಿನಲ್ಲಿಡಬೇಕೆಂದು ಲೋಕಾಯುಕ್ತದವರು ಪತ್ರವನ್ನು ಬರೆದಿದ್ದಾರೆ. ಆದರೆ ಯಾರನ್ನು ಸಹ ಅಮಾನತ್ತಿನಲ್ಲಿ ಇಟ್ಟಿಲ್ಲ. 103 ಜನರು ಇರುವುದರಿಂದ ಇದರ ವಿವರದ ಬಗ್ಗೆ ಹೇಳಲು ಹೋಗುವುದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ತಾವು ಮಂತ್ರಿಗಳಾಗಿ ಅನುಭವವನ್ನು ಹೊಂದಿದ್ದೀರಿ. ಅಮಾನತ್ತು ಮಾಡುವುದೊಂದೇ ಶಿಕ್ಷೆಯೆ?

SRI C.BYREGOWDA:- No, it is not a punishment. ಹಾಗಾದರೆ ಏನು ಕ್ರಮ ತೆಗೆದುಕೊಳ್ಳುವುದೇ ಬೇಡ.

ಶ್ರೀ ಕೆ.ಹೆಚ್ ರಂಗನಾಥ್: ಕ್ರಮ ತೆಗೆದುಕೊಳ್ಳಲು ಕಾನೂನು, ಕಟ್ಟಳೆಗಳು ಇರುವುದಿಲ್ಲವೆ? ಅದನ್ನು ಬಿಟ್ಟು ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟುಬಿಡುತ್ತಾರೆಯೇ?

ಶ್ರೀ ಸಿ.ಬೈರೇಗೌಡ: ಹಾಗಾದರೆ ಕಾನೂನಿನಲ್ಲಿ ಅಮಾನತ್ತು ಮಾಡಬಾರದೆಂದು ಇದೆಯೆ?

ಶ್ರೀ ಕೆ.ಹೆಚ್.ರಂಗನಾಥ್:ಮಾನ್ಯ ಬೈರೇಗೌಡರಿಗೆ ಏನಾಯಿತೆಂದರೆ, ಇಷ್ಟೊಂದು ಮಾತನಾಡಲು ಅವರಿಗೆ ಐದು ವರ್ಷ ಅವಕಾಶ ಇರಲಿಲ್ಲ. ಈಗ ಆ ಅವಕಾಶ ಬಂದಿದೆ. ಚೆನ್ನಾಗಿ ಪಾರ್ಟ್ ಮಾಡಬಹುದು. ತಾವು ಏನು ಹೇಳುತ್ತೀರಿ ಅದನ್ನು ಕೇಳಲು ನಮ್ಮ ಅಭ್ಯಂತರವೇನಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, suspension is not punishment. ಅದು ಎಲ್ಲರಿಗೂ ಗೊತ್ತಿದೆ. ಈ ಅಪರಾಧಿಗಳು ಏನಿದ್ದಾರೆ ಅವರಿಗೆ ನಾಚಿಕೆಯಾಗುತ್ತಿಲ್ಲ. ಭಯವೂ ಆಗುತ್ತಿಲ್ಲ. ಕೊನೆಯ ಪಕ್ಷ ನಾಚಿಕೆ ಬರಿಸುವುದಕ್ಕಾಗಿ ಅಮಾನತ್ತು ಮಾಡಬೇಕು ಎಂದು ನಮ್ಮ ಅಳಲು. ಹೌದು suspension is not punishment ಸಸ್ಪೆನ್ಷನ್ ಏಕೆ ಮಾಡುತ್ತೇವೆಂದರೆ ಅವರು ರೆಕಾರ್ಡ್‌ನ್ನು ಟ್ಯಾಂಪರ್ ಮಾಡಬಾರದು ಎಂದು ಮಾಡುತ್ತೇವೆ. ಅಮಾನತ್ತು ಮಾಡಿದರೆ ನಾಲ್ಕು ಜನರು ನೋಡುತ್ತಾರೆ, ಅವರಿಗೆ ನಾಚಿಕೆಯಾದರೂ ಬರುತ್ತದೆ ಎಂದು ನಾವು ಅಮಾನತ್ತು ಮಾಡಿ ಎಂದು ಮತ್ತೆ ಮತ್ತೆ ಒತ್ತಾಯ ಮಾಡುತ್ತಿರುವುದು.

ಶ್ರೀ ಕೆ.ಹೆಚ್.ರಂಗನಾಥ್: ತಪ್ಪು ಮಾಡುವವರಿಗೆ ನಾಚಿಕೆ ಇರುತ್ತದೆಯೆ? ನಾಚಿಕೆ

ಇದ್ದರೆ ಅವನೇಕೆ ತಪ್ಪು ಮಾಡಲು ಹೋಗುತ್ತಾನೆ.? ನಾಚಿಕೆ, ಭಯ ಇರುವವನು ತಪ್ಪು ಮಾಡಲು ಹೋಗುವುದಿಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಇದರ ಜೊತೆಗೆ ಮತ್ತೊಂದು ವಿಚಾರವನ್ನು ಹೇಳುವುದಾದರೆ, ಈ ದೇಶದಲ್ಲಿ, ರಾಜ್ಯದಲ್ಲಿ ರೂಲಿಂಗ್ ಪಾರ್ಟಿ ಎಂಬುದೆಲ್ಲ ಸುಳ್ಳು. ಐದು ವರ್ಷ ನೀವುಗಳು ರೂಲಿಂಗ್ ಪಾರ್ಟಿಯಲ್ಲಿರುತ್ತೀರಿ, ಮತ್ತೆ ಐದು ವರ್ಷ ಇವರು ರೂಲಿಂಗ್ ಪಾರ್ಟಿಯಲ್ಲಿ ಇರುತ್ತಾರೆ. ಆದರೆ ರೂಲಿಂಗ್ ಕ್ಲಾಸ್ ಎಂಬುದು ನಿಜ. ಈ ರೂಲಿಂಗ್ ಕ್ಲಾಸ್ ಏನಿದೆ ಅದು ಅಧಿಕಾರಶಾಹಿ ಎಂದು ಬೇಕಾದರೂ ಹೇಳಿ, ಅಥವಾ 160 ಕೋಟಿ ಮನ್ನಾ ಮಾಡಿಸುವ ಇವರುಗಳು ಯಾವ್ಯಾವ ಆಡಳಿತ ಪಕ್ಷ ಬಂದರೆ ಅದಕ್ಕೆ ಸರಿಯಾಗಿ ಓಲೈಸಿಕೊಂಡು, ಇದು ಮುಂದುವರೆದುಕೊಂಡು ಹೋಗುತ್ತದೆ. ಎಲ್ಲಿಯವರೆಗೆ ರಾಜಕೀಯ ಪಕ್ಷಗಳು ಕೆಲವು ಹಿಡಿತದಿಂದ ಹೊರಗಡೆ ಬರದಿದ್ದರೆ, ನಾವು ರಕ್ಷಣೆ ಮಾಡಲು ಹೋಗದಿದ್ದರೆ this will be a regular feature, a continuing feature.

ಶ್ರೀ ಕಾಗೋಡುತಿಮ್ಮಪ್ಪ: ಯಾವುದೇ ಸರ್ಕಾರ ಇದ್ದರೂ ಸಹ, ಸರ್ಕಾರಿ ಅಧಿಕಾರಿಗಳಿಗೆ ರಾಜ್ಯಾಂಗಬದ್ಧವಾಗಿ ಇರುವ ಹಕ್ಕು ಮತ್ತು ನಮ್ಮ ನಿಯಮಾವಳಿಗಳೇನಿದೆ ಅದರ ಮೂಲಕ ಒಬ್ಬರನ್ನು ಸರ್ಕಾರಿ ನೌಕರಿಯಿಂದ ತೆಗೆದುಹಾಕುವುದಾಗಲೀ, ಅದನ್ನು ಮಾಡುವ ವ್ಯವಸ್ಥೆಯೇನಿದೆ ಅದರಿಂದ ಇದನ್ನು ಬಹಳ ಸುಲಭವಾಗಿ ಮಾಡಲಾಗದಿರುವ ಪರಿಸ್ಥಿತಿ ಇದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಆಡಳಿತದಲ್ಲಿ ಸುಧಾರಣೆಯನ್ನು ಮಾಡದಿದ್ದರೆ ತಪ್ಪಿತಸ್ಥ ಅಧಿಕಾರಿಗಳನ್ನು ನಿಗದಿತ ಸಮಯದಲ್ಲಿ ಶಿಕ್ಷೆ ಕೊಡಲು ಆಗುವುದಿಲ್ಲವೆಂಬುದನ್ನು ಅರಿತು ಆ ರೀತಿ ತೀರ್ಮಾನಕ್ಕೆ ಬಂದಿರತಕ್ಕದ್ದು. ಅದಕ್ಕಾಗಿ ಪಕ್ಷಾತೀತವಾಗಿ ನಾವೆಲ್ಲರೂ ಸೇರಿ ವಿಚಾರ ಮಾಡಿ ಇದನ್ನು ಸರಿಪಡಿಸಲು ಪರಿಹಾರವನ್ನು ಕಂಡುಹಿಡಿಯಬೇಕಾದ ಅಗತ್ಯತೆ ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸಿದ್ದೇನೆ. ಅವರು ಪಕ್ಷಾತೀತವಾಗಿ ಆಡಳಿತ ಸುಧಾರಣೆಗಾಗಿ ಆಯೋಗ ಮತ್ತು ಹಣಕಾಸು ಆಯೋಗವನ್ನೂ ರಚಿಸಿದ್ದಾರೆ. ಅವರ ಸಲಹೆಗಳನ್ನು ತೆಗೆದುಕೊಂಡ ನಂತರ ನಾವು ಮಾಡೋಣ.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಛೇರ್ಮನ್‌ರವರೆ, ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ತಮ್ಮ ಸ್ಥಾನದಲ್ಲಿದ್ದುಕೊಂಡು ಮಾತನಾಡುತ್ತಾ 'ಬನ್ನಿಕೋಡ್‌ರವರು ಅತ್ತ ಕಡೆ ಹೋಗಿ ನಗುತ್ತಿದ್ದಾರೆ' ಎಂದರು. ಮಾನ್ಯ ಬೈರೇಗೌಡರು ಸಂಯುಕ್ತ ಜನತಾದಳದ ಅಧ್ಯಕ್ಷರಾಗಿದ್ದು, 1989 ರಿಂದ 1994 ರವರೆಗೆ ದಳದಲ್ಲಿ ಅವರ ಜೊತೆಗೂಡಿ ಒಟ್ಟು 23 ಶಾಸಕರುಗಳೊಂದಿಗೆ

ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಕಾರ್ಯ ನಿರ್ವಹಿಸುತ್ತಿದ್ದುದು ಅವರಿಗೂ ಗೊತ್ತಿದೆ. ಆದರೆ, ಚುನಾವಣಾ ಸಂದರ್ಭದಲ್ಲಿ ಬಿ.ಜೆ.ಪಿ. ಅವರೊಂದಿಗೆ ಸಖ್ಯ ಹೊಂದಿ, ಬಿ.ಜೆ.ಪಿ.ಯಲ್ಲಿರುವ ಸಿಟ್ಟಿಂಗ್ ಎಂ.ಎಲ್.ಎ.ಗಳಿಗೆ ಟಿಕೇಟ್ ಕೊಡಬೇಕೆಂದು ನೀತಿ ಮಾಡಿಕೊಂಡು ಹಿರೇಕೆರೂರು ಕ್ಷೇತ್ರದಲ್ಲಿದ್ದಂಥ ಬಿ.ಜೆ.ಪಿ. ಎಂ.ಎಲ್.ಎ.ಗೆ ಟಿಕೇಟ್ ಕೊಟ್ಟರು. ಆಗ ಅನಿವಾರ್ಯವಾಗಿ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಬೇಕೆಂದು ನನಗೆ ಜನರು ಆದೇಶ ಕೊಟ್ಟರು. ಅದರಂತೆಯೇ ನಾನು ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಗೆದ್ದಾಗ 'ನಾವು ಮುಂದೆ ಏನು ಹೇಳುತ್ತೇವೆಯೋ, ಯಾವ ಪಕ್ಷಕ್ಕೆ ಹೋಗಬೇಕೆಂದು ಹೇಳುತ್ತೇವೆಯೋ ಆ ಪಕ್ಷಕ್ಕೆ ಹೋಗಬೇಕು' ಎಂದು 'ನೀವು ಕಾಂಗ್ರೆಸ್ ಪಕ್ಷಕ್ಕೆ ಸೇರಿದರೆ ಅಭಿವೃದ್ಧಿ ಕೆಲಸವಾಗುತ್ತದೆ' ಎಂದು ಹೇಳಿ ಜನರು ನನಗೆ ಆದೇಶ ಕೊಟ್ಟಿದ್ದರಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡೆ. ಮಾನ್ಯ ಬೈರೇಗೌಡರು ಈ ರೀತಿ ತಮಗೆ ಗೊತ್ತಿರುವ ವಿಷಯದಲ್ಲಿ ಕೆಣಕುತ್ತಾರೆಂದು ನಾನು ಭಾವಿಸಿರಲಿಲ್ಲ. ನನ್ನನ್ನು ಕಾಂಗ್ರೆಸ್‌ನವರು ಸೆಳೆದುಕೊಂಡರು ಎನ್ನುವ ಮಾತನ್ನು ಏನು ಹೇಳಿದ್ದಾರೆ, ಕಾಂಗ್ರೆಸ್‌ನವರು ನನಗೆ ಒತ್ತಾಯ ಮಾಡಲಿಲ್ಲ, ಜನರ ಆದೇಶದ ಪ್ರಕಾರ ನಾನು ಆ ಪಕ್ಷವನ್ನು ಸೇರಿದ್ದೇನೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳಬಯಸುತ್ತೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಛೇರ್ಮನ್‌ರವರೆ, ಈ ಪಟ್ಟಿಯಲ್ಲಿ ಕೆಲವರಿದ್ದಾರೆ. ಆ ಪಟ್ಟಿಯಲ್ಲಿ ಇರುವವರೆಲ್ಲರನ್ನೂ ನಾನು ಓದುವುದಕ್ಕೆ ಹೋಗುವುದಿಲ್ಲ. ನಮ್ಮ ಸ್ನೇಹಿತರಾದ ಬನ್ನಿಕೋಡ್‌ರವರಾದ ತಾವು ಅತ್ತ ಕಡೆ (ಆಡಳಿತ ಪಕ್ಷ) ಹೊರಟು ಹೋಗಿದ್ದೀರಾ?

ಶ್ರೀ ಬಿ.ಹೆಚ್.ಬನ್ನಿಕೋಡ್: ಬೈರೇಗೌಡರೆ, 'ಸಿಂಧ್ಯರವರ ಮಾತನ್ನು ಕೇಳಿ ನೀವು ಕಾಂಗ್ರೆಸ್ ಸೇರಿದ್ದೀರಾ?' ಎಂದು ನನಗೆ ಏನು ಕೇಳುತ್ತಿದ್ದೀರಿ, ನಾನು ಕಾಂಗ್ರೆಸ್ಸಿನ ಸಹ ಸದಸ್ಯನಾಗಿದ್ದೇನೆಂದು ಈ ಸಭೆಯಲ್ಲಿ ಈಗಾಗಲೇ ಸ್ಪಷ್ಟಪಡಿಸಿದ್ದೇನೆ.

ಶ್ರೀ ಸಿ.ಬೈರೇಗೌಡ: ನೀವು ನಮ್ಮ ಆತ್ಮೀಯ ಸ್ನೇಹಿತರಾಗಿದ್ದು, ಈಗ ತಾವು ಹೊಸ ಮನೆಗೆ ಹೋಗಿದ್ದೀರಿ. ಹೊಸ ಮನೆಯಲ್ಲಿ ತಮಗೆ ಒಳ್ಳೆಯದಾಗಲೆಂದು ನಾವು ಹಾರೈಸುತ್ತೇವೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ನೀವು ಹಾಕಿಕೊಂಡ ಒಂದು ಕಾರ್ಯಕ್ರಮದಿಂದ ಅನಿವಾರ್ಯವಾಗಿ ನಾನು ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಚುನಾವಣೆಯಲ್ಲಿ ಗೆದ್ದು ಜನರ ಆದೇಶದ ರೀತ್ಯ ಕಾಂಗ್ರೆಸ್ ಪಕ್ಷದ ಸಹ ಸದಸ್ಯನಾಗಿದ್ದೇನೆಯೇ ವಿನಾ ನನ್ನಲ್ಲಿ ತಪ್ಪು ಏನೂ ಇಲ್ಲ. ಇದೊಂದು ಚರ್ಚೆಯ ವಿಷಯವಲ್ಲ. ಚುನಾವಣೆಯಲ್ಲಿ ಗೆದ್ದು

ಬಂದಿರುವ ನಾವುಗಳು ಜನರ ಆದೇಶ ಪಾಲಿಸೋಣವೆಂದು ಹೇಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ನಾನು ರಾಜ್ಯಪಾಲರ ಭಾಷಣವನ್ನು ಅನೇಕ ಬಾರಿ ಓದಿದ್ದೇನೆ. ಇವೊತ್ತು ಬಹಳ ಮುಖ್ಯವಾಗಿ ಈ ದೇಶ ಹೊಸ ಪೀಳಿಗೆಯ ಯುವಕರೇನಿದ್ದಾರೆ, ಅವರಿಗೆ ಭವಿಷ್ಯದಲ್ಲಿ ಒಂದು ಹೊಸ ಆಶಾಕಿರಣ ಮೂಡಿಸತಕ್ಕಂಥ ಕಾರ್ಯಕ್ರಮಗಳನ್ನು ರೂಪಿಸಲು ಯೋಚಿಸುವುದು ಕರ್ತವ್ಯವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದಾಗ ಈ ರಾಜ್ಯಪಾಲರ ಭಾಷಣದಲ್ಲಿ ಏನೂ ಕಾಣಲಿಲ್ಲ. ಮುಂದಿನ ಪೀಳಿಗೆಯ ಯುವ ಜನರು 'ಪರವಾಗಿಲ್ಲ, ನಾವು ಈ ದೇಶದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಿ ಬದುಕುವಂಥ ವಾತಾವರಣ ಸೃಷ್ಟಿಯಾಗಿದೆ' ಎಂದುಕೊಳ್ಳುವ ದೃಷ್ಟಿಕೋನದಿಂದ ಗಮನಿಸಿದಾಗ ಆ ಕುರಿತ ಪ್ರಸ್ತಾಪ ಕೂಡ ರಾಜ್ಯಪಾಲರ ಭಾಷಣದಲ್ಲಿ ಇಲ್ಲವೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರು ಈ ರಾಜ್ಯದಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತಿದ್ದಾರೆಂದು ತಿಳಿದುಕೊಂಡಿದ್ದೆ. ಆದರೆ, ಏನೂ ಇಲ್ಲ. ಇವರು ಭ್ರಷ್ಟರಿಗೋಸ್ಕರ ಹೊಸ ಅಧ್ಯಾಯವನ್ನು ಪ್ರಾರಂಭಿಸಿರುವುದು. ಯುವಕರನ್ನು ಯಾವ ರೀತಿ ಕಡೆಗಣಿಸಿದ್ದಾರೆನ್ನುವುದಕ್ಕೆ ಉದಾಹರಣೆಗಳ ಮೂಲಕ ಹೇಳುವುದಾದರೆ, ಈ ರಾಜ್ಯದಲ್ಲಿ ಹೊಸ ಅಧ್ಯಾಯವನ್ನು ಹೊಸ ಸಹಸ್ರಮಾನದ ಪ್ರಾರಂಭದಲ್ಲಿ ಆ ದಿಕ್ಕಿನಲ್ಲಿ ಆಲೋಚಿಸುವುದಕ್ಕೆ ಹೋಗಲಿಲ್ಲ. ಅದಕ್ಕೆ ಬದಲಾಗಿ ಅವರು ಒಬ್ಬ ಸಾಮಾನ್ಯ ರಾಜಕಾರಣಿಯಾಗಿ ಮುಖ್ಯಮಂತ್ರಿಯಾಗಿರುವುದರ ಕುರಿತು ನನಗೆ ವ್ಯಥೆಯಾಗುತ್ತಿದೆ. ನಾನು ಬಳಕೆಯಲ್ಲಿರುವ ಎಲ್ಲಾ ಪದಗಳನ್ನು ಬಳಸಲು ಇಷ್ಟಪಡುವುದಿಲ್ಲ. ಒಬ್ಬ ಸಾಮಾನ್ಯ ರಾಜಕಾರಣಿಯಾದವನು ಯಾವಾಗಲೂ ಮುಂದಿನ ಚುನಾವಣೆ ಬಗ್ಗೆ ಆಲೋಚಿಸುತ್ತಾನೆ. ನಾನು ಆಗಲೇ ತಿಳಿಸಿದಂತೆ ಮುಖ್ಯಮಂತ್ರಿಯಾಗಿರುವ ಕೃಷ್ಣರವರು, ಬನ್ನಿಕೋಡ್ ಅವರೂ ಒಳಗೊಂಡಂತೆ ಇತರರೆಲ್ಲರನ್ನೂ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವಾಗ ಯೋಚಿಸುತ್ತಿದ್ದುದು ಬರೀ ನಾಳೆಯ ಬಗ್ಗೆ ಮಾತ್ರ. ಮುಂದೆ ನಾಲ್ಕೂವರೆ ವರ್ಷಗಳ ಬಳಿಕ ಬರುವ ಚುನಾವಣೆ ಬಗ್ಗೆ ಕೂಡ ಅವರು ಯೋಚನೆ ಮಾಡುತ್ತಿಲ್ಲ. ಕೇವಲ ನಾಳೆ ಬಗ್ಗೆ ಮಾತ್ರ ಅವರು ಆಲೋಚಿಸುತ್ತಿದ್ದು, ನಾಳೆ ನಾನು ಅಧಿಕಾರದಲ್ಲಿ ಯಾವ ರೀತಿ ಉಳಿದುಕೊಳ್ಳಬೇಕು? ಅದಕ್ಕಾಗಿ ಯಾರ್‍ಯಾರನ್ನು ಸೆಳೆದುಕೊಳ್ಳಬೇಕೆಂದು ಆಲೋಚನೆ ಮಾಡಿ ಇವರುಗಳನ್ನು ತಮ್ಮ ಪಕ್ಷದತ್ತ ಸೆಳೆದುಕೊಂಡಿದ್ದಾರೆ. ಇವೊತ್ತಿನ ದಿವಸ ಎಲ್ಲವೂ ಕೂಡ ನೆಟ್ಟಗಿಲ್ಲ. ಅದನ್ನು ಅರ್ಥೈಸಿಕೊಳ್ಳಬೇಕಾಗಿರುವುದು ಬಹಳ ಮುಖ್ಯ. ಇವೊತ್ತು ಅವರ ಪಕ್ಷದಲ್ಲಿರುವ ಕೆಲವು ಹಿರಿಯ ಮುಖಂಡರುಗಳು ಅವರ ಅನುಯಾಯಿಗಳ ಸಮಾನ ಮನಸ್ಕರ ಸಭೆಗಳನ್ನು ಕರೆಯಲು ಕೂಡ ಮುಂದಾಗಿದ್ದಾರೆ. ಈ ರಾಜ್ಯದಿ,ದ ಚುನಾಯಿತರಾಗಿ ಹೋಗಿರುವ ಒಬ್ಬ ಲೋಕಸಭಾ ಸದಸ್ಯರು, ಅವರ ಹೆಸರನ್ನು ಇಲ್ಲಿ ಪ್ರಸ್ತಾಪಿಸುವುದು

ಉಚಿತವಲ್ಲವೆನ್ನುವ ಕಾರಣಕ್ಕಾಗಿ ಹೇಳುತ್ತಿಲ್ಲ. ಅವರು ತಮ್ಮ ಬೆಂಬಲಿಗರ, ಸಮಾನ ಮನಸ್ಕರ ಸಭೆ ಕರೆಯುವುದಕ್ಕೆ ಮುಂದಾಗಿದ್ದಾರೆ. ಆ ಸಮಾನ ಮನಸ್ಕರ ಸಭೆ ಕೂಡ ಮುಗಿದು ಹೋಯಿತು ಎಂಬುದನ್ನು ಗಮನಿಸಿದಾಗ ಮಾನ್ಯ ಮುಖ್ಯಮಂತ್ರಿಗಳು ಒಬ್ಬ ರಾಜಕಾರಣಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆಯೇ ಹೊರತು ಒಬ್ಬ ಮುತ್ಸದ್ಧಿಯಾಗಿ ಕೆಲಸ ಮಾಡುತ್ತಿಲ್ಲ. Politican thinks of next elections, but Statesman thinks of future generation. ಮುಂದಿನ ಜನರೇಶನ್ ಬಗ್ಗೆ ದೂರಾಲೋಚನೆಯಿಟ್ಟುಕೊಂಡು ಆಲೋಚಿಸುವುದಕ್ಕೆ ಇಂತಹವರಿಂದ ಸಾಧ್ಯವಾಗದಿದ್ದರೆ ಅದು ಬೇರೆಯವರಿಂದಲೂ ಕೂಡ ಸಾಧ್ಯವಾಗುವುದಿಲ್ಲ. ಆದುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಸಂಪೂರ್ಣ ವೈಫಲ್ಯತೆಯನ್ನು ಹೊಂದಿದ್ದಾರೆ ಎಂಬುದನ್ನು ಕೇಳಿದಾಗ ನನ್ನ ಮನಸ್ಸಿಗೆ ವ್ಯಥೆಯಾಗುತ್ತದೆ. ಇನ್ನು ಯಾವ ರೀತಿ ಇವರು ಹೊಸ ಕೆಲಸ ಪ್ರಾರಂಭಿಸುತ್ತಾರೆ? ಇವರು ವಾಸ ಮಾಡುತ್ತಿರುವಂಥ ಮನೆಗಳ ವಾಸ್ತು ಕುರಿತು ಹೇಳುವುದಾದರೆ, ಒಂದೊಂದು ಮನೆಯ ವಾಸ್ತು ಬದಲಿಸಲು ಸುಮಾರು 30, 40, 50 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ನಾನು ಹಿಂದೆ ಸಚಿವನಾಗಿ ವಾಸಿಸುತ್ತಿದ್ದ ಮನೆಗೆ ಈಗ ಕಂದಾಯ ಸಚಿವರಾಗಿರುವ ಶ್ರೀಕಂಠಯ್ಯನವರು ವಾಸಿಸುತ್ತಿದ್ದು, ನನ್ನ ಅಂದಾಜು ಪ್ರಕಾರ ಆ ಮನೆಗೆ 25-30 ಲಕ್ಷ ರೂಪಾಯಿಗಳಷ್ಟು ಹಣ ಖರ್ಚಾಗಿದೆ. ಇವೊತ್ತಿನ ದಿವಸ ಆ ಮನೆಯ ಆಕಾರವೇ ಬದಲಾಗಿದೆ!

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮಾನ್ಯ ಛೇರ್ಮನ್‌ರವರೆ, ಈಗ ನಾನು ವಾಸಿಸುತ್ತಿರುವ ಮನೆಗೆ ವಿಶೇಷವಾಗಿ ಏನೂ ರಿಪೇರಿ ಮಾಡಿಸಿಲ್ಲ. ಈ ಹಿಂದೆ ಸಚಿವರಾಗಿ ಆ ಮನೆಯಲ್ಲಿ ವಾಸಿಸುತ್ತಿದ್ದ ಬೈರೇಗೌಡರು ತಮ್ಮ ಬೆಡ್‌ರೂಮಿಗೆ ಮಾಡಿಸಿಕೊಂಡಿರುವ ಸೌಕರ್ಯಗಳನ್ನು ನೋಡಿದರೆ ಯಾವ ಪಂಚತಾರಾ ಹೋಟೆಲಿನ ಬೆಡ್‌ರೂಮ್ ಸಹ ಆ ತರಹ ಇರಲಿಕ್ಕಿಲ್ಲ. ಅಷ್ಟರ ಮಟ್ಟಿಗೆ ಬೆಡ್‌ರೂಮನ್ನು ನಿರ್ಮಿಸಿಕೊಂಡಿದ್ದಾರೆ. ನಾನು ಆ ಮನೆಗೆ ಹೋದಾಗ ಏನೂ ಮಾಡಿಸದೆ ಬರೀ ಸುಣ್ಣ ಬಣ್ಣ ಮಾತ್ರ ಬಳಿಸಲಾಗಿದೆ. ಒಬ್ಬ ವಾಸ್ತು ತಜ್ಞರು ನನ್ನ ಬಳಿಗೆ ಬಂದು 'ಸ್ವಾಮಿ, ನೀವು ಆ ಬೆಡ್‌ರೂಮಿಗೆ ಕಾಲಿಡಬೇಡಿ' ಎಂದು ಹೇಳಿದ್ದಕ್ಕೆ ನಾನು ಯಾವುದೋ ಒಂದು ಚಿಕ್ಕ ಕೊಠಡಿಯಲ್ಲಿ ಸೇರಿಕೊಂಡಿದ್ದೇನೆ. ಆ ಬೆಡ್‌ರೂಮಿನಲ್ಲಿ ಬೈರೇಗೌಡರು ಅಳವಡಿಸಿರುವ ಸೌಕರ್ಯಗಳನ್ನು ನೋಡಬೇಕು, ಅದಕ್ಕಾಗಿ ನಾನೇಕೆ ಹಣ ಖರ್ಚು ಮಾಡಿಸಲಿ? ಆ ಬೆಡ್‌ರೂಮನ್ನು ತೋರಿಸುವುದಕ್ಕೆ ಮಾನ್ಯ ಸಿಂಧ್ಯರವನ್ನು ಕರೆದುಕೊಂಡು ಹೋಗುತ್ತೇನೆ, ಜೊತೆಗೆ ಬೈರೇಗೌಡರನ್ನೂ ಕರೆದುಕೊಂಡು ಹೋಗುತ್ತೇನೆ.

ಆ ಮನೆಯ ಮೇಲುಗಡೆ ಖಾಲಿ ಜಾಗವಿದ್ದು, ಏನನ್ನೂ ಕಟ್ಟಿರಲಿಲ್ಲ. ಬೈರೇಗೌಡರು ಮಂತ್ರಿಯಾದ ಬಳಿಕ ಅಲ್ಲೊಂದು ವಿಶೇಷವಾದ ಬೆಡ್‌ರೂಮನ್ನು

ಕಟ್ಟಿಸಿಕೊಂಡಿದ್ದಾರೆ. ಅದರ ಜೊತೆಗೆ ಇನ್ನಿತರ ವ್ಯವಸ್ಥೆಗಳನ್ನೂ ಮಾಡಿಸಿಕೊಂಡಿದ್ದಾರೆ. ಈ ಬೆಡ್‌ರೂಮಿನ ಮುಂದೆ ಯಾವ ಪಂಚತಾರಾ ಹೋಟೆಲಿನ ಬೆಡ್‌ರೂಮು ಸಹ ಇಲ್ಲ, ಅಷ್ಟು ಚೆನ್ನಾಗಿ ವ್ಯವಸ್ಥೆಗಳನ್ನು ಮಾಡಿಸಿದ್ದಾರೆ. ನನಗೆ ದುಃಖವಾಯಿತು, ನಾನು ಅಲ್ಲಿ ಮಲಗುವಂತಿಲ್ಲ, ಏನು ಮಾಡಲಿ?

ಶ್ರೀ ಸಿ.ಬೈರೇಗೌಡ: ಅಲ್ಲಿ ಅವಶ್ಯಕತೆಯಿದ್ದುದರಿಂದ ಕೊಠಡಿಯನ್ನು ಕಟ್ಟಿಸಲಾಗಿದೆಯೇ ವಿನಾಃ ವಾಸ್ತುಗೋಸ್ಕರ ಕಟ್ಟಿದ್ದಲ್ಲ. ಆದರೆ, ಇವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಿಂದಿಡಿದು ಕಂದಾಯ ಮಂತ್ರಿಗಳಾದ ಶ್ರೀಕಂಠಯ್ಯನವರೆಗೆ ಅವೈಜ್ಞಾನಿಕವಾಗಿರುವ ವಾಸ್ತುವನ್ನು ನಂಬಿಕೊಂಡು ಕೋಟಿಗಟ್ಟಳೆ ಸಾರ್ವಜನಿಕರ ಹಣವನ್ನು ಖರ್ಚು ಮಾಡಿದ್ದೀರಿ. ಇದು ಏತಕ್ಕಾಗಿ? ಸಾರ್ವಜನಿಕರ ಹಣ. ತಮ್ಮ ಸ್ವಂತ ಮನೆಯಾಗಿದ್ದರೆ ಪ್ರಪಂಚದ ಯಾವ ಮೂಲೆಯ ವಾಸ್ತುಶಿಲ್ಪಿಯನ್ನಾದರೂ ಕರೆಸಿ ಸಲಹೆ ಪಡೆದು ಬದಲಾವಣೆ ಮಾಡಿಕೊಳ್ಳಿ ಬೇಡ ಎಂದು ಹೇಳುವುದಿಲ್ಲ. ಆದರೆ ತಮ್ಮ ವೈಯಕ್ತಿಕವಾದ ನಂಬಿಕೆಗೆ ಸಾರ್ವಜನಿಕರ ಹಣವನ್ನು ಏಕೆ ಖರ್ಚುಮಾಡುತ್ತಿದ್ದೀರಿ? ತಮಗೆ ಮನಸ್ಸು ಹೇಗೆ ಬರುತ್ತದೆ? ಮುಖ್ಯಮಂತ್ರಿಗಳ ಮನೆಗೆ ಏನು ಮಾಡಲಿಲ್ಲವೆ ಹೇಳಿ?

ಶ್ರೀ ಕೆ.ಹೆಚ.ರಂಗನಾಥ್: ನನಗೆ ಅದರ ಬಗ್ಗೆ ಗೊತ್ತಿಲ್ಲ. ಗೊತ್ತಿಲ್ಲದಿರುವ ವಿಚಾರದ ಬಗ್ಗೆ ಕೇಳಿದರೆ ನಾನು ಏನು ಹೇಳಲಿ? ನಾನು ಎಲ್ಲರ ಮನೆಗೆ ಹೋಗಿ ನೋಡಿಕೊಂಡು ಬರಬೇಕೆ? ಒಂದು ವೇಳೆ ನೋಡಿದರೂ ನಾನೇನು ಇಂಜಿನಿಯರ್ ಅಲ್ಲವಲ್ಲ, ಲೆಕ್ಕಾಚಾರ ಮಾಡಲು?

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಬೈರೇಗೌಡರು ಹೇಳಿರುವ ವಿಚಾರದಲ್ಲಿ ನನ್ನ ಮನೆಯ ಒಂದು ಉದಾಹರಣೆಯನ್ನು ಹೇಳುತ್ತೇನೆ. ಸ್ಯಾಂಕಿ ರಸ್ತೆಯಲ್ಲಿರುವ ಮನೆಯಲ್ಲಿ ನನಗಿಂತ ಹಿಂದೆ ಲೋಕಾಯುಕ್ತದವರು ಇದ್ದರು. ನಾನು ಅಲ್ಲಿಗೆ ಬಂದೆ. ಅದಕ್ಕೂ ಮೊದಲು ಶ್ರೀಕಂಠಯ್ಯನವರು ಅಲ್ಲಿ ಇದ್ದರಂತೆ, ತಮ್ಮ ಮಗ ಒಂದು ಸಲ ಬಂದು ನಮ್ಮ ತಂದೆ ಇಲ್ಲೇ ಮಲಗುತ್ತಿದ್ದರು ಎಂದು ತೋರಿಸಿದ್ದ. ನಮ್ಮ ಸರ್ಕಾರವಿದ್ದಾಗ ಕೇವಲ ಕರ್ಟನ್‌ಗಳು, ಸೋಫಾಕವರ್‌ಗಳು, ಮತ್ತು ಸುಣ್ಣಬಣ್ಣವನ್ನು ಮಾತ್ರ ಮಾಡಿಸಿದ್ದೆವು. ಬೇಕಾದರೆ ತಾವು ಲೆಕ್ಕ ತೆಗೆದು ನೋಡಿ ಯಾರ್ಯಾರು ಎಷ್ಟು ಖರ್ಚು ಮಾಡಿದ್ದಾರೆ ಅವರವರ ಮನೆಗಳಿಗೆ ಎಂಬುದನ್ನು ನೋಡಿ. ಆದರೆ ಇವತ್ತು ಈ ಮನೆಗಳನ್ನು ಇವರುಗಳೇ ಕೊಂಡುಕೊಂಡಿದ್ದಾರೋ, ಇವರೇನು ಶಾಶ್ವತವಾಗಿ ಇಲ್ಲೇ ಇರುತ್ತಾರೋ ಎಂಬ ಭಾವನೆ ನಮಗೆ ಬಂದಿದೆ. ನನ್ನ ಮನೆಯನ್ನು ಮೂರು ಜನರಿಗೆ ಅಲಾಟ್ ಮಾಡಿದರು. ಮೂರು ಜನರು ಸಹ ಅವರವರ ಕುಟುಂಬದವರನ್ನು ಕರೆದುಕೊಂಡು ಬಂದು ನೋಡಿ ಹೋದರು. ಕೊನೆಗೆ ಒಬ್ಬರು ಬಂದರು, ಅವರು ನಾನು ಮನೆಯನ್ನು ಇನ್ನು ಖಾಲಿಯೇ ಮಾಡಿಲ್ಲ, ಅಷ್ಟರಲ್ಲಿ ಬಂದು

ನಮ್ಮ ಕಛೇರಿಗೆ ಸೇರಿಬಿಟ್ಟರು. ರಾತ್ರೋರಾತ್ರಿ ಬಾಗಿಲು ಹೊಡೆದು ಗೇಟನ್ನು ಹೊಡೆದು ಬದಲಾವಣೆ ಮಾಡಿದರು. ನಾನು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳುವುದೇನೆಂದರೆ, ಅರ್ಬನ್ ಆರ್ಟ್ ಕಮೀಷನ್ ಎಂದು ಇದೆ, ಅದರ ಪ್ರಕಾರ ಈ ವಿಧಾನಸೌಧದ ಸುತ್ತಮುತ್ತ ಇರತಕ್ಕ ಕಟ್ಟಡಗಳಿಗೆ ಯಾವುದೇ ಬದಲಾವಣೆ ಮಾಡಬೇಕಾಗಿದ್ದರೆ ಆ ಅಥಾರಟಿಯ ಅನುಮತಿಯನ್ನು ತೆಗೆದುಕೊಳ್ಳಬೇಕೆಂದು ಇದೆ. ಮಾನ್ಯ ಮುಖ್ಯಮಂತ್ರಿಗಳು ಬಾಗಿಲ ದಿಕ್ಕನ್ನು ಬದಲಾವಣೆ ಮಾಡಿರುವುದು ಒಂದು ಕಡೆಯಾದರೆ, ನನ್ನ ಮನೆಯಲ್ಲಿ ಪಾರ್ಕನ್ನೆಲ್ಲ ಹೊಡೆದು ಎರಡು ಗೇಟನ್ನು ಮಾಡಿ ಒಂದು ಗೇಟು ಪ್ರೈವೇಟ್ ಪಾರ್ಕಿಂಗ್‌ಗಾಗಿ ಮತ್ತೊಂದು ಗೇಟ್ ಕಛೇರಿಗೆ ಹೋಗಲು ಮಾಡಿದ್ದಾರೆ. ಇದಕ್ಕೆಲ್ಲ ಎಷ್ಟು ಖರ್ಚಾಗಿದೆ? ಇದನ್ನು ಮಾಡಬೇಕಾದರೆ ಅರ್ಬನ್ ಆರ್ಟ್ ಕಮೀಷನ್‌ನವರಿಂದ ಅನುಮತಿಯನ್ನು ತೆಗೆದುಕೊಂಡಿದ್ದಾರೆಯೇ? ಸರ್ಕಾರದ ಸಚಿವರುಗಳು ಸರ್ಕಾರದ ಕಾನೂನುಗಳನ್ನು ಉಲ್ಲಂಘನೆ ಮಾಡಿದರೆ ಇದರ ಬಗ್ಗೆ ಕೇಳಲು ಯಾವ ಅಧಿಕಾರಿಗೆ ತಾನೆ ನೈತಿಕವಾದ ಹಕ್ಕು ಇರುತ್ತದೆ? ನಾಳೆ ಮಾನ್ಯ ಮುಖ್ಯಮಂತ್ರಿಯವರ ಬದಲಾವಣೆಯಾಗಬಹುದು, ಆ ರೀತಿ ಆಗದಿರಲಿ ಎಂದು ನಮ್ಮ ಹಾರೈಕೆ, ಬೇರೆ ಮಂತ್ರಿಗಳನ್ನು ತೆಗೆದುಕೊಳ್ಳಬಹುದು, ಹಾಲಿ ಇರುವ ಕೆಲವರನ್ನು ತೆಗೆದು ಹಾಕಬಹುದು, ಹೊಸದಾಗಿ ಬಂದವರು ಅವರಿಗೆ ಬೇಕಾದಂತೆ ನಾಲ್ಕು ಗೇಟುಗಳನ್ನು ಮಾಡಿಕೊಳ್ಳುವುದು, ಮತ್ತೊಂದನ್ನು ಮಾಡಿಕೊಳ್ಳುವುದು - ಹೀಗೆಯೆ ನಡೆದುಕೊಂಡು ಹೋದರೆ ಇದು ಯಾರ ಆಸ್ತಿ? ಇದು ಯಾರ ಹಣ? ಇದೇನು ನಮ್ಮ ಅಪ್ಪನ ಮನೆಗಳೆ? ತಮ್ಮ ಸ್ವಂತ ಮನೆಗಳಿದ್ದರೆ ತಮಗೆ ಹೇಗೆ ಬೇಕೊ ಹಾಗೆ ವಾಸ್ತುಗಳನ್ನು ಮಾಡಿಕೊಳ್ಳಲಿ, ಆದರೆ ಸರ್ಕಾರದ ಕಟ್ಟಡ ಮತ್ತು ಸರ್ಕಾರದ ಹಣವನ್ನು ಈ ರೀತಿ ಸ್ವೇಚ್ಛತೆಯಿಂದ ಖರ್ಚು ಮಾಡುವುದಾದರೆ ಹೇಗೆ? We are the trustees of the public, ಇದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ?

ಛೇರ್ಮನ್: ಇದು ಎಲ್ಲರ ಕಾಲದಲ್ಲೂ ಇತ್ತು. ಆದರೆ ಒಬ್ಬರ ಕಾಲದಲ್ಲಿ ಸ್ವಲ್ಪ ಹೆಚ್ಚು ಮತ್ತೊಬ್ಬರ ಕಾಲದಲ್ಲಿ ಸ್ವಲ್ಪ ಕಡಿಮೆಯಾಗಿರಬಹುದು.

ಶ್ರೀ ಸಿ. ಬೈರೇಗೌಡ: ಈ ಹಿಂದೆ ಸಹ ಈ ವಾಸ್ತುವನ್ನು ನಂಬಿರುವ ಜನರು ಇದ್ದಾರೆ. ಆ ಧೀರೇಂದ್ರ ಬ್ರಹ್ಮಚಾರಿಯನ್ನು ನಂಬುತ್ತಿದ್ದವರು ಯಾರು? ಆ ಚಂದ್ರಸ್ವಾಮಿಯನ್ನು ನಂಬಿ ಅವರ ಮಾತುಗಳನ್ನು ಕೇಳಿದವರು ಏನಾದರು? ನೀವು ಏಕೆ ಇದನ್ನೆಲ್ಲ ನಂಬಲು ಹೋಗುತ್ತಿದ್ದೀರಿ? ಯಾರಿಗೆ ತನ್ನ ಮೇಲೆಯೆ ನಂಬಿಕೆ, ವಿಶ್ವಾಸ ಇಲ್ಲವೋ ಅವರು ಈ ರೀತಿ ವಾಸ್ತು ಮತ್ತೊಂದನ್ನು ನಂಬುತ್ತಾರೆ. ಆದ್ದರಿಂದ ಇವರು ಬಹಳ ದುರ್ಬಲ ಸರ್ಕಾರದವರು ಎಂಬುದಕ್ಕೆ ಇದೇ ಕಾರಣ. ಒಂದು ಕಡೆ ಬೇರೆ ಪಕ್ಷದ ಸದಸ್ಯರುಗಳನ್ನು ಸೆಳೆದುಕೊಳ್ಳುವುದು, ಮತ್ತೊಂದು ಕಡೆ ವಾಸದ ಮನೆಗಳಿಗೆ ವಾಸ್ತುವನ್ನು ಅಳವಡಿಸುವುದು. ಮಾನ್ಯ ಶ್ರೀಕಂಠಯ್ಯನವರು ನನ್ನ ಮನೆಯ ದೊಡ್ಡ ರೂಮಿನಲ್ಲಿ ಸೇರಲಿಲ್ಲ, ಒಂದು ಸಣ್ಣ ರೂಮಿನಲ್ಲಿ ಇದ್ದೇನೆ ಎಂದು ಹೇಳಿದ್ದಾರೆ.

ಹಾಗಿದ್ದರೆ ತಾವು ಅಷ್ಟೊಂದು ಅಂಜುಬರುಕರೆ?

ಶ್ರೀ ಕೆ.ಹೆಚ್.ರಂಗನಾಥ್: ತಮ್ಮ ಮನೆಯಲ್ಲೇನು ಪಂಚತಾರಾ ಹೋಟೆಲ್‌ನ ರೀತಿ ರೂಮು ಇದೆ ಅದರಲ್ಲಿ ಶ್ರೀಕಂಠಯ್ಯನವರಿಗೆ ಮಲಗಿದರೆ ನಿದ್ರೆಯೇ ಬರಲಿಲ್ಲವಂತೆ, ತಾವು ಹೇಗೆ ಐದು ವರ್ಷ ಮಲಗಿದ್ದಿರೋ ನನಗಂತೂ ಗೊತ್ತಿಲ್ಲ.

ಶ್ರೀ ಸಿ.ಬೈರೇಗೌಡ: ಅವರು ಒಂದು ದಿನವೂ ಆ ರೂಮಿನಲ್ಲಿ ಮಲಗಲು ಹೋಗಲಿಲ್ಲ. ಒಂದು ವೇಳೆ ಮಲಗಿದ್ದರೆ ಸುಖವಾದ ನಿದ್ರೆ ಬರುತ್ತಿತ್ತು. ನಾನು ನಾಲ್ಕೂವರೆ ವರ್ಷ ಸುಖವಾಗಿ ಆ ಕೋಣೆಯಲ್ಲಿ ಮಲಗಿದ್ದೇನೆ. ಆ ಕೋಣೆಯೇನು ಪಂಚತಾರಾ ಹೋಟೆಲ್ ರೀತಿ ಇಲ್ಲ. ಅದು ವಿಶಾಲವಾಗಿದೆಯಷ್ಟೆ ಮತ್ತೇನು ಇಲ್ಲ. ಎಲ್ಲ ಕೋಣೆಗಳಿಗೆ ಇರುವಂತೆ ಅದಕ್ಕೆ ಪ್ರತ್ಯೇಕವಾದ ಸ್ನಾನದ ಮನೆ ಇದೆ, ಮತ್ತೇನೂ ವಿಶೇಷತೆ ಅದರಲ್ಲಿ ಇಲ್ಲ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ತಾವು ಆ ಕೋಣೆಯನ್ನು ಬಹಳ ಚೆನ್ನಾಗಿ ಮಾಡಿಸಿದ್ದೀರಿ, ಅದಕ್ಕಾಗಿ ತಮಗೆ ವಂದನೆಗಳು.

ಶ್ರೀ ಸಿ.ಬೈರೇಗೌಡ: ಅಲ್ಲಿ ಜಾಗ ಇತ್ತು. ಇಂಜಿನಿಯರ್‌ಗಳು ಯೋಜನೆ ಮಾಡಿ ಕಟ್ಟಿದ್ದಾರೆ. ಅದು ಸಾಮಾನ್ಯದಲ್ಲಿ ಸಾಮಾನ್ಯವಾದ ಮಲಗುವ ಕೋಣೆ. ಶ್ರೀಕಂಠಯ್ಯನವರಿಗೆ ಇನ್ನು ಪಂಚತಾರಾ ಹೋಟೆಲ್ ರೀತಿಯ ಕೋಣೆ ಬೇಕೆನೋ?

ಶ್ರೀ ಕೆ.ಹೆಚ್.ರಂಗನಾಥ್ : ಮಾನ್ಯ ಶ್ರೀಕಂಠಯ್ಯನವರು ಆ ಕೋಣೆಯ ಬಗ್ಗೆ ಹೇಳಿದ ಮೇಲೆ ಬೈರೇಗೌಡರಿಗೆ ಇಷ್ಟೊಂದು ಈಸ್ತಿಟಿಕ್ ಸೆನ್ಸ್ ಇದೆಯೆಂದು ಗೊತ್ತಾಗುತ್ತದೆ.

ಶ್ರೀ ಸಿ.ಬೈರೇಗೌಡ: ನನಗೊಂದು ಕೋಣೆ ಬೇಕು ಹೇಗೆ ಕಟ್ಟುತ್ತೀರೊ ಕಟ್ಟಿಕೊಡಿ ಎಂದು ಮಾತ್ರ ನಾನು ಹೇಳಿದ್ದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ತಮ್ಮ ಆದೇಶವಿಲ್ಲದೆಯೇ ಅವರು ಮಾಡಿಲ್ಲ, ತಾವು ಆ ರೀತಿಯೆಲ್ಲ ಹೇಳಬೇಡಿ. ಆ ಮನೆಯಲ್ಲಿ ಸಣ್ಣ ಸಣ್ಣ ಅನೇಕ ಕೊಠಡಿಗಳು ಇವೆ. ಆದರೆ ಇವರ ಕೋಣೆ ಮಾತ್ರ ವಿಶಾಲವಾಗಿ ಬಹಳ ಚೆನ್ನಾಗಿ ಕಟ್ಟಿಸಿದ್ದಾರೆ.

ಶ್ರೀ ಬೈರೇಗೌಡ: ಆ ಕೋಣೆ ವಿಶಾಲವಾಗಿದೆಯೆಂದು ನಾನು ಮೊದಲೆ ಹೇಳಿದ್ದೇನೆ. ಅಂಥ ಕಡೆ ಇವರು ನಿದ್ರೆ ಮಾಡಲು ಆಗುವುದಿಲ್ಲವಲ್ಲ, ಯಾರಿಗೆ ತಮ್ಮಲ್ಲಿ ತಮಗೆ ನಂಬಿಕೆ ಇರುವುದಿಲ್ಲವೋ ಅವರು ಎಲ್ಲಿ ಮಲಗಿದರು ಸಹ ನಿದ್ರೆ ಬರುವುದಿಲ್ಲ. ಇನ್ನು ಮೇಲಾದರು ಆ ಕೋಣೆಯಲ್ಲಿ ಮಲಗಿ ನಿದ್ರೆ ಬರುತ್ತದೋ ಇಲ್ಲವೋ ನೋಡಿ. ಸಣ್ಣ ಕೋಣೆಯಲ್ಲೇನು ಮಲಗುತ್ತಿದ್ದೀರಿ ಅದನ್ನು ಬಿಟ್ಟು ದೊಡ್ಡ ಕೋಣೆಯಲ್ಲಿ ಮಲಗಿ

ತಮಗೆ ಸುಖ ನಿದ್ರೆ ಬರುತ್ತದೆ.

ಛೇರ್ಮನ್: ಅವರ ವೈಯಕ್ತಿಕ ವಿಚಾರದ ಬಗ್ಗೆ ಮಾತನಾಡಬೇಡಿ. ನೀವು ಭಾಷಣ ಮುಂದುವರಿಸಿ.

ಶ್ರೀ ಸಿ.ಬೈರೇಗೌಡ : ಅವರು ಪ್ರಸ್ತಾಪ ಮಾಡಿದ್ದರಿಂದ ಹೇಳುತ್ತಿದ್ದೇನೆ.

ಶ್ರೀ ಬಿ.ಸೋಮಶೇಖರ್: ಕೆಲವರಿಗೆ ತಮ್ಮ ಮನೆಯಲ್ಲಿ ನಿದ್ರೆ ಬರುವುದಿಲ್ಲ, ಬೇರೆ ಮನೆಯಲ್ಲಿ ಮಲಗಿದರೆ ಮಾತ್ರ ನಿದ್ರೆ ಬರುತ್ತದೆ.

ಶ್ರೀ ಸಿ.ಬೈರೇಗೌಡ: ಯಾರು ಅಂಜುಬುರುಕರು ಇರುತ್ತಾರೊ ಅವರಿಗೆ ನಿದ್ರೆ ಬರುವುದಿಲ್ಲ. ಮಾನ್ಯ ಶ್ರೀಕಂಠಯ್ಯನವರು ಆ ರೀತಿ ಅಲ್ಲ ಎಂದು ನಾನು ಅಂದುಕೊಂಡಿದ್ದೇನೆ. ತಾವು ಅಂಜುಬುರುಕರಲ್ಲದಿದ್ದರೆ ಆ ಕೋಣೆಯಲ್ಲಿ ಮಲಗಿ. ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರನ್ನು ಸಿಂಗಾಪುರದ ರೀತಿ ಮಾಡುವುದಾಗಿ ಹೇಳುತ್ತಾರೆ. ಬಹಳ ಸಂತೋಷ. ನಾನು ಅದನ್ನು ಎರಡು ಮೂರು ಸಲ ನೋಡಿದ್ದೇನೆ. ಪ್ರಪಂಚದಲ್ಲೆ ಸ್ವಚ್ಛವಾಗಿರುವಂಥ ನಗರ. ಇಡೀ ಸಿಂಗಪುರವು ಒಂದು ರೀತಿ ತೋಟದಂತೆ, ಪಾರ್ಕ್‌ನಂತೆ, ಆ ರೀತಿ ಕಲ್ಪನೆಯೇನು ಮುಖ್ಯಮಂತ್ರಿಗಳಿಗೆ ಬಂದಿದೆ ಅದನ್ನು ಮೆಚ್ಚುತ್ತೇನೆ. ತಾವು ದಕ್ಷತೆ, ಪಾರದರ್ಶಕತೆ, ಭ್ರಷ್ಟಚಾರ ರಹಿತ ಸರ್ಕಾರ ನೀಡುವುದಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಇದು ಎಲ್ಲಿಂದ ಪ್ರಾರಂಭವಾಗಬೇಕು? ಭ್ರಷ್ಟಾಚಾರವನ್ನು ನೂರಕ್ಕೆ ನೂರು ತೊಡೆದು ಹಾಕುತ್ತೇವೆ ಎಂದು ಹೇಳಿದರೆ ಅದು ನಂಬತಕ್ಕ ಮಾತಲ್ಲ. ಆದರೆ ಅದರ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇದೆ.

೫.೫೦ ಪಿ.ಎಂ.

ಭ್ರಷ್ಟಚಾರ ತೊಡೆದು ಹಾಕುವುದು ಮತ್ತು ಸ್ವಚ್ಛತೆ ಕಾಪಾಡುವ ಕಾರ್ಯಗಳೆಲ್ಲವೂ ಕೂಡ ವಿಧಾನ ಸೌಧದಿಂದಲೇ ಪ್ರಾರಂಭ ಆಗಬೇಕು. ವಿಧಾನ ಸೌಧದಲ್ಲಿ ಇವರು ಸ್ವಚ್ಛತೆ ಕಾಪಾಡುತ್ತಾರೆ ಎಂಬ ನಂಬಿಕೆಯಂತೂ ನನಗೆ ಇಲ್ಲ. ಅದು ಇವರ ಕೈಯಲ್ಲಂತೂ ಸಾಧ್ಯವೇ ಇಲ್ಲ. ಅದಕ್ಕೆ ನಾನು ಆಗಲೇ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಡೀ ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುತ್ತೇವೆ ಎಂದು ಹೇಳುವವರು ಕನಿಷ್ಟ ಪಕ್ಷ ವಿಧಾನ ಸೌಧದ ಸುತ್ತಮುತ್ತಾದರೂ ಕೂಡ ನಿರ್ಮಲವಾದ ವಾತಾವರಣ ಉಂಟು ಮಾಡುವಲ್ಲಿ ಯಶಸ್ವಿಯಾಗಿದ್ದಾರೆಯೇ? ಒಂದು ಸಾರಿ ನೋಡಿಕೊಂಡು ಬಂದರೆ, ತಮಗೆ ಇದೆಲ್ಲವೂ ಗೊತ್ತಾಗುತ್ತದೆ. ವಿಧಾನ ಸೌಧದ ಸುತ್ತಮುತ್ತಲೂ ಕೂಡ ಪೋಸ್ಟರ್ ಅಂಟಿಸದೇ ಇರತಕ್ಕ ಜಾಗವೇ ಇಲ್ಲ. ನಿಮ್ಮ ಅಧಿಕಾರಿಗಳು ಏನು

ಮಾಡುತ್ತಿದ್ದಾರೆ? ಸ್ವಚ್ಛತೆಯನ್ನು ಕಾಪಾಡಬೇಕು ಎಂಬ ಪರಿಕಲ್ಪನೆ ಅಧಿಕಾರಿಗಳಿಗೆ ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗೆ ಏನು ಬೆಲೆ ಬರುತ್ತದೆ? ಕನಿಷ್ಟ ಪಕ್ಷ ವಿಧಾನ ಸೌಧದ ಸುತ್ತಮುತ್ತಲ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಲಿಕ್ಕೆ ಪ್ರಯತ್ನವೇ ನಡೆದಿಲ್ಲ. ಎಲ್ಲಾ ಕಡೆ ಅಸ್ವಚ್ಛತೆಯೇ ತುಂಬಿದೆ. ವಿಧಾನ ಸೌಧದ ಮುಂದೆ ಗೋಪಾಲಗೌಡ ವೃತ್ತ ಇದೆ. ನಾನು ಅದನ್ನು ಇವುತ್ತು ತಾನೇ ನೋಡಿಕೊಂಡು ಬಂದೆ. ಅಲ್ಲಿರತಕ್ಕಂಥ ಬೋರ್ಡ್ ಮೇಲೆ ಈ ಕಡೆಯಿಂದ ಆ ಕಡೆಯವರೆಗೂ ಕೂಡ ಪೋಸ್ಟರ್ ಅಂಟಿಸಿದ್ದಾರೆ. ಯಾರಾದರೂ ಹೊಸಬರು ಬಂದರೆ ಅದು ಯಾವ ಸರ್ಕಲ್ ಎಂದು ಯಾರೂ ಕೂಡ ಆ ಬೋರ್ಡ್‌ನ್ನು ಓದುವುದಕ್ಕೆ ಸಾಧ್ಯವೇ ಇಲ್ಲ. ಕೇವಲ ಅಲ್ಲಿ ಮಾತ್ರ ಅಲ್ಲ. ವಿಧಾನ ಸೌಧದ ಸುತ್ತಲೂ ಕೂಡ ಈ ರೀತಿಯಾದಂತಹ ವಾತಾವರಣವೇ ಇದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುವುದಾಗಿ ಹೇಳುತ್ತಾರೆ. ವಿಧಾನ ಸೌಧದ ಸುತ್ತಲೂ ಸ್ವಚ್ಛತೆ ಕಾಪಾಡಿಕೊಳ್ಳಲು ಆಗದಿರುವಾಗ ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುತ್ತೇವೆ ಎಂಬ ನಿಮ್ಮ ಮಾತನ್ನು ಜನ ನಂಬುವುದಕ್ಕೆ ಸಾಧ್ಯವೇ? ಖಂಡಿತವಾಗಿಯೂ ಜನ ಆ ಮಾತನ್ನು ನಂಬುವುದಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಹೆಸರು ನಗೆಪಾಟಲಿಗೆ ಈಡಾಗುತ್ತಿದೆ. ಅಷ್ಟು ಕೋಟಿ ಬಿಡುಗಡೆ ಮಾಡುತ್ತೇವೆ, ಇಷ್ಟು ಕೋಟಿ ಬಿಡುಗಡೆ ಮಾಡುತ್ತೇವೆ, ಹೊಸ ಯೋಜನೆ ಮಾಡುತ್ತೇವೆ ಎಂಬಿತ್ಯಾದಿ ಮಾನ್ಯ ಮುಖ್ಯಮಂತ್ರಿಗಳ ಕಳೆದ ಆರು ತಿಂಗಳ ಹೇಳಿಕೆಗಳೆಲ್ಲವೂ ಕೂಡ ನಗೆಪಾಟಲಿಗೆ ಈಡಾಗುತ್ತಿದೆ. ಇವತ್ತು ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇಲ್ಲದೇ ಇರಬಹುದು. ಈ ಸದನದ ನಾಯಕರು ಹಾಗೂ ರಾಜ್ಯದ ಮುಖ್ಯಮಂತ್ರಿಗಳಾದವರ ಮಾತನ್ನು, ಅವರು ಯಾವುದೇ ಪಕ್ಷದ ಮುಖಂಡರಾಗಿರಲೀ. ಯಾರೂ ಕೂಡ ಲಘುವಾಗಿ ಪರಿಗಣಿಸಿ ಮಾತನಾಡುವುದನ್ನು ನೋಡಿ ಸಹಿಸಲು ನನಗೆ ಸಾಧ್ಯವಿಲ್ಲ. ದುರದೃಷ್ಟವಶಾತ್ ಇವತ್ತಿನ ದಿವಸ ಇದನ್ನು ನಾವು ಸಹಿಸಿಕೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಗಳನ್ನು ಜನ ಬಹಳ ಲಘುವಾಗಿ ಇವತ್ತಿನ ದಿವಸ ತೆಗೆದುಕೊಳ್ಳುತ್ತಿದ್ದಾರೆ. ಅವರ ಹೇಳಿಕೆಗಳು ಜನರ ಅಪಹಾಸ್ಯಕ್ಕೆ ಈಡಾಗುತ್ತಿವೆ. ಮಾನ್ಯ ಮುಖ್ಯಮಂತ್ರಿಯವರು ಇನ್ನು ಮುಂದಾದರೂ ಕೂಡ ಅಪಹಾಸ್ಯಕ್ಕೆ ಈಡಾಗತಕ್ಕಂಥ ಹೇಳಿಕೆಗಳನ್ನು, ಮಾತುಗಳನ್ನು ಆಡುವುದನ್ನು ನಿಲ್ಲಿಸಿದರೆ ಸಾರ್ವಜನಿಕ ಜೀವನಕ್ಕೂ ಕೂಡ ಒಂದು ಗೌರವ ಬರುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅರಗ ಜ್ಞಾನೇಂದ್ರರವರು ಮಾತನಾಡತಕ್ಕ ಸಂದರ್ಭದಲ್ಲಿ ನಾನು ಈಗ ಪ್ರಸ್ತಾಪಿಲಿರುವ ವಿಷಯ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುತ್ತೇನೆ ಎಂದು ಹೇಳಿದ ಸಂದರ್ಭದಲ್ಲೇ ಆ ಕಾರ್ಯಕ್ರಮಗಳಲ್ಲಿ ನಂಬಿಕೆ ಇಟ್ಟು ಕೆಲವರು ಈ ಕಡೆಯಿಂದ ಆ ಕಡೆಗೆ ಹೋಗಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ನನಗೆ ಅದರ ಬಗ್ಗೆ ಗುಮಾನಿ ಇದೆ. ಅವರು ತಮ್ಮ ಬೇಳೆ ಕಾಳು ಚೆನ್ನಾಗಿ ಬೇಯಿಸಿಕೊಳ್ಳಬಹುದು ಎಂಬ ಕಾರಣಕ್ಕಾಗಿ

ಮಾತ್ರ ಈ ಕಡೆಯಿಂದ ಆ ಕಡೆಗೆ ಹೋಗಿದ್ದಾರೆ ಎಂದು ನಾನು ಹೇಳಬಯಸುತ್ತೇನೆ. ಇತ್ತೀಚೆಗೆ ಅಬ್ಕಾರಿ ಇಲಾಖೆಯವರು ನಾನಾ ಕಡೆಗಳಲ್ಲಿ ಹಠತ್ತಾಗಿ ದಾಳಿ ನಡೆಸಿದರು. ಈ ದಾಳಿಗೆ ಕೆಲವು ಸಿಕ್ಕಿ ನಲುಗಿ ಹೋದರು. ಇಲ್ಲಿ ಅದನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ ಎಂಬ ಕಾರಣದಿಂದ ಕೆಲವರು ಚಕ್ಕನೆ ಈ ಕಡೆಯಿಂದ ಆ ಕಡೆಗೆ ದಾಟಿದರು. ಇದರ ಗುಟ್ಟು ಯಾರಿಗೂ ಗೊತ್ತಿಲ್ಲವೇ? ರಾಜ್ಯದ ಜನತೆಗೆ ಇದರ ಗುಟ್ಟು ಚೆನ್ನಾಗಿ ಗೊತ್ತಿದೆ. ಬೆಂಗಳೂರಿನಲ್ಲಿ ನಡೆಯುತ್ತಿರತಕ್ಕಂಥ ಕೆಲವು ವ್ಯವಹಾರಗಳು ಮತ್ತು ಅಬ್ಕಾರಿ ಇಲಾಖೆಯಲ್ಲಿ ನಡೆದಿರತಕ್ಕಂಥ ಕೆಲವು ರೈಡ್‌ಗಳೇ ಈ ಕಡೆಯಿಂದ ಆ ಕಡೆಗೆ ಕೆಲವರು ನೆಗೆಯಲು ಕಾರಣವಾಗಿವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ರಾಜ್ಯದಲ್ಲಿ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ ಎಂದು ನಾವು ಹೇಳಿದೆವು. ಅದರಲ್ಲೂ ಕೂಡ ನಮ್ಮ ಕೋಲಾರ ಜಿಲ್ಲೆಯಲ್ಲಿ ಎರಡು ಕೆರೆ ಇದೆ, ಈ ಕೆರೆಗಳಲ್ಲಿ ನೀರು ಖಾಲಿಯಾಗಿದೆ, ಕೆರೆಗಳಲ್ಲಿನ ಹೂಳನ್ನು ಎತ್ತುವಂತಹ ಕೆಲಸವನ್ನು ತತ್‌ಕ್ಷಣ ಮಾಡುವ ಸಲುವಾಗಿ ಸುಮಾರು 1 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವಂತೆ ನಾವು ಕೇಳಿದೆವು. ಅದಕ್ಕೆ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಗಳು ಏನೂ ಬಾಯಿ ಬಿಡಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳಾಗಿರತಕ್ಕವರೂ ಕೂಡ ನಾವು ಅಂದು ಎಷ್ಟೇ ಒತ್ತಾಯ ಮಾಡಿದರೂ ಕೂಡ ಅಗತ್ಯವಾದ ಹಣವನ್ನು ಬಿಡುಗಡೆ ಮಾಡಲಿಲ್ಲ. ಇಲ್ಲಿಯವರೆಗೂ ಕೂಡ ಅದಕ್ಕಾಗಿ ಒಂದು ನಯಾ ಪೈಸೆ ಹಣ ಬಿಡುಗಡೆ ಆಗಿಲ್ಲ. ಆದರೆ ಈ ರಾಜ್ಯವನ್ನು ಪ್ರತಿನಿಧಿಸತಕ್ಕ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳಿಗೆ ಮೂರು ಜನ ಸಿಬ್ಬಂದಿ ಮತ್ತು ಪ್ರತಿಯೊಬ್ಬರಿಗೂ ಹೊಸ ಕಾರುಗಳನ್ನು ನೀಡುವುದಾಗಿ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ದೆಹಲಿಯಲ್ಲಿ ಈ ಸದಸ್ಯರುಗಳು ಮಾಡಿದ ಸಾಧನೆಯಾದರೂ ಏನು? ಯಾವಾಗ ಇವರು ರಾಜ್ಯದ ಹಿತವನ್ನು ಎಷ್ಟರಮಟ್ಟಿಗೆ ಅಲ್ಲಿ ಕಾಪಾಡಿದ್ದಾರೆ? ನಾನು ಈ ಮಾತನ್ನು ಪಕ್ಷಾತೀತವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವರು ಚುನಾಯಿತರಾಗಿರತಕ್ಕಂಥದ್ದು ಲೋಕಸಭೆ ಮತ್ತು ರಾಜ್ಯಸಭೆಗೆ. ಇವರ ಕಾರ್ಯಭಾರ ಇರತಕ್ಕಂಥದ್ದು ದೆಹಲಿಯಲ್ಲಿ.....

ಛೇರ್ಮನ್: ಪಾರ್ಲಿಮೆಂಟ್ ಸದಸ್ಯರ ನಡತೆ ಮತ್ತು ಸವಲತ್ತುಗಳ ಬಗ್ಗೆ ಇಲ್ಲಿ ಮಾತನಾಡುವುದು ಅಷ್ಟೊಂದು ಸಮಂಜಸವೆನಿಸುವುದಿಲ್ಲ.

ಶ್ರೀ ಸಿ.ಬೈರೇಗೌಡ: ಮಾನ್ಯ ಛೇರ್ಮನ್‌ರವರೇ, ಪ್ರತಿಯೊಬ್ಬರಿಗೆ ನೀಡಲು ಉದ್ದೇಶಿಸಿರುವ ಹೊಸ ಕಾರು ಮತ್ತು ಸಿಬ್ಬಂದಿಗಳಿಗೆ ಎಷ್ಟೆಷ್ಟು ಖರ್ಚಾಗುತ್ತದೆ? ಅವರು ದೆಹಲಿಯಲ್ಲಿ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ವಿಫಲರಾಗಿದ್ದಾರೆ ಎಂಬ ಮಾತನ್ನು ಮಾತ್ರ ನಾನು ಇಲ್ಲಿ ಹೇಳುತ್ತಿದ್ದೇನೆ. ನಮ್ಮ ಬೊಕ್ಕಸದಿಂದ ಅಷ್ಟೊಂದು ಹಣ ಅವರಿಗಾಗಿ ಏಕೆ ಖರ್ಚಾಗಬೇಕು. ಅದರ ಅವಶ್ಯಕತೆ ಏನಿದೆ? ಅದೂ ಕೂಡ ಇವತ್ತು ಪಾಲಿಟಿಕ್ಸ್ ಆಫ್‌ಅಪೀಸ್‌ಮೆಂಟ್ ಆಗಿದೆ. ಅವರನ್ನು ಚೆನ್ನಾಗಿ

ಇಟ್ಟುಕೊಳ್ಳಬೇಕು, ಅವರ ಮೂಗಿಗೆ ತುಪ್ಪ ಬಳಿಯಬೇಕು ಎಂಬ ಉದ್ದೇಶದಿಂದ ಅವರಿಗೆ ಹೊಸ ಕಾರು ಮತ್ತು ಸಿಬ್ಬಂದಿ ನೀಡಲು ಉದ್ದೇಶಿಸಲಾಗಿದೆ. ಇದಕ್ಕೆ ಸುಮಾರು 6-7 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಇಲ್ಲಿ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಿ ಎಂದು ಕೇಳಿದರೆ ಬಿಡುಗಡೆ ಮಾಡುವುದಿಲ್ಲ. ನಮ್ಮ ಸ್ನೇಹಿತರಾದ ಸಿಂಧ್ಯಾರವರು ಮದ್ದೂರಿಗೂ ಕೂಡ ಕುಡಿಯುವ ನೀರಿಗಾಗಿ ಹಣ ಬಿಡುಗಡೆ ಆಗಿಲ್ಲ. ಎನ್ನುತ್ತಿದ್ದಾರೆ. ಮದ್ದೂರಿಗೂ ಕೂಡ ಹಣ ಬಿಡುಗಡೆಯಾಗಿಲ್ಲ ಮತ್ತು ನಮ್ಮ ಕೋಲಾರಕ್ಕೂ ಕೂಡ ಇದುವರೆಗೂ ಕೂಡ ಒಂದು ಪೈಸೆ ಕೂಡ ಕುಡಿಯುವ ನೀರಿಗಾಗಿ ಬಿಡುಗಡೆ ಮಾಡಿಲ್ಲ. ಆದರೆ ಸಂಸತ್ ಸದಸ್ಯರಿಗೆ ಸ್ಥಳದಲ್ಲೇ ಹೊಸ ಕಾರು ಕೊಂಡುಕೊಳ್ಳಲು ಮತ್ತು ಹೆಚ್ಚುವರಿ ಸಿಬ್ಬಂದಿಗಾಗಿ ಮಂಜೂರಾತಿ ನೀಡಿ ಹಣ ಬಿಡುಗಡೆ ಮಾಡಲಾಗಿದೆ. ಇವರು ಅವರುಗಳನ್ನು ಏಕೆ ಅಪೀಸ್‌ಮೆಂಟ್ ಮಾಡಲಿಕ್ಕೆ ಹೊರಟಿದ್ದಾರೆ ಎಂದರೆ, ಈ ಸರ್ಕಾರ ಬಹಳ ದುರ್ಬಲವಾಗಿದೆ. ಈ ಉದಾಹರಣೆ ಸಹ ಇದನ್ನು ಎತ್ತಿ ತೋರಿಸುತ್ತದೆ.

ಇನ್ನು ಕೃಷಿ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವರು ರಾಜ್ಯದ ಮುಖ್ಯಮಂತ್ರಿಗಳಾದ ತಕ್ಷಣ ಈ ರಾಜ್ಯದ ರೈತರ ಭಾಗ್ಯದ ಬಾಗಿಲು ತೆರೆಯುತ್ತದೆ ಎಂದು ನಾವೆಲ್ಲರೂ ಕೂಡ ನಿರೀಕ್ಷೆ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ 'ಈ ಸರ್ಕಾರ ರೈತರಿಂದ ರೈತರಿಗಾಗಿ ರೈತರ ಮೂಲಕ ಇರತಕ್ಕ ಸರ್ಕಾರ' ಎಂಬ ಮಂತ್ರವನ್ನು ಜಪಿಸಿದ್ದಾರೆ. ಆದರೆ ನಿಮ್ಮ ಸರ್ಕಾರದಿಂದ ರೈತರಿಗೇನು ಸಿಕ್ಕಿತು? ಆಗಲೇ ಮಾತನಾಡುತ್ತಾ ಸ್ನೇಹಿತರೊಬ್ಬರು ಹೇಳಿದಂತೆ, ಈ ರಾಜ್ಯದ ಅಬ್ಕಾರಿ ರಂಗದಲ್ಲಿ ಇರತಕ್ಕವರಿಗೆ 165 ಕೋಟಿ ರೂಪಾಯಿಗಳ ಬಡ್ಡಿ ವಜಾ ಆಗುತ್ತದೆ. ಆದರೆ ರೈತರ ಬಡ್ಡಿ ವಜಾ ಆಗತಕ್ಕದ್ದು ಎಷ್ಟು ಎಂದರೆ, ಕೇವಲ 15 ಕೋಟಿ ರೂಪಾಯಿಗಳು ಮಾತ್ರ. ರಿಸರ್ವ್ ಬ್ಯಾಂಕ್‌ನವರು ಬಡ್ಡಿದರವನ್ನು ಶೇ.ಒಂದರಷ್ಟು ಹೆಚ್ಚಿಸಿದ್ದರಿಂದ, ಅದನ್ನು ನಾವು ಭರಿಸುತ್ತೇವೆ, ಅದಕ್ಕಾಗಿ 15 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಅಬ್ಕಾರಿ ರಂಗದವರು ಬಡವರು......

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಛೇರ್ಮನ್‌ರವರೇ, ರಿಸರ್ವ್ ಬ್ಯಾಂಕ್‌ನವರು ಏನು ಬಡ್ಡಿದರವನ್ನು ಹೆಚ್ಚಿಸಿದ್ದಾರೋ ಅದನ್ನು ಇವತ್ತು ಸರ್ಕಾರ ಭರಿಸುತ್ತಿಲ್ಲ. ಇವತ್ತು ಅಪೆಕ್ಸ್ ಬ್ಯಾಂಕ್ ಮತ್ತು ಜಿಲ್ಲಾ ಮಧ್ಯವರ್ತಿಗಳ ಸಹಕಾರ ಬ್ಯಾಂಕ್‌ಗಳು ಮಾತ್ರ ಅದನ್ನು ಭರಿಸುತ್ತವೆ. ಅವುಗಳಿಗೆ ಆ ರೀತಿ ಡೈರೆಕ್ಷನ್ಸ್ ಕೊಡಲಾಗಿದೆ. ಸರ್ಕಾರದವರು ಒಂದು ಪೈಸೆ ಕೂಡ ಅದಕ್ಕಾಗಿ ಹಣ ಬಿಡುಗಡೆ ಮಾಡಿ ಅದನ್ನು ಭರಿಸುತ್ತಿಲ್ಲ.

ಶ್ರೀ ಸಿ.ಬೈರೇಗೌಡ: ಅದರ ಬಗ್ಗೆ ಮುಂದೆ ನೋಡೋಣ. ಈ ಸದನದಲ್ಲಿ ಸರ್ಕಾರ ಒಂದನ್ನು ಹೇಳಿ, ಅದು ಕೃತಿಯಲ್ಲಿ ಮತ್ತೊಂದಾಗಿದ್ದರೆ ಅದು ಈ ಸದನದ

ಹಕ್ಕುಚ್ಯುತಿಯಾಗುತ್ತದೆ. ಅದರ ಬಗ್ಗೆ ನಾವು ನಂತರ ಯೋಚನೆ ಮಾಡೋಣ. ಧಾರವಾಡದಲ್ಲಿ ಆಗ್ರೋ ಸಮಿಟ್ ಎಂಬುದನ್ನು ಸರ್ಕಾರದವರು ಮಾಡಿದರು. ಅದರ ಬಗ್ಗೆ ಬಹಳ ಅಂದವಾದ ಪುಸ್ತಕವನ್ನೂ ಸಹಾ ಮುದ್ರಿಸಿದ್ದಾರೆ. "Reaping progressive ideas in the new millennium" "Agro-Summit 2000" at Dharwad, Dated 6.2.2000 ಎಂಬ ಶೀರ್ಷಿಕೆಯಡಿಯಲ್ಲಿ ಆಗ್ರೋ ಸಮಿಟ್ ಬಗ್ಗೆ ಅಂದವಾದ ಪುಸ್ತಕವೊಂದನ್ನು ಸರ್ಕಾರದವರು ಮುದ್ರಿಸಿದ್ದಾರೆ. ನಾನು ಆ ಖಾತೆ ಮಂತ್ರಿಯಾಗಿದ್ದವನು. ನನ್ನಿಂದ ಆದರೂ ಆಗಲಿ, ಅವರಿಂದಲಾದರೂ ಆಗಲಿ, ಈ ರಾಜ್ಯದ ರೈತರಿಗೆ ಏನಾದರೂ ಒಳ್ಳೆಯದಾಗುವುದಾದರೆ, ಸಂತೋಷಪಡತಕ್ಕಂಥವರಲ್ಲಿ ಮೊದಲನೆಯವನು ನಾನು. ನಾನು ಅದೆಲ್ಲವನ್ನೂ ಕೂಡ ಆಮೂಲಾಗ್ರವಾಗಿ ಏನಾಗಿದೆ ಎಂದು ನೋಡಿದೆ. ನಾನು ಕೃಷಿ ಮಂತ್ರಿಯಾಗಿದ್ದಾಗ ನಾವು ರೂಪಿಸಿರತಕ್ಕಂತಹ ಕೃಷಿ ನೀತಿ ಇದೆ. ಇದಕ್ಕೂ ಇವರು ಧಾರವಾಡ ಡಿಕ್ಲರೇಷನ್ ಎಂದು ಹೇಳಿದ್ದಾರೆ. ಧಾರವಾಡ ಡಿಕ್ಲರೇಷನ್‌ಗೂ ಮತ್ತು ಕೃಷಿ ನೀತಿಗೂ ಏನಾದರೂ ವ್ಯತ್ಯಾಸ ಇದೆಯಾ? ಅಲ್ಲಿ ಚರ್ಚೆಯಾಗುವುದು ಏನಾದರೂ ಇದೆಯಾ ಎಂದರೆ, ಏನೇನೂ ಇಲ್ಲ. ಯಾವುದೂ ಕೂಡ ಹೊಸದಾಗಿರುವುದು ಇಲ್ಲ. ಇವತ್ತು ಸಮಗ್ರವಾದ ಕೃಷಿ ನೀತಿಯನ್ನು ನಾವು ರೂಪಿಸಿದ್ದೇವೆ. ಇದನ್ನು ಉತ್ತಮ ಪಡಿಸಿರಬಹುದು ಎಂದು ನಾನು ನಿರೀಕ್ಷೆ ಮಾಡಿದ್ದೆ. ಉತ್ತಮಪಡಿಸತಕ್ಕಂತಹ ಆ ಪ್ರಯತ್ನ ನಡೆದಿಲ್ಲ. ಆದರೆ ಇದನ್ನು ಏತಕ್ಕೋಸ್ಕರ ಮಾಡಿದ್ದಾರೆಂದರೆ, ಪ್ರಚಾರಕ್ಕೋಸ್ಕರ ಮಾಡಿದ್ದಾರೇ ವಿನಃ ಈ ರಾಜ್ಯದ ರೈತರಿಗೆ ಇದರಿಂದ ಕಿಂಚಿತ್ತೂ ಕೂಡ ಪ್ರಯೋಜನ ಆಗತಕ್ಕಂಥದ್ದರ ಬಗ್ಗೆ ಆಲೋಚನೆ ನಡೆದಿಲ್ಲ. ಇವತ್ತು ಅದರ ಮೂಲಕ ಆಗ್ರೋ-ಸಮ್ಮಿಟ್ ಒಂದು ಕಮಿಷನ್ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಡಾ:ದ್ವಾರಕನಾಥ್‌ರವರ ನೇತೃತ್ವದಲ್ಲಿ ಒಂದು ಕಮಿಷನ್ ಕೂಡ ನೇಮಕ ಮಾಡಿದ್ದಾರೆ. ಅದರ ಜೊತೆಯಲ್ಲಿ ಒಂದು ಸಚಿವ ಸಂಪುಟದ ಉಪಸಮಿತಿ ಕೂಡ ಮಾಡುತ್ತೇವೆಂದು ಹೇಳುತ್ತಾರೆ. ಬಹುಶಃ ಅದನ್ನು ಮಾಡಿರಬಹುದು ಎಂದು ನಾನು ಭಾವಿಸಿದ್ದೇನೆ. ಒಂದು ಕೃಷಿ ಆಯೋಗ, ಮತ್ತು ಉಪಸಮಿತಿ-ಇಷ್ಟೆಲ್ಲಾ ಆದಮೇಲೆ ಕೃಷಿ ಮಂತ್ರಿಗಳಿಗೆ ಏನು ಕೆಲಸ ಇದೆ? ಕೃಷಿ ಮಂತ್ರಿಗಳನ್ನು ತೆಗೆದು ಹಾಕಿ. ನಾನು ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ ಇನ್ನು ಟ್ರಾನ್ಸಫರ್ ಬಗ್ಗೆ ಏನು ನಡೆಯುತ್ತಿದೆ, ಏನು ಎನ್ನುವುದನ್ನು ನಾನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಆಯೋಗ ಸಚಿವ ಸಂಪುಟದ ಒಂದು ಉಪ ಸಮಿತಿ ಸಂತೋಷ ನಾವು ಮಾಡಿರುವುದರಲ್ಲಿ ಅರ್ಥ ಕೂಡ ಮಾಡಿಲ್ಲವೆಂದು ನಾವು ಸಂತೋಷಪಡುತ್ತೇವೆ. ತಾವು ಒಪ್ಪಿಕೊಳ್ಳುತ್ತಿದ್ದೀರಿ ಎಲ್ಲಾದರೂ ಬೆಂಕಿ ಇಟ್ಟಿದ್ದೀರಾ?

ಶ್ರೀ ಎಂ.ಮಹದೇವ್: ಎಷ್ಟು ಅರ್ಥ ವ್ಯವಸ್ಥೆಗಳನ್ನು ಮಾಡಿದ್ದೀರಿ, ಎಷ್ಟು ಕಿರುಕುಳ

ಕೊಟ್ಟಿದ್ದೀರಿ, ರಾಜಕೀಯವಾಗಿ ಎಷ್ಟು ತೊಂದರೆ ಕೊಟ್ಟಿದ್ದೀರಿ, ಅಧಿಕಾರವನ್ನು ನೀವು ಯಾವ ಯಾವ ರೀತಿ ಉಪಯೋಗಿಸಿಕೊಂಡಿದ್ದೀರಿ, ಯಾವ ಯಾವ ರೀತಿ ಕಿರುಕುಳ ಕೊಟ್ಟಿದ್ದೀರಿ, ನಿಮ್ಮ ಆಡಳಿತವನ್ನೆ ನೋಡಿ, ನಾವೇನು ಹೇಳಿಕೊಂಡು ಓಡಾಡುವುದಕ್ಕಾಗುತ್ತಾ? ನಿಮ್ಮ ಆಡಳಿತದಲ್ಲೇ ನೋಡಿ ನೀವು ಎಷ್ಟು ಟ್ರಾನ್ಸ್ಫರ್ ಮಾಡಿಸಿದ್ದೀರಿ, ಎಷ್ಟು ಕಿರುಕುಳ ಕೊಟ್ಟಿದ್ದೀರಿ, ವಿರೋಧ ಪಕ್ಷದವರು ತಿರುಗಾಡಲಿಕ್ಕೆ ಆಗದೆ ಇರುವಷ್ಟು ತೊಂದರೆ ಕೊಟ್ಟಿದ್ದೀರಿ, ರಾಜ್ಯದಲ್ಲಿ ಉತ್ತಮ ವಾತಾವರಣ ಇತ್ತಾ? ತಾವೇ ಹೇಳಿ.

ಶ್ರೀ ಸಿ.ಬೈರೇಗೌಡ: ಮಹದೇವ್‌ರವರ ಕೃಷಿ ನೀತಿ ಎಂದರೆ, ವರ್ಗ ಮಾಡತಕ್ಕಂಥದ್ದು, ಇನ್ನೊಬ್ಬರಿಗೆ ಕಿರುಕುಳ ಕೊಡತಕ್ಕಂಥದ್ದು ಇದು ನಿಮ್ಮ ನೀತಿ. ತಾವು ಸರಿಯಾಗಿ ಹೇಳುತ್ತಿದ್ದೀರಿ. ತಮಗೆ ಧನ್ಯವಾದಗಳು. ಇವೆಲ್ಲಾ ನಾವು ಮಾಡಿಲ್ಲವೆಂದು ತಾವು ಹೇಳುತ್ತಿದ್ದೀರಿ. ಬಹಳ ಸಂತೋಷ. ತಾವು ಒಪ್ಪಿಕೊಳ್ಳುತ್ತಿದ್ದೀರಿ.

ಶ್ರೀ ಎಂ.ಮಹದೇವ್: ನಾವು ಕೃಷಿ ನೀತಿ ಬಗ್ಗೆ, ರೈತರ ಬಗ್ಗೆ ಎಷ್ಟು ಕಾಳಜಿ ವಹಿಸಿ ಕೆಲಸ ಮಾಡಿದ್ದೇವೆ, ಅದನ್ನು ಅಪ್ರಿಷಿಯೇಟ್ ಮಾಡದೆ, ನೀವು ಆಗಲೇ ಆರು ತಿಂಗಳಲ್ಲಿ ನಮಗೆ ಕತೆ ಪ್ರಾರಂಭ ಮಾಡಿದ್ದೀರಿ.

ಶ್ರೀ ಉಮೇಶ್ ವಿ. ಕತ್ತಿ: ಇವರಿಗೆ ರೈತರ ಬಗ್ಗೆ ಎಷ್ಟು ಕಳಕಳಿ ಇದೆ ಎಂದರೆ, ರಾಜ್ಯದಲ್ಲಿ ಕಳೆದ 40 ವರ್ಷಗಳಿಂದ ಇದ್ದ ಪರ್ಚೇಸ್ ಟ್ಯಾಕ್ಸ್ ಮೇಲೆ ಸಬ್ಸಿಡಿಯನ್ನು ಇವತ್ತು ತೆಗೆದು ಹಾಕಿದ್ದಾರೆ. ಇವತ್ತು ಕಬ್ಬು ಬೆಳೆಯುತ್ತಿರುವುದು ಒಂದು ಹೊರೆಯಾದರೆ, ಪರ್ಚೇಸ್ ಟ್ಯಾಕ್ಸ್ ತೆಗೆದು ಇನ್ನೊಂದು ಹೊರೆ ಮಾಡಿದ್ದಾರೆ. ಇವರಿಗೆ ರೈತರ ಬಗ್ಗೆ ಕೃಷಿ ನೀತಿ ಬಗ್ಗೆ ಎಷ್ಟು ಕಳಕಳಿ ಇದೆ ಎಂದು ತಾವು ನೋಡಬೇಕು.

ಶ್ರೀ ಸಿ.ಬೈರೇಗೌಡ: ಮಂತ್ರಿಗಳಿರುವುದು ವರ್ಗಾವರ್ಗಿ ಮಾಡುವುದಕ್ಕೆ ಎಂದು ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ.ಮಹದೇವ್: ತಾವು ಹಿಂದೆ ಏನು ಮಾಡಿದ್ದೀರಿ, ಅದರಲ್ಲಿ ನಾವು ಸ್ವಲ್ಪ ಭಾಗವೂ ಪ್ರಾರಂಭ ಮಾಡಿಲ್ಲವೆಂದು ಹೇಳಿದ್ದು.

ಛೇರ್ಮನ್: ತಾವು ಈಗಾಗಲೇ ಸುಮಾರು 40 ರಿಂದ 50 ನಿಮಿಷ ತೆಗೆದುಕೊಂಡಿದ್ದೀರಿ. ಕ್ಯಾಬಿನೆಟ್ ಮೀಟಿಂಗ್ ಇದೆ. ತಮ್ಮ ನಂತರ ಇನ್ನು ಮೂರು ನಾಲ್ಕು ಜನ ಮಾತನಾಡಬೇಕು. ತಮಗೆ ಎಷ್ಟು ಅವಧಿ ಬೇಕೆಂದು ಹೇಳಿ.

ಶ್ರೀ ಸಿ.ಬೈರೇಗೌಡ: ನನಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಇದಕ್ಕೆ ನಾವು ಕಾರಣರಲ್ಲ. ನಾನಂತೂ ಮಧ್ಯಾಹ್ನ ಸಭೆ ಪ್ರಾರಂಭವಾದಾಗಿನಿಂದ ನಾನು ಕಾಯುತ್ತಾ

ಕೂತಿರುವುದು ತಮಗೆ ಗೊತ್ತಿದೆ. ಆದರೆ ಸಮಯ ಹೆಚ್ಚಾಗಲಿಕ್ಕೆ ಸರ್ಕಾರವೇ ಕಾರಣ. ನಮ್ಮ ವೇಳೆಯನ್ನು ದಯವಿಟ್ಟು ಮೊಟಕುಗೊಳಿಸಬೇಡಿ. ಸರ್ಕಾರದವರು ಉತ್ತರ ಕೊಡತಕ್ಕಂತಹ ವೇಳೆಯನ್ನು ಮೊಟಕುಗೊಳಿಸಿ. ಅವರು ನಾವು ಮಂತ್ರಿಗಳಾಗಿರುವವರು ನಮ್ಮ ಕೆಲಸ ವರ್ಗಾವಣೆ ಮಾಡುವುದು ಮತ್ತೊಂದು ಎಂದು ಹೇಳಿಕೊಂಡಿದ್ದಾರೆ.

ಶ್ರಿ ಎಂ.ಮಹದೇವ್: ವರ್ಗಾವರ್ಗಿ ಮಾಡುವುದು ನಮ್ಮ ಕೆಲಸವೆಂದು ಹೇಳಲಿಲ್ಲ. ನೀವು ಮಾಡಿರುವ ಕೆಲಸವನ್ನು ನಿಮ್ಮಲ್ಲಿರುವ ಕೊಳೆ ತೊಳೆಯುವುದೇ ನಮ್ಮ ದೊಡ್ಡ ಕಷ್ಟವಾಗಿದೆ ಎಂದು ಹೇಳಿದ್ದು.

ಶ್ರೀ ಸಿ.ಬೈರೇಗೌಡ: ಅವರಲ್ಲಿ ಅದಕ್ಕೋಸ್ಕರ ಒಬ್ಬ ಮಂತ್ರಿಗಳನ್ನು ಇಟ್ಟುಕೊಂಡಿದ್ದಾರೆ, ಸಂತೋಷ ಇಟ್ಟುಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ನಮ್ಮ ಕೈ ಎತ್ತಿ ನಿಮಗೆ ತೆಗೆಯುವಂತಹ ಬಲ ನಮಗಿಲ್ಲ. ನಾವು ಇದನ್ನೇ ಮಾಡುತ್ತೇವೆ ಎಂದರೆ ಮಾಡಿಕೊಳ್ಳಿ ಎಂದು ನಾನು ಹೇಳಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಪ್ರಮುಖವಾಗಿ ಕೃಷಿ ಬಗ್ಗೆ ಪ್ರಸ್ತಾಪವಾಗಿರುವಂತಹ ವಿಷಯವೆಂದರೆ, ಹಸಿವು ಮತ್ತು ಅಪೌಷ್ಟಿಕತೆ. ಅದರ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ, ಸಂತೋಷ. ಈ ದೇಶದಲ್ಲಿ ಹಸಿವು ಮತ್ತು ಅಪೌಷ್ಟಿಕತೆ ಇವೆರಡೂ ಕೂಡ ದೂರ ಮಾಡಬೇಕಾಗಿರುವುದು ಬಹಳ ಮುಖ್ಯವಾದ ಕೆಲಸ. ಇಡೀ ಸಮಾಜದಲ್ಲಿ ಇರತಕ್ಕಂತಹ ಹಸಿವು ಮತ್ತು ಅಪೌಷ್ಟಿಕತೆ ದೂರ ಮಾಡಬೇಕು, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಇವತ್ತು ಈ ಹಸಿವು ಮತ್ತು ಅಪೌಷ್ಟಿಕತೆ ದೂರ ಮಾಡತಕ್ಕಂಥವರು ಯಾರೆಂದರೆ ರೈತ. ಅವನ ಪರಿಸ್ಥಿತಿ ಇವತ್ತು ಏನಾಗಿದೆ, ಅದನ್ನು ನಾವು ಆಗ್ರೋ ಸಮ್ಮಿಟ್ ಏನಾದರೂ ಚರ್ಚೆ ಆಗಿದೆಯಾ ಎಂದು ಕೇಳಿದರೆ, ಯಾರು ಹಸಿದವನು ಇದ್ದಾನೆ, ಯಾರ ಆರ್ಥಿಕ ಪರಿಸ್ಥಿತಿ ದಿನ ಕಳೆದಂತೆ ದುಸ್ಥಿತಿಗೆ ಹೋಗುತ್ತಿದೆ, ರೈತನ ಪರಿಸ್ಥಿತಿ ಅದರ ಬಗ್ಗೆ ನೀವು ಚರ್ಚೆ ಮಾಡಿದ್ದೀರಾ ಎಂದರೆ ಚರ್ಚೆಯಾಗಿಲ್ಲವೆಂದು ಬಹಳ ವ್ಯಥೆಯಿಂದ ಹೇಳಬೇಕಾಗುತ್ತದೆ. ಗ್ಯಾಟ್ ಒಪ್ಪಂದ, ಈಗ ಡಬ್ಲ್ಯುಟಿಒ ಎಂದು ಕರೆಯುತ್ತಾರೆ. ನಾನು ಅದನ್ನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೊಂದು ಸಂದರ್ಭದಲ್ಲಿ ಡಬ್ಲ್ಯುಟಿಒ ಬಗ್ಗೆ ಮಾತನಾಡುವುದಕ್ಕೆ ವಿಷಯ ತಯಾರು ಮಾಡಿದ್ದೇನೆ, ಮಾತನಾಡುತ್ತೇನೆ. ಈಚೆಗೆ ಸುಮಾರು 714 ವಸ್ತುಗಳನ್ನು ಹೊರದೇಶದಿಂದ ಯಾರು ಬೇಕಾದರೂ ಮುಕ್ತವಾಗಿ ತರಿಸಬಹುದು ಎಂದು ಇದೆ. ಅದರ ಪಟ್ಟಿ ಓದಿದರೆ ಬಹಳ ವೇಳೆ ಆಗುತ್ತದೆ. ಒಂದೆರಡು ಸ್ಯಾಂಪಲ್ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ರೈತರು ಬೆಳೆಯುವ ಅಡಿಕೆ, ತೆಂಗಿನ ಕಾಯಿ, ಹಂದಿಯನ್ನು ತರಿಸಬಹುದು, ಪ್ರತಿಯೊಂದು ಭಾಗವನ್ನು ತರಿಸಬಹುದು, ಕುರಿ, ಕೋಳಿ ಮೊಟ್ಟೆ ಹಾಲು ತರಿಸಬಹುದು. ಸಗಣಿ ಬಿಟ್ಟು ಎಲ್ಲವನ್ನೂ ತರಿಸಬೇಕೆಂದು ಕೇಂದ್ರ ಸರ್ಕಾರ ತೀರ್ಮಾನ ಮಾಡಿದೆ. ನಮ್ಮ ಪಕ್ಕದ ರಾಜ್ಯವಾದ ಕೇರಳದ ಮುಖ್ಯ ಮಂತ್ರಿಗಳು ಈ

ದೇಶದ ಬಡವರ ಬಗ್ಗೆ ಅವರಿಗೆ ಹಸಿರು ಕಾರ್ಡು ಮೂಲಕ ಕೊಡುವ ಸೀಮೆಎಣ್ಣೆ ಬೆಲೆ ಏರಿಸಿದ್ದರ ವಿರುದ್ಧ ಮತ್ತು ಹಸಿರು ಕಾರ್ಡು ಮೂಲಕ ಕೊಡತಕ್ಕಂತಹ ದವಸ ಧಾನ್ಯಗಳ ಬೆಲೆ ಏರಿಕೆ ವಿರುದ್ಧ ಹೊರದೇಶಗಳಿಂದ ಮುಕ್ತವಾಗಿ ತರಿಸತಕ್ಕಂತಹ ಈ ವಸ್ತುಗಳ ವಿರುದ್ಧ ಅವರು ಸ್ವತಃ ಧರಣಿ ಸತ್ಯಾಗ್ರಹ ಮಾಡಿ ತಮ್ಮ ವಿರೋಧವನ್ನು ಸೂಚಿಸಿದರು. ಅವರು ಅವರ ಪ್ರತಿಭಟನೆಯನ್ನು ಸೂಚಿಸಿದರು. ಮುಖ್ಯ ಮಂತ್ರಿಗಳಾದವರು ನೀವು ಏನು ಮಾಡಿದಿರಿ, ಅದರ ಬಗ್ಗೆ ಚಕಾರ ಎತ್ತಿದಿರಾ? ಯಾರ ಹಸಿವನ್ನು ನೀಗಿಸಬೇಕೆಂದು ನೀವು ಪ್ರಯತ್ನ ಪಡುತ್ತಿದ್ದೀರಿ, ಈ ರಾಜ್ಯದ ರೈತ, ಹೊಟ್ಟೆಗೆ ಅನ್ನಕೊಡತಕ್ಕಂಥವನು, ಮತ್ತು ಮೈಗೆ ಬಟ್ಟೆ ಕೊಡತಕ್ಕಂಥವನ ಬಗ್ಗೆ ಏನಾದರೂ ದೃಷ್ಟಿಹಾಯಿಸತಕ್ಕಂತಹ ಕೆಲಸ ಮಾಡಿದ್ದೀರಾ? ನೀವೆಲ್ಲರೂ ಕೂಡ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೀರಿ. ಆ ಕಾರ್ಯಕ್ರಮದಲ್ಲಿ ಬಹಳಷ್ಟು ಮಂತ್ರಿಗಳೂ ಕೂಡ ಭಾಗವಹಿಸಿದ್ದರು. ಇಂದು ರಾಜ್ಯದ ರೈತರು ಬೆಳೆಯುವ ಬೆಳೆಗಳ ಬಗ್ಗೆ ನಿಮಗ್ಯಾರಿಗೂ ಕಾಳಜಿಯೇ ಇಲ್ಲವಾಗಿದೆ. ರೈತರ ಬೆಳೆಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ರೈತರ ಪರವಾಗಿ ದೆಹಲಿಗೆ ಹೋಗಿ ನೀವು ಒಂದು ಕೂಗನ್ನೇನಾದರೂ ಹಾಕಿದ್ದೀರಾ? ಪಕ್ಕದ ರಾಜ್ಯದಲ್ಲಿ ಮುಖ್ಯ ಮಂತ್ರಿಗಳಾಗಿರತಕ್ಕಂಥವರು ಧರಣಿ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ನೀವೇನು ರಾಜ್ಯದ ರೈತರ ಪರವಾಗಿ ಮಾಡಿದಿರಿ? ನೀವೇಕೆ ಸತ್ಯಾಗ್ರಹವನ್ನು ಮಾಡಲಿಲ್ಲ? ಇಂದು 1100 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನಿದೆ. ಕಬ್ಬು ಬೆಳೆದಿರುವ ರೈತರ ಗತಿ ಏನಾಗಬೇಕು? ಪರದೇಶದಿಂದ ಸಕ್ಕರೆ, ಅಕ್ಕಿ ಮತ್ತಿನ್ನಿತರ ಪದಾರ್ಥಗಳನ್ನು ತರಿಸುತ್ತಿದ್ದಾರೆ. ಇವುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಕೊಟ್ಟು ರೈತರ ಸಮಾಧಿಯಾಗಲು ಕಾರಣರಾಗಿದ್ದಾರೆ. ಈ ರೀತಿ ಸಮಾಜದಲ್ಲಾಗುತ್ತಿದೆ ಎಂದು, ಜನರ ಬಗ್ಗೆ ನಿಮಗೆ ಕಿಂಚಿತ್ತೂ ಕನಿಕರವೇ ನಿಮಗಿಲ್ಲವಾಗಿದೆ. ಕೇಂದ್ರ ಸರ್ಕಾರ ಮಾಡಿರುವುದಕ್ಕೆ ಪ್ರತಿಭಟನೆಯನ್ನು ಮಾಡಲು ಕೂಡ ಕೈಲಾಗದ ಹಾಗೆ ನೀವುಗಳು ಕುಳಿತಿದ್ದೀರಿ. ರಾಜ್ಯದ ರೈತರ ಹಿತವನ್ನು ಕಾಪಾಡಬೇಕಾದದ್ದು ನಿಮ್ಮ ಕರ್ತವ್ಯವಾಗಿದ್ದರೂ ಕೂಡ ಆ ನಿಟ್ಟಿನಲ್ಲಿ ನೀವು ಪೂರ್ಣವಾಗಿ ವಿಫಲರಾಗಿದ್ದೀರಿ. ಕೇಂದ್ರ ಸರ್ಕಾರದವರು ಬೆಲೆ ಏರಿಸಿದರು ಎಂದು ನೀವು ಬೆಲೆಯನ್ನು ಏರಿಸುತ್ತಲೇ ಬಂದಿರಿ. ನಿಮ್ಮ ಜಾಯಮಾನದ ಜಾತಕ ಹಿಂದೆಯೂ ಹೀಗೆ ಇತ್ತು. ಹಿಂದೆ ಪಿ.ವಿ.ನರಸಿಂಹರಾಯರು ಪ್ರಧಾನ ಮಂತ್ರಿಗಳಾಗಿದ್ದಾಗ ಇದೇ ಪರಿಸ್ಥಿತಿ ಬಂದಿತ್ತು. ಆಗಲೂ ಕೂಡ ಹಸಿರು ಕಾರ್ಡ್ ಹೊಂದಿದವರಿಗೆ ಕೊಡುತ್ತಿದ್ದ ದವಸ ಧಾನ್ಯಗಳ ಬೆಲೆಯನ್ನು ನೀವು ಏರಿಸಿದ್ದಿರಿ. ಆಗ ನಾನು ಸಚಿವ ಸಂಪುಟದ ಸದಸ್ಯನಾಗಿದ್ದೆ. ನಾನು ಏನು ಹೇಳಿದೆನೆಂದರೆ ಏರಿಸಿರುವ ಬೆಲೆಯಿಂದಾಗಿ ಏನು ಹಳೆಯ ದರಕ್ಕೂ ಹೊಸ ದರಕ್ಕೂ ಬರುವ ವ್ಯತ್ಯಾಸವನ್ನು ರಾಜ್ಯ ಸರ್ಕಾರ ಕೊಡುತ್ತದೆ ಎಂದು ಹೇಳುತ್ತಾ 27 ಲಕ್ಷ ಕಾರ್ಡಗೆ ಬದಲಾಗಿ ಸುಮಾರು 68 ಲಕ್ಷ ಕಾರ್ಡಗಳಿಗೆ ಬರತಕ್ಕಂಥ ವ್ಯತ್ಯಾಸದ ಹಣವನ್ನು ರಾಜ್ಯ ಸರ್ಕಾರದವರಾದ ನಾವುಗಳು ಭರಿಸುತ್ತೇವೆ ಎಂದು ಹೇಳಿ ಆ

ಕೆಲಸವನ್ನು ಮಾಡಿದೆವು. ಇನಾಂದಾರ್‌ಸಾಹೇಬರೆ ನೀವೇನು ಮಾಡಿದಿರಿ ಈಗ?

ಶ್ರೀ ಎ.ಕೃಷ್ಣಪ್ಪ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ಸಕ್ಕರೆ ವಿಚಾರದಲ್ಲಿ ಯಾವ ಪರಿಸ್ಥಿತಿ ರಾಜ್ಯದಲ್ಲಿದೆ ಎಂದು ಹಿರಿಯ ಸದಸ್ಯರು ಹೇಳಿದ್ದಾರೆ. ಇದೇ ಪರಿಸ್ಥಿತಿ ಇಡೀ ದೇಶದಲ್ಲೂ ಇದೆ. ಆದರೆ ನಮ್ಮ ಪ್ರಯತ್ನದಲ್ಲಿ ಸಕ್ಕರೆ ವಿಚಾರದಲ್ಲಿ ನಾವು ಫೇಲ್ ಆಗಿಲ್ಲ. ಎಕ್ಸ್‌ಪೋರ್ಟ್ 2000 ಕಾರ್ಯಕ್ರಮ ನಡೆಸಿದಾಗಲೇ ನಾವು ಸಕ್ಕರೆಯನ್ನು ಎಕ್ಸ್‌ಪೋರ್ಟ್ ಮಾಡಿದ್ದೇವೆ. ಇಲ್ಲಿನ ಮುಖ್ಯ ಮಂತ್ರಿಗಳೂ ಕೂಡ ಅಲ್ಲಿನ ಪ್ರಧಾನಮಂತ್ರಿಗಳಿಗೆ ಕಾಗದವನ್ನು ಬರೆದಿದ್ದಾರೆ. ಸಂಬಂಧಪಟ್ಟ ಮಂತ್ರಿಗಳ ಜೊತೆ ಮೂರು ಸುತ್ತು ಮಾತುಕತೆಯನ್ನು ಮಾಡಿದ್ದೇವೆ. ಆದ್ದರಿಂದ ಇಂದು ಸ್ವಲ್ಪಮಟ್ಟಿಗೆ ಚೇತರಿಸಿಕೊಳ್ಳುವಂತೆ ಆಗಿದೆ. ಕೇಂದ್ರ ಸರ್ಕಾರ ಮಹಾಜನ್ ಆಯೋಗದ ವರದಿಯನ್ನು ಜಾರಿಗೆ ತಂದರೆ ಮಾತ್ರ ಇಂಥ ಉದ್ದಿಮೆಗಳು ಉಳಿಯಲು ಸಾಧ್ಯವಾಗುತ್ತದ ಎನ್ನುವಂಥ ವಿಷಯವನ್ನು ಭಾರತ ಸರ್ಕಾರಕ್ಕೆ ಹಲವಾರು ವೇದಿಕೆಗಳ ಮೂಲಕ ಈಗಾಗಲೇ ಹೇಳಿದ್ದೇವೆ. ಇದರ ಬಗ್ಗೆ ಮನವಿಗಳು ಕೂಡ ಹೋಗಿವೆ.

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು): ಜನತಾ ದಳ ಸರ್ಕಾರವಿದ್ದಾಗ 305 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟು 10 ಕಿಲೋ ಗ್ರಾಂ ಆಹಾರ ಧಾನ್ಯವನ್ನು ಕೊಡುತ್ತಿದ್ದರು. ನಾವು ಈಗ 20 ಕಿ.ಗ್ರಾಂ.ಗೆ ಏರಿಸಿರುವುದಲ್ಲದೇ 550 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ರಾಜ್ಯ ಸರ್ಕಾರದಿಂದ ಕೊಡುತ್ತಿದ್ದೇವೆ. ಆದುದರಿಂದ ರಾಜ್ಯ ಸರ್ಕಾರ ಸಬ್ಸಿಡಿಯನ್ನು ಕೊಡುತ್ತಿಲ್ಲವೆನ್ನುವ ಮಾತನ್ನು ದಯವಿಟ್ಟು ಆಡಬಾರದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಆಹಾರಧಾನ್ಯಗಳನ್ನು ಎಲ್ಲಿ ಲಿಫ್ಟ್ ಮಾಡಿದ್ದೀರಿ?

ಶ್ರೀ ಡಿ.ಬಿ. ಇನಾಂದಾರ್: ಲಿಫ್ಟ್ ಮಾಡುತ್ತಿದ್ದೇವೆ. 83 ಸಾವಿರ ಟನ್ ಆಲೊಕೇಶನ್ ಬಂದಿತ್ತು. ಕೆಲವೊಂದು ಆರ್ಥಿಕ ಕ್ಲಿಯರೆನ್ಸ್ ತೊಂದರೆಯಿಂದ ಒಂದು ತಿಂಗಳು ಆಗಿಹೋಗಿದೆ. ಇದರ ಬಗ್ಗೆ ತಿಳಿಸಿ ಕೇಂದ್ರ ಸರ್ಕಾರದವರು ಟೈಮ್ ಎಕ್ಸ್‌ಟೆಂಡ್ ಮಾಡಬೇಕೆಂದು ಮನವಿ ಮಾಡಿದ್ದೇವೆ. ಏಕೆಂದರೆ ಕಳೆದ ತಿಂಗಳು 29ನೇ ತಾರೀಖು ಬಂದ ರೇಟ್‌ನಿಂದ ನಾವು 15ನೇ ತಾರೀಖಿನೊಳಗೆ ಆಹಾರ ಧಾನ್ಯಗಳನ್ನು ಲಿಫ್ಟ್ ಮಾಡುವುದಕ್ಕೆ ಆಗಲಿಲ್ಲ. ಆದುದರಿಂದ ಇನ್ನೊಂದು ವಾರ ಟೈಮ್ ಕೊಡಬೇಕೆಂದು ಈಗಾಗಲೇ ಭಾರತ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಪ್ರತಿಯೊಬ್ಬರಿಗೂ 20 ಕಿ.ಗ್ರಾಂ. ಆಹಾರ ಧಾನ್ಯಗಳನ್ನು ಕೊಡಬೇಕೆನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಸಿ.ಬೈರೇಗೌಡ: ತಾತ್ವಿಕವಾಗಿ ಕಾಂಗ್ರೆಸ್ ಪಕ್ಷದವರು ಕೇಂದ್ರದಲ್ಲಿದ್ದಾಗ ರೈತರಿಗೆ, ಬಡವರಿಗೆ ಮಾಡಿತ್ತು. ಅಂದು ಬೆಲೆ ಹೆಚ್ಚಿಸಿ 300 ಕೋಟಿ ರೂ.ಗಳ

ಶಾಕ್‌ನ್ನು ಏನು ಕೇಂದ್ರ ಸರ್ಕಾರ ಮಾಡಿತ್ತೋ ಅದನ್ನು ನಮ್ಮ ಅಂದಿನ ಸರ್ಕಾರ ಪೂರ್ಣವಾಗಿ ಅಬ್ಸರ್ವ್ ಮಾಡಿತ್ತು. ಆದರೆ ಈಗಿನ ಸರ್ಕಾರ ಇಂದಿನ ಶಾಕ್‌ನ ಹೊಣೆಯನ್ನು ಹೊರಲಾಗದೇ ನೇರವಾಗಿ ಬಡವರ ತಲೆಯ ಮೇಲೆ ಹೇರಿದೆ. ಇದನ್ನು ತಾತ್ವಿಕವಾಗಿಯೇ ನಾನು ಹೇಳುತ್ತಿದ್ದೇನೆ. ದಿನಬೆಳಗಾದರೆ ಪತ್ರಿಕೆಗಳಲ್ಲಿ ಆ ಟಾಸ್ಕ್‌ಫೋರ್ಸ್ ಈ ಟಾಸ್ಕ್‌ಫೋರ್ಸ್ ಎಂದು ಬರುತ್ತಲೇ ಇದೆ. ಅದು ಎಷ್ಟು ಟಾಸ್ಕ್‌ಫೋರ್ಸ್‌ಗಳಿದೆಯೋ ನನಗಂತೂ ಗೊತ್ತಿಲ್ಲ. ಬಹುಶಃ ನನ್ನ ತಲೆಯಲ್ಲಿ ಎಷ್ಟು ಕೂದಲುಗಳಿವೆಯೋ ಅಷ್ಟು ಟಾಸ್ಕ್‌ಫೋರ್ಸ್‌ಗನ್ನು ಇವರು ಮಾಡಿರಬಹುದು. ಇದರ ಬಗ್ಗೆ ಜನರು ಅಪಹಾಸ್ಯವನ್ನು ಮಾಡುತ್ತಿದ್ದಾರೆ. ಮಹದೇವ್‌ರವರು ಕೂಡ ಇದನ್ನು ಕೇಳಿ ನಗುತ್ತಿದ್ದಾರೆ ನೋಡಿ.

ಶ್ರೀ ಎಂ.ಮಹದೇವ್ (ರೇಷ್ಮೆ ಖಾತೆ ಸಚಿವರು): ನೀವು ಮಾತನಾಡುತ್ತ ಹತ್ತು ಅಥವಾ ಹದಿನೈದೋ ಟಾಸ್ಕ್‌ಫೋರ್ಸ್ ಮಾಡಿದ್ದಾರೆ ಎಂದರ ಅದರಲ್ಲಿ ಅರ್ಥವಿರುತ್ತಿತ್ತು. ಆದರೆ ನೀವು ನಿಮ್ಮ ತಲೆಯಲ್ಲಿ ಎಷ್ಟು ಕೂದಲುಗಳಿವೆಯೋ ಅಷ್ಟು ಟಾಸ್ಕ್‌ಫೋರ್ಸ್ ಮಾಡಿದ್ದಾರೆ ಎಂದಿರಲ್ಲ ಅದಕ್ಕೋಸ್ಕರ ನನಗೆ ನಗು ಬಂತು.

ಶ್ರೀ ಸಿ.ಬೈರೇಗೌಡ: ನನ್ನ ಲೆಕ್ಕ ಅಷ್ಟಿದೆ. ಮಂತ್ರಿಗಳಾಗಿ ನೀವು ಕರಾರುವಕ್ಕಾಗಿ ಲೆಕ್ಕ ಕೊಡಿ. ಇಷ್ಟೊಂದು ಟಾಸ್ಕ್‌ಫೋರ್ಸ್‌ಗಳನ್ನು ಮಾಡಿರುವುದರಿಂದ ಮಂತ್ರಿಗಳಾಗಿರುವ 43 ಜನರಿಗೆ ಏನು ಕೆಲಸವಿದೆ? ಮಾನ್ಯ ಮಹದೇವ್‌ರವರು ಹೇಳಿದ ಹಾಗೆ ಟ್ರಾನ್ಸ್‌ಫರ್ ಮಾಡುವುದೇ ಇವರುಗಳ ಕೆಲಸವೆ?

ಶ್ರೀ ಎಂ.ಮಹದೇವ್: ಟ್ರಾನ್ಸ್‌ಫರ್ ಮಾಡುವುದು ನಮ್ಮ ಕೆಲಸವೆಂದು ನಾನು ಹೇಳಲಿಲ್ಲ. ನಾವು ಇನ್ನೂ ಟ್ರಾನ್‌ಸಫರ್ ಕೆಲಸವನ್ನು ಪ್ರಾರಂಭವೇ ಮಾಡಿಲ್ಲ. ನಿಮ್ಮ ಕಾಲದಲ್ಲಿ ಬೇಕಾದಷ್ಟು ಟ್ರಾನ್ಸ್‌ಫರ್‌ಗಳನ್ನು ಮಾಡಿದಿರಿ.

ಶ್ರೀ ಸಿ.ಬೈರೇಗೌಡ: ಟ್ರಾನ್ಸ್‌ಫರ್ ವಿಚಾರದಲ್ಲಿ ನಾನು ಎಷ್ಟು ನಿಷ್ಠೂರ ಕ್ರಮಗಳನ್ನು ತೆಗೆದುಕೊಂಡಿದ್ದ ಎಂಬ ಬಗ್ಗೆ ಅಧ್ಯಕ್ಷರಿಗೂ ಮತ್ತು ಅನೇಕ ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಚಾರವೇ ಆಗಿದೆ. ಈ ವಿಚಾರದಲ್ಲಿ ನನ್ನಷ್ಟು ಕಾಠಿಣ್ಯವಾಗಿ ಇನ್ನೊಬ್ಬರು ನಡೆದುಕೊಂಡಿಲ್ಲವೆಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಶ್ರೀ ಎಂ.ಮಹದೇವ್: ನಿಮ್ಮ ಸಹೋದ್ಯೋಗಿಗಳು ನಿಮ್ಮ ಹಾಗೆ ನಡೆದುಕೊಂಡಿಲ್ಲ. ನೀವೊಬ್ಬರೇ ಹಾಗೆ ನಡೆದುಕೊಂಡಿರುವುದು.

ಶ್ರೀ ಸಿ.ಬೈರೇಗೌಡರು: ಅಧ್ಯಕ್ಷರೆ, ಇಷ್ಟೊಂದು ಟಾಸ್ಕ್‌ಫೋರ್ಸ್‌ಗಳನ್ನು ಮಾಡಿರುವುದರಿಂದ 43 ಜನ ಮಂತ್ರಿಗಳಿಗೆ ಏನು ಕೆಲಸ? ಕಡೇ ಪಕ್ಷ ಆ 43 ಜನ ಮಂತ್ರಿಗಳನ್ನು ಸದನದಲ್ಲಿಯಾದರೂ ಕುಳಿತುಕೊಳ್ಳಿ ಎಂದರೂ ಕುಳಿತುಕೊಳ್ಳುವುದಿಲ್ಲ.

ಪ್ರತಿ ದಿವಸ ಮಂತ್ರಿಗಳನ್ನು ಸದನಕ್ಕೆ ಕರೆಸುವಂತೆ ಅಧ್ಯಕ್ಷರಿಗೆ ನಾವು ಮೊರೆ ಹೋಗಬೇಕಾಗಿದೆ. ಟಾಸ್ಕ್‌ಫೋರ್ಸ್‌ಗಳು ಹಾಗೂ 43 ಜನ ಮಂತ್ರಿಗಳಿಂದ ಸಾರ್ವಜನಿಕ ಬೊಕ್ಕಸಕ್ಕೆ ಹೊರೆಯಾಗುತ್ತದೆಂದು ತಮಗೆ ಅನ್ನಿಸುವುದಿಲ್ಲವೆ? ಇನ್ನು ಈ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇವರ ಸರ್ಕಾರ ನಮ್ಮ ಕಲ್ಪನೆಯ ಯೋಜನೆಗಳೇನು, ಏನು ಇದೆಯೋ ಅವುಗಳನ್ನು ಮೊದಲು ಬಲಿ ಹಾಕುತ್ತಿದೆ. ಗಂಗಾ ಕಲ್ಯಾಣ ಕಾರ್ಯಕ್ರಮ ಇಂದು ಆಲ್‌ಮೋಸ್ಟ್ ಸ್ಟ್ಯಾಂಡ್‌ಸ್ಟಿಲ್ ಆಗಿದೆ, ಅದು ನಡೆಯುತ್ತಲೇ ಇಲ್ಲವೆಂದೂ ನಾನು ಹೇಳುವುದಿಲ್ಲ. ಇವೊತ್ತು ನಮ್ಮ ಕ್ಷೇತ್ರದಲ್ಲಿ ಪಂಪ್‌ನ್ನು ಕೊಟ್ಟಿದ್ದಾರೆ, ಆದರೆ ಮೋಟಾರ್ ಕೊಟ್ಟಿಲ್ಲ. ಮೋಟರ್ ಕೊಟ್ಟಿರುವ ಕಡೆಗಳಲ್ಲಿ ಪ್ಯಾನಲ್ ಬೋರ್ಡ್ ಕೊಟ್ಟಿಲ್ಲ. ಇಷ್ಟೆಲ್ಲವನ್ನೂ ಒದಗಿಸಿರುವ ಕಡೆ ಇನ್ನೂ ವಿದ್ಯುತ್ ಸಂಪರ್ಕ ಸಿಕ್ಕಿಲ್ಲ. ಈ ಯೋಜನೆ ಬಡವರಿಗೋಸ್ಕರ ಇರತಕ್ಕಂಥದ್ದಾಗಿದೆ. ಕಳೆದ 50 ವರ್ಷಗಳಲ್ಲಿ ಈ ವರ್ಗಗಳ ಏಳಿಗೆಗೋಸ್ಕರ ಕೋಳಿ ಕುರಿಗಳನ್ನು ಕೊಟ್ಟಾಯಿತು, ಕತ್ತೆಗಳನ್ನು ಕೊಟ್ಟಾಯಿತು, ಎಲ್ಲವನ್ನೂ ಕೂಡ ಕೊಟ್ಟರೂ ಕೂಡ ಅವರು ಏಳಿಗೆಯಾಗಲೇ ಇಲ್ಲ. ಇಂಥ ವರ್ಗಗಳು ಆರ್ಥಿಕವಾಗಿ ಬಲಗೊಳ್ಳಬೇಕೆಂದೇ ಗಂಗಾ ಕಲ್ಯಾಣ ಕಾರ್ಯಕ್ರಮವನ್ನು ನಾವು ತಂದೆವು. ಕೇವಲ ಭೂಮಿ ಇದ್ದರೆ ಬೆಳೆಯುವುದಕ್ಕೆ ಆಗುವುದಿಲ್ಲ. ಬೆಳೆ ಬೆಳೆಯಬೇಕಾದರೆ ನೀರು ಬೇಕಾಗುತ್ತದೆ. ಒಂದು ಕೊಳವೆ ಬಾವಿಯನ್ನು ತೆಗೆದು ಅದರಿಂದ 2000 ಅಥವಾ 3000 ಗ್ಯಾಲನ್‌ನೀರು ಸಿಕ್ಕಿದರೆ ಅವನಿಗೆ ಬಂಗಾರದ ಗಣಿಯೇ ಸಿಕ್ಕಿದ ಹಾಗೆ ಆಗುತ್ತದೆ. ಈ ಕಾರ್ಯಕ್ರಮಕ್ಕೆ ಹೆಚ್ಚು ಒತ್ತನ್ನು ಕೊಡಬೇಕಾಗಿರುವುದು ಅವಶ್ಯಕವೇ ಆಗಿದೆ. ಅದರೆ ಆ ಒತ್ತುಕೊಡುವ ಕೆಲಸ ಖಂಡಿತವಾಗಿಯೂ ಆಗುತ್ತಿಲ್ಲ. ಇಂದು ನೀವುಗಳು ರೈತರ ಹೆಸರನ್ನು ಹೇಳಿಕೊಂಡೇ ಅಧಿಕಾರಕ್ಕೆ ಬಂದಿದ್ದೀರಿ. ಆದುದರಿಂದ ಬೇರೆ ಕಾರ್ಯಕ್ರಮಗಳು ಸ್ವಲ್ಪ ಹಿಂದುಮುಂದು ಆದರೂ ಚಿಂತೆಪಡದೇ ಆರ್ಥಿಕ ಬಲವನ್ನು ರೈತರಿಗೆ ಕೊಡುವ ಗಂಗಾ ಕಲ್ಯಾಣ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಾನು ಆಗಲೇ ಲೋಕಾಯುಕ್ತದ ಬಗ್ಗೆ ಪ್ರಸ್ತಾಪ ಮಾಡುವಾಗ ಒಂದು ವಿಚಾರವನ್ನು ಹೇಳುವುದನ್ನು ಮರೆತಿದ್ದೆ. ಇಂದು ಲೋಕಾಯುಕ್ತ ಕಳುಹಿಸುವ ವರದಿಗೆ ಸರ್ಕಾರದಲ್ಲಿ ಬೆಲೆಯೇ ಇಲ್ಲವಾಗಿದೆ. ಆದುದರಿಂದ ಲೋಕಾಯುಕ್ತದಲ್ಲಿರುವ ಅಧಿಕಾರಿಗಳು ಯಾವ ತೀರ್ಮಾನಕ್ಕೆ ಬಂದಿದ್ದಾರೆಂದರೆ, ನಾವೇನು ಶಿಫಾರಸ್ಸು ಮಾಡಿ ವರದಿಯನ್ನು ಕಳುಹಿಸಿದರು ಸರ್ಕಾರದವರು ಬೆಲೆಯೇ ಕೊಡದಿರುವುದರಿಂದ ಇಂಥವರನ್ನು ಅಮಾನತ್ತಿನಲ್ಲಿಡಿ, ಅಂಥವರ ಬಗ್ಗೆ ಈ ರೀತಿಯ ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ನಾವೇಕೆ ನಿಷ್ಠೂರವಾಗಬೇಕು ಎಂದು ಹೇಳಿಕೊಂಡು ಇವೊತ್ತಿನ ದಿವಸ ಲೋಕಾಯುಕ್ತ ಡಿ-ಮಾರಲೈಸ್ ಆಗಿದೆ. Lok Ayukta has been demoralised; Lok Ayukta has been derailed.

6.20 ಪಿ.ಎಂ.

ಮತ್ತೆ ಮಾತನಾಡತಕ್ಕಂಥಾದ್ದು ಏನು? ಟ್ರಾನ್ಸ್‌ಫರೆನ್ಸಿ, ಕರ್‌ಪ್‌ಷನ್ ಎಲ್ಲಾ ಬಗ್ಗೆ ಕೂಡ ತಾವು ಮಾತನಾಡುತ್ತೀರಿ. ಧರ್ಮಯುದ್ಧ ಘೋಷಿಸುತ್ತೇವೆ ಎಂದು ಕೂಡ ಹೇಳಿದ್ದೀರಿ. ಎಲ್ಲಿ ಧರ್ಮಯುದ್ಧ? ಯಾವ ಧರ್ಮಯುದ್ಧ? ಒಬ್ಬರು ಅಧಿಕಾರಿಗಳನ್ನು ನೀವು ಅಮಾನತ್ತಿನಲ್ಲಿ ಇಟ್ಟಿದ್ದೀರಾ? ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ. 3-4 ಕೋಟಿ ರೂಪಾಯಿಗಳನ್ನು ನುಂಗಿರತಕ್ಕಂಥ ಆಪಾದನೆ ಅವರ ಮೇಲೆ ಇದೆ. ಅವರನ್ನು ಸಸ್ಪೆಂಡ್ ಮಾಡಿಬಿಟ್ಟರೆ ಪ್ರಪಂಚ ತಲೆಕೆಳಗು ಆಗುತ್ತದಾ? ಏನೂ ಆಗುವುದಿಲ್ಲ. ಏಕೆ ನೀವು ಇವರಿಗೆ ರಕ್ಷಣೆ ಕೊಡಬೇಕು? Now Lok Ayukta has been demoralised. Not only demoralised, it has been derailed. ಆದರೆ ನೀವು ಭ್ರಷ್ಟಾಚಾರದ ಬಗ್ಗೆ ಧರ್ಮಯುದ್ಧ ನಡೆಸತಕ್ಕಂಥ ರೀತಿನಾ? ನಾನು ಆಗಲೇ ಒಂದು ವಿಚಾರವನ್ನು ಹೇಳುವುದು ಮರೆತಿದ್ದ. ದಿನಬೆಳಿಗ್ಗ ಎದ್ದರೆ ಪತ್ರಿಕೆಯಲ್ಲಿ ಅಡ್ವರ್‌ಟೈಸ್‌ಮೆಂಟ್ ನೋಡುತ್ತೇವೆ. ಅದು ಏನೇನೋ ಹೆಸರು ನನಗೆ ಅದನ್ನೆಲ್ಲಾ ಜ್ಞಾಪಕ ಇಟ್ಟುಕೊಳ್ಳುವುದಕ್ಕ ಕಷ್ಟವಾಗುತ್ತದೆ. ಆದ್ದರಿಂದ ನನಗೆ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ಬರೀ ಸರ್ಕಾರದಿಂದ ಬರತಕ್ಕಂಥಾದ್ದು ಅಲ್ಲ. ಬೆಂಗಳೂರಿನಲ್ಲಿ ಏನೋ ಕಾರ್ಯಕ್ರಮಗಳನ್ನು ಹಾಕಿದಿರಿ, ಒಂದೆರಡು ಮೂರು ಸಾರಿ ಪತ್ರಿಕೆಯಲ್ಲಿ ಪೇಜ್ ಪೂರ್ತಿ ಜಾಹಿರಾತು ಬಂತು. ಅದು ಯಾವುದೋ ಒಂದು ಕಮಿಟಿ ಎಂದು ಮಾಡಿದಿರಿ, ದಯವಿಟ್ಟು ಕ್ಷಮಿಸಬೇಕು ನನಗೆ ಅದರ ಹೆಸರು ಜ್ಞಾಪಕ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಫುಲ್ ಪೇಜ್ ಅಡ್ವೆರ್‌ಟೈಸ್‌ಮೆಂಟ್ ಪತ್ರಿಕೆಯಲ್ಲಿ ಬಂತು. ಸ್ವಾಮಿ ಇದಕ್ಕೆ ಹಣ ಖರ್ಚಾಗುತ್ತಿದೆಯಲ್ಲ,ಅದು ಯಾರದು? ಎಲ್ಲಿಂದ ಬಂತು? ಜಾಹಿರಾತು ಮೂಲಕ ಇಮೇಜ್ ಬೂಸ್ಟಿಂಗ್ ನಡೆಯುತ್ತಿದೆಯಲ್ಲ, ಇದು ಸಾರ್ವಜನಿಕರ ಬೊಕ್ಕಸಕ್ಕೆ ಹೋಗತಕ್ಕಂಥ ಹಣ. ಈ ಹಣಕ್ಕೆ ಲೆಕ್ಕವನ್ನು ಕೊಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಸರ್ಕಾರದಿಂದ ನೇರವಾಗಿ ಇದಕ್ಕೆ ಆಗಿರತಕ್ಕಂಥ ಹಣ ಎಷ್ಟು ಹಾಗೂ ಆ ಕಮಿಟಿ ಈ ಕಮಿಟಿ ಎಂದು ಹೇಳಿ ಜಾಹಿರಾತು ಪರೋಕ್ಷವಾಗಿ ಕೂಡ ಬಂದಿದೆ, ಅದಕ್ಕೆ ಖರ್ಚಾಗಿರತಕ್ಕಂಥ ಹಣ ಎಷ್ಟು? ಯಾರು ಕೊಟ್ಟರು? ಇದನ್ನು ಸಾರ್ವಜನಿಕರ ಗಮನಕ್ಕೆ ತರಬೇಕಾಗಿರತಕ್ಕಂಥಾದ್ದು ಇದೆ. The public have a right to know as to how the money is being spent. ಇದನ್ನು ನೀಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಟ್ರಾನ್ಸ್‌ಫರೆನ್ಸಿ ಮತ್ತು ದಕ್ಷತೆ ಎಂದು ಹೇಳುತ್ತಾರೆ. ನಾವು ಪ್ರತಿದಿನ ಸಭೆಗೆ ಬರಬೇಕಾದರೆ ಹೋಗಬೇಕಾದರೆ ನಮ್ಮ ಕಷ್ಟ ಎಷ್ಟು ಎಂದು ಹೇಳುತ್ತೇನೆ. ಒಂದು ಹತ್ತು ಜನರನ್ನಾದರೂ ಕೂಡ ನಾವು ಪಕ್ಕಕ್ಕೆ ತಳ್ಳಿ ಹೋಗಬೇಕು. ವಿಧಾನಸೌಧದ ಬಾಗಿಲಲ್ಲೆ ಕುರಿ ಹಿಂಡು ನುಗ್ಗಿದ ಹಾಗೆ ಜನ ನುಗ್ಗುತ್ತಾರೆ. ಶಾಸಕರ ಭವನದಲ್ಲಿಯಂತೂ ಓಡಾಡುವುದಕ್ಕೆ ಸಾಧ್ಯವಿಲ್ಲ.

ಯಾರು ಸ್ವಾಮಿ ಇವರು?

ಶ್ರೀಮತಿ ಮೋಟಮ್ಮ: ಇದು ನಮ್ಮ ಸರ್ಕಾರದ ಜನಪ್ರಿಯತೆ.

ಶ್ರೀ ಸಿ.ಬೈರೇಗೌಡ: ನಿಮ್ಮ ಜನಪ್ರಿಯತೆ ಎಷ್ಟಿದೆ ಎಂದರೆ ಇಲ್ಲಿಂದ ಹೋಗಿರತಕ್ಕಂಥ ಕೆಲವು ಶಾಸಕರು ಹೇಳಿದರು. ಅಯ್ಯೋ ಇವರ ಸಹವಾಸ ಬೇಡ. ನಾವು ತಪ್ಪು ಮಾಡಿದ್ದೇವೆ, ಯಾವುದಾದರೂ ಮಂತ್ರಿಗಳ ಕಚೇರಿಗೆ ಹೋದರೆ ನಾಲ್ಕು ಜನ ಕೈಯಲ್ಲಿ ಸೆಲ್ಯುಲಾರ್ ಫೋನ್ ಇಟ್ಟುಕೊಂಡಿರುತ್ತಾರೆ. ಅವರು ಹೋದರೆ ಸಾಕು ಏನು ಬೇಕು ಏನು ಬೇಕು ಎಂದು ಬಂದ ತಕ್ಷಣ ಹೆಜ್ಜೇನು ಮುತ್ತಿದ ಹಾಗೆ ಮುತ್ತುತ್ತಾರೆ. ಇದು ನನ್ನ ಅನುಭವ ಅಲ್ಲ. ನಾನು ಯಾರ ಕಚೇರಿಗೂ ಇವತ್ತಿನವರೆಗೂ ಕೂಡ ಕಾಲು ಇಟ್ಟಿಲ್ಲ. ಮುಂದೆ ಕೂಡ ಇಡುವುದಿಲ್ಲ. ಕನಿಷ್ಟ ನಾಲ್ಕು ಜನ ಸೆಲ್ಯೂಲಾರ್ ಫೋನ್ ಇಟ್ಟುಕೊಂಡು ನಿಮಗೆ ಏನು ಬೇಕು ನಾವು ಮಾಡಿಸುತ್ತೇವೆಂದು ಹೇಳಿ ಅಲ್ಲಿಗೆ ಬಂದಿರತಕ್ಕಂಥವರಿಗೆ ಮುತ್ತುತ್ತಾರೆ. ಅಲ್ಲಿ ಮಂತ್ರಿಗಳ ಕೋಣೆಯಲ್ಲಿ ಒಬ್ಬರಿಗೊಬ್ಬರಿಗೆ ಪೈಪೋಟಿ; ಒಡೆದಾಟ ಕೂಡ ಆಯಿತು. ನಮ್ಮ ಮಾಜಿ ಗೃಹ ಸಚಿವರು ಹೇಳುತ್ತಾರೆ ಒಡೆದಾಟ ಕೂಡ ಆಯಿತೆಂದು. ಇದು ಟ್ರಾನ್ಸ್‌ಫರೆನ್ಸಿ! ಸೆಲ್ಯುಲಾರ್ ಫೋನ್ ಇಟ್ಟುಕೊಂಡಿರುವಂತಹವರ ಕೈಯಲ್ಲಿ ನಿಮ್ಮ ಮಂತ್ರಿಗಳ ಕಚೇರಿಯನ್ನು ಕೊಟ್ಟಿದ್ದೀರಿ. ಮೊದಲು ಆ ದಲ್ಲಾಳಿಗಳನ್ನು ದೂರ ಇಡಿ. ಅದನ್ನು ಇವತ್ತಿನ ದಿವಸ ರಾಜ್ಯದ ಜನ ಬಯಸತಕ್ಕಂಥಾದ್ದು. ದಲ್ಲಾಳಿಗಳ ಕೈಯಲ್ಲಿ ಕಚೇರಿ, ಅಧಿಕಾರವನ್ನು ಕೊಟ್ಟಿರತಕ್ಕಂಥಾದ್ದನ್ನು ತೋರಿಸುತ್ತದೆ. ಅಮ್ಮಾವರು ಇದು ನಮ್ಮ ಸರ್ಕಾರದ ಜನಪ್ರಿಯತೆ ಎಂದು ಹೇಳಿದರು. ಅವರು ಇಲ್ಲಿಗೆ ಬರತಕ್ಕಂಥ ಜನರಲ್ಲ, ದಲ್ಲಾಳಿಗಳು, ಅದನ್ನು ಅರ್ಥಮಾಡಿಕೊಳ್ಳಿ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಉಪಾಧ್ಯಕ್ಷರೆ, 30 ವರ್ಷಗಳ ಕಾಲ ಈ ಸದನದಲ್ಲಿ ತಾವು ಅನುಭವ ಪಡೆದಿದ್ದೀರಿ. ಆದರೆ ನಾನು ಯಾವ ಕಚೇರಿಗೂ ಹೋಗಿಲ್ಲವೆಂದು ಹೇಳುತ್ತೀರಿ. ಹಾಗಾದರೆ ದಲ್ಲಾಳಿಗಳ ಬಗ್ಗೆ ಹೇಗೆ ಗೊತ್ತಾಯಿತು? ಇದು ನಿಮ್ಮ ಕಾಲದಲ್ಲಿ ನಡೆದಿದ್ದು, ಅದು ಜ್ಞಾಪಕವಾಗಿದೆ. ಜನರಲ್ ಆಗಿ ಎಲ್ಲಾ ಹೇಳಬೇಡಿ. ಯಾವ ಮಂತ್ರಿಗಳ ಕಚೇರಿಯಲ್ಲಿ ನಡೆಯುತ್ತಿದೆ ಅಂತ ಹೇಳಿ, ತಿದ್ದಿಕೊಳ್ಳುತ್ತೇವೆ. ಒಟ್ಟಾರೆ ಸ್ಟೇಟ್‌ಮೆಂಟ್ ಇಲ್ಲಿ ಮಾಡಬೇಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ನಾನು ಇಲ್ಲಿ ಹೆಸರು ಹೇಳಿ ಅವರಿಗೆ ಅವಮಾನ ಮಾಡುವುದಕ್ಕೆ ತಯಾರಿಲ್ಲ. ನೀವು ಎಷ್ಟು ಹೇಳಿದರೂ ನಾನು ಹೆಸರು ಹೇಳುವುದಿಲ್ಲ. ಹೆಸರು ಹೇಳಿ ನಾನು ವೈಯಕ್ತಿಕವಾಗಿ ಯಾರಿಗೂ ಕೂಡ ಅವಮಾನ ಮಾಡುವುದಕ್ಕೆ ಸಿದ್ದನಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಅಪರೂಪಕ್ಕೆ ಮಾನ್ಯ ಕೃಷ್ಣಪ್ಪನವರು

ಸರ್ಕಾರವನ್ನು ಡಿಫೆಂಡ್ ಮಾಡಿಕೊಂಡು ಈ ತರಹ ಇದ್ದರೆ ನಾವು ತಿದ್ದಿಕೊಳ್ಳುತ್ತೇವೆಂದು ಹೇಳಿದರು. ಈ ವಿಚಾರದಲ್ಲಿ ನನ್ನದೊಂದು ಸಲಹೆ. ಎಲ್ಲಾ ಪಕ್ಷಗಳ ಸರ್ಕಾರ ಇದ್ದಾಗ ಕೂಡ ಈ ತರಹ ಒಂದು ವರ್ಗದ ಜನ ಇರುತ್ತಾರೆ. ಇವರನ್ನು ಏನು ಬೇಕಾದರೂ ಕರೆದುಕೊಳ್ಳಿ. ನಾವು ಅದಕ್ಕೋಸ್ಕರ 1994-95ರಲ್ಲಿ ನಮ್ಮ ಸರ್ಕಾರ ಪ್ರಾರಂಭವಾದಾಗ ಬೆಂಗಳೂರಿನಲ್ಲಿ ಕೆಲವು 20-30 ಲಾಡ್ಜ್‌ನಲ್ಲಿ ವಿಧಾನಸೌಧದ ಹಾಗೂ ಎಲ್.ಹೆಚ್ ಸುತ್ತಮುತ್ತ ಅಲ್ಲೆಲ್ಲಾ ವಿಡಿಯೋ ಕ್ಯಾಮರಗಳನ್ನು ತೆಗೆದುಕೊಂಡು ಎಲ್ಲಾ ತೆಗೆಸಿಡಿ ಎಂದು ಹೇಳಿದೆ. ಅದು ತೆಗಸಿದ ತಕ್ಷಣ ಎಲ್ಲಾ ಹೋಟೆಲ್ ರೂಮುಗಳು ಖಾಲಿಯಾಗಿತ್ತು. ನಮ್ಮ ಶಾಸಕರು ಸಹ 3-6 ತಿಂಗಳು ನೆಮ್ಮದಿಯಿಂದ ಇರತಕ್ಕಂಥ ಒಂದು ವಾತಾವರಣ ನಿರ್ಮಾಣವಾಗಿತ್ತು. ಅದರಿಂದಾಗಿ ಈಗ ಏನಾಗಿದೆ ಜನರಲ್ ಟ್ರಾನ್ಸ್‌ಫರ್ ಮಾಡುವುದಿಲ್ಲವೆಂದು ಹೇಳಿದ್ದೀರಿ. 3-4 ವರ್ಷ ಒಂದೇ ಜಾಗದಲ್ಲಿ ಅವರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿಕೊಂಡಿದ್ದರು. ಈಗ ಅಂತಹವರು ಬೇರೆ ಜಾಗಕ್ಕೆ ಹೋಗಬೇಕಾಗಿದೆ. ಅದರಿಂದಾಗಿ ಸ್ವಾಭಾವಿಕವಾಗಿ ಈ ಕಡೆಯಿಂದ ಯಾರನ್ನು ಕರೆದುಕೊಂಡು ಬರುತ್ತಿದ್ದರೋ ಅವರನ್ನು ಆ ಕಡೆಯಿಂದ ಯಾರನ್ನು ಕರೆದುಕೊಂಡು ಬರುತ್ತಿದ್ದಾರೆ. ನೀವು ಅವರನ್ನೆಲ್ಲಾ ಓಡಿಸಿ. ನೀವು ಏನು ಒಳ್ಳೆಯ ಸರ್ಕಾರ ಎಂದು ಹೇಳುತ್ತಿದ್ದೀರಿ, ಧರ್ಮಯುದ್ಧ, ಭ್ರಷ್ಟಾಚಾರದ ವಿರುದ್ಧ ಕೆಂಗಲ್ ಹನುಮಂತಯ್ಯನವರ ಬಿಗಿತನ, ನಿಜಲಿಂಗಪ್ಪನವರ ಮುತ್ಸದ್ದಿತನ, ದೇವರಾಜು ಅರಸುರವರ ಸಾಮಾಜಿಕ ನ್ಯಾಯ, ಕೊಡಬೇಕೆಂದು ಸರ್ಕಾರಕ್ಕೆ ನಿಜವಾಗಲೂ ಆಸೆ ಇದ್ದರೆ, ಇವರೆಲ್ಲರನ್ನು ಓಡಿಸಬೇಕಾದರೆ ಎಂಟು ವೀಡಿಯೋ ಕ್ಯಾಮರಾ ತೆಗೆದುಕೊಂಡು ಪೊಲೀಸ್ ಅಧಿಕಾರಿಗಳನ್ನು ಕರೆದುಕೊಂಡು ಅವರನ್ನೆಲ್ಲಾ ಫೋಟೋ ತೆಗೆಸಿ. ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಟ್ಟ ನಾಲ್ಕು ದಿವಸದ ಒಳಗಡೆ ಎಲ್ಲಾ ಲಾಡ್ಜ್‌ಗಳು ಖಾಲಿಯಾಗಿರುತ್ತವೆ. ಟೆಸ್ಟ್ ಮಾಡಿ ನೋಡಿ. ನಾವು ಮಾಡಿದ್ದೇವೆ, ನೀವು ದಯವಿಟ್ಟು ಮಾಡಿ.

ಉಪಾಧ್ಯಕ್ಷರು: ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಅಧ್ಯಕ್ಷರು ಸಭೆಯನ್ನು ಏಳು ಗಂಟೆಗೆ ಮುಕ್ತಾಯ ಮಾಡುವುದಕ್ಕೆ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಇನ್ನು ಮೂರು ಜನ ಸದಸ್ಯರು ಮಾತನಾಡುವವರು ಇದ್ದಾರೆ. ಒಂದು ಸಮಸ್ಯೆ ಏನೆಂದರೆ ಒಂದರಿಂದ ಎರಡು ಗಂಟೆವರೆಗೆ ನಮಗೆ ಲೀಸರ್ ಇತ್ತು. ಎರಡು ಗಂಟೆಗೆ ಸಭೆ ಸೇರಬೇಕಿತ್ತು, ಆದರೆ ನಾವು ಸೇರಿದಾಗ 4.30 ಗಂಟೆ ಆಯಿತು. ಎರಡೂವರೆ ಗಂಟೆ ಲ್ಯಾಪ್ಸ್ ಆಯಿತು. ನಾವು ಒಪ್ಪಿಕೊಂಡಿದ್ದು ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಮಾಡಲಿ ಎಂದು. ಈಗ ನಮ್ಮ ಕಡೆಯಿಂದ ಎಸ್.ಎಸ್.ಪಾಟೀಲ್, ಹಂಪನಗೌಡರು ಮಾತನಾಡಬೇಕಿದೆ.

ಉಪಾಧ್ಯಕ್ಷರು: ಅದಕ್ಕೆ ನಾನು ಹೇಳಿದ್ದು, ಕನ್‌ಕ್ಲೂಡ್ ಮಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈಗ ನಮ್ಮ ಕಡೆಯಿಂದ ಮಾತನಾಡತಕ್ಕಂಥವರು ಬಹಳ ಕಡಿಮೆ. ನಾನು 45 ನಿಮಿಷ ಮಾತನಾಡಿದ್ದೇನೆ. ತಾವು ಕರುಣೆ ತೋರಿಸಬೇಕು. ಎಲ್ಲಾ ಹಿರಿಯ ಮಂತ್ರಿಗಳು ಅಪರೂಪಕ್ಕೆ ಕುಳಿತುಕೊಂಡು ಕೇಳುತ್ತಿದ್ದಾರೆ. ಮಾನ್ಯ ಕೃಷ್ಣಪ್ಪನವರು ನಾವು ಹೇಳಿದಂತಹ ಸಲಹೆಯನ್ನು ಇಂಪ್ಲಿಮೆಂಟ್ ಮಾಡುತ್ತಾರೆನ್ನುವ ಕಾನ್‌ಫಿಡೆನ್ಸ್ ನಮಗೆ ಇದೆ. ಇಂತಹ ಒಳ್ಳೊಳ್ಳೆಯ ಕೆಲಸ ಆಗುತ್ತಿರುವಾಗ ಇದನ್ನು ಮೊಟಕು ಮಾಡಬೇಡಿ.

ಉಪಾಧ್ಯಕ್ಷರು: ಏಳು ಗಂಟೆಗೆ ಸಭೆ ಮುಕ್ತಾಯ ಮಾಡಬೇಕೆಂದು ಸಭಾಧ್ಯಕ್ಷರು ಆದೇಶ ಕೊಟ್ಟಿದ್ದಾರೆ. ಬೇರೆಯವರಿಗೆ ಅವಕಾಶ ಕೊಡುವುದಕ್ಕೆ ಇಚ್ಛೆ ಇದ್ದರೆ ಬೇಗ ಮುಗಿಸಿ.

ಶ್ರೀ ಸಿ.ಭೈರೇಗೌಡ: ಮಾನ್ಯ ಮುಖ್ಯಮಂತ್ರಿಗಳು ಬಂದಂತಹ ಕಾಲದಲ್ಲಿ ಅವರು ಕೆಲವು ಕಡೆ ಪರ್ಯಟನೆ ಮಾಡಿದರು. ನಗರ ಪ್ರದಕ್ಷಿಣೆ ಎಂದು ಮಾರ್ಕೆಟ್‌ಗೆ, ಮೇಕ್ರಿ ಸರ್ಕಲ್‌ಗೆ ಹೋದರು. ಹೋದ ಕಡೆ ಏನು ಹೇಳಿದರು ಪತ್ರಿಕೆ ಓದಿದ್ದೀರಾ? ನಿಮಗೆ ಜ್ಞಾಪಕ ಇದೆಯಾ ನಿಮಗೆ? ಅವರು ಏನು ಹೇಳಿದರು? ಕಂಟ್ರಾಕ್ಟರ್‌ಗಳನ್ನು ಬ್ಲಾಕ್ ಲಿಸ್ಟ್ ಮಾಡಿ ಎಂದು ಹೇಳಿದರು. ಲೆಕ್ಕ ಕೊಡಬೇಕು ಸ್ವಾಮಿ ಈಗ. ಆರು ತಿಂಗಳಿನಿಂದ ಎಷ್ಟು ಜನರನ್ನು ಬ್ಲಾಕ್ ಲಿಸ್ಟ್ ಮಾಡಿದ್ದೀರಿ ಎಂದು ಲೆಕ್ಕ ಕೊಡಬೇಕು. ಮತ್ತು ಅವರು ಒಂದು ಸಭೆ ಕರೆದಿದ್ದರು. ಆ ಸಭೆಯಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಸಬ್ ಸ್ಟ್ಯಾಂಡರ್ಡ್ ಕೆಲಸವನ್ನು ಮಾಡಿರತಕ್ಕಂಥವರನ್ನು ಸಮಯಕ್ಕೆ ಸರಿಯಾಗಿ ಕೆಲಸ ಮಾಡದೇ ಇರುವಂಥವರನ್ನು ಇರತಕ್ಕಂಥ ಕಾನೂನಿನಲ್ಲಿ ಬ್ಲಾಕ್ ಲಿಸ್ಟ್ ಮಾಡುವಂಥಾದ್ದಕ್ಕೆ ಅವಕಾಶವಿದೆ. ಅವರಿಂದ ಹಣವನ್ನು ವಸೂಲಿ ಮಾಡುವಂಥಾದ್ದಕ್ಕೆ ಅವಕಾಶವಿದೆ. ಅವರಿಂದ ಹಣವನ್ನು ವಸೂಲಿ ಮಾಡುವಂಥಾದ್ದಕ್ಕೆ ಅವಕಾಶವಿದೆ, ಮತ್ತೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುವಂಥಾದ್ದಕ್ಕೂ ಕೂಡ ಕಾನೂನಿನಲ್ಲಿ ಅವಕಾಶವಿದೆ. ನಾನು ಸುಮಾರು ಮೂನ್ನೂರಕ್ಕಂತ ಹೆಚ್ಚು ಜನರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿಸಿದ್ದೇನೆ. ನೀವು ಎಲ್ಲಿಯಾದರೂ ಒಂದು ಕಡೆ ಈ ರೀತಿ ಕೇಸ್ ಹಾಕಿದ್ದಿರಾ? ಈ ಆರು ತಿಂಗಳುಗಳಿಂದ ಈಚೆಗೆ ಇಂತಹ ಸಮಾಜದ್ರೋಹಿಗಳ ಮೇಲೆ ಒಂದು ಕೇಸ್ ಹಾಕಿ ಕ್ರಮ ತೆಗೆದುಕೊಂಡಿರುವಂಥಾದ್ದು ಉದಾಹರಣೆ ಏನಾದರೂ ಇದೆಯೇ? ಇದ್ದರೆ ನೀವು ಅದನ್ನು ಹೇಳಬೇಕಾಗುತ್ತದೆ. ನೀವು ಇಷ್ಟು ಜನ ಕಂಟ್ರಾಕ್ಟರ್ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ, ಇಂಥವರನ್ನು ಬ್ಲಾಕ್ ಲಿಸ್ಟ್ ಮಾಡಿದ್ದೇವೆ, ಎನ್ನುವಂಥಾದ್ದನ್ನು ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ

ಹೇಳಬೇಕಾಗುತ್ತದೆ. ಇನ್ನು ಇವರು ರೈತರ ವಿಚಾರದಲ್ಲಿ ಒಂದೆರಡು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾನು ರೈತರ ಪಕ್ಷಪಾತಿಯಾಗಿದ್ದೇನೆ, ಇವರು ಹೇಳಿದ ಹಾಗೆ ಧಾರವಾಡ ಡಿಕ್ಲರೇಶನ್ ಬಗ್ಗೆ ಇದು ಟೊಳ್ಳು ಡಿಕ್ಲೆರೇಶನ್ ಆಗಿದೆ. ನಾವು ಏನು ಕೆಲಸವನ್ನು ಮಾಡಿದ್ದೇವೋ, ಅದಕ್ಕಿಂತ ಮುಂದೆ ಮಾಡಿ ಹೇಳುವಂಥಾದ್ದಕ್ಕೆ ಸಾಧ್ಯವಿಲ್ಲ. ಅದು ಬಾಟಲಿ ಬದಲಾವಣೆ ಮಾಡುವುಂಥಾದ್ದು ಅಷ್ಟೆ ಒಳಗಡೆ ಇರುವಂಥ ಮದ್ಯ ಬದಲಾವಣೆಯಾಗಿಲ್ಲ, ಆದರೆ ಒಂದೆರಡು ಕೆಲಸಗಳನ್ನು ಮಾಡಿದ್ದಾರೆ. ಅದನ್ನು ಸಹ ನಾವೇ ಮಾಡಿದ್ದು. ಇವತ್ತು ಆಗ್ರೋ ಪ್ರೊಸೆಸಿಂಗ್ ಬಗ್ಗೆ ಹೇಳಿದ್ದಾರೆ. ತಮಗೆ ಸರ್ಕಾರದಲ್ಲಿರುವಂತಹ ಅಧಿಕಾರಿಗಳು ಮಾಹಿತಿಯನ್ನು ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ನಾವು ಆಗ್ರೋ ಪ್ರೋಸೆಸಿಂಗ್ ಪಾಲಿಸಿಯನ್ನು ಇಡೀ ದೇಶದಲ್ಲಿ ಪ್ರಥಮವಾಗಿ ಫುಡ್ ಪ್ರೋಸೆಸಿಂಗ್ ಪಾಲಿಸಿಯನ್ನು ಮಾಡಿರುವಂತಹ ಸರ್ಕಾರ ಯಾವುದಾದರೂ ಇದ್ದರೆ ಅದು ನಮ್ಮ ಸರ್ಕಾರದಿಂದ ಮಾಡಿದ್ದೇವೆ. ಆದುದರಿಂದ ಇವತ್ತಿನ ದಿವಸ ಆಗ್ರೋ ಪ್ರೋಸೆಸಿಂಗ್ ಪಾರ್ಕ್ ಮಾಡಬೇಕು, ಅದನ್ನು ಎರಡು ಕಡೆಗಳಲ್ಲಿ ಮಾಡಬೇಕೆಂದು ಇದ್ದೆವು. ತಾವು ಒಂದು ಕಡೆ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಅದಕ್ಕೆ ನಾನು ರೈತರ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ಶೀತಲಗೃಹಗಳ ಬಗ್ಗೆ ನೀವು ಒತ್ತು ಕೊಡುವಂತಹ ಕೆಲಸ ಮಾಡಬೇಕೆಂಬ ಉದ್ದೇಶವಿದೆ. ಅದನ್ನು ನಾನು ಮೆಚ್ಚುತ್ತೇನೆ. ಅದೇ ರೀತಿಯಲ್ಲಿ ಶ್ವೇತ ಪತ್ರದ ಬಗ್ಗೆ ನಮ್ಮ ಸರ್ಕಾರ ಮಾಡಿರುವಂತಸ ತೀರ್ಮಾನಗಳನ್ನು ತಾವು ಮೆಚ್ಚಿದ್ದೀರಿ. ಅದಕ್ಕೆ ನಾನು ಪ್ರತಿಯಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ರಾಜ್ಯವಷ್ಟೆ ಅಲ್ಲ ಕೇಂದ್ರ ಸರ್ಕಾರ ಸಹ ಮತ್ತೆ ಎಲ್ಲಾ ರಾಜ್ಯ ಸರ್ಕಾರಗಳಲ್ಲೂ ಸಹ ಸರಿಸುಮಾರು ಇವತ್ತಿನ ದಿವಸ ಹಣಕಾಸಿನ ಪರಿಸ್ಥಿತಿ ಏನಾಗುತ್ತಿದೆ ಎಂದರೆ ರಾಜ್ಯಸರ್ಕಾರಗಳಲ್ಲಿ ಬರುವಂತಹ ಆದಾಯವೆಲ್ಲವೂ ಸಂಬಳಕ್ಕೆ ಹೋಗುತ್ತಿದೆ. ಇವತ್ತು ಬಿಹಾರ ರಾಜ್ಯದಲ್ಲಿ, ಉತ್ತರ ಪ್ರದೇಶದಲ್ಲಿ ಶೇ.79ರಷ್ಟು ರಾಜ್ಯದ ಆದಾಯ ಸಂಬಳಕ್ಕೆ ಹೋಗುತ್ತಿದೆ. ನಮ್ಮ ರಾಜ್ಯದ ಶೇ.70ರಷ್ಟು ಇವತ್ತಿನ ದಿವಸ ಸಂಬಳ ಸಾರಿಗೆಗೆ ಹೋಗುತ್ತಿದೆ. ನಮ್ಮ ಅಭಿವೃದ್ಧಿ ಕೆಲಸಗಳಿಗೆ ಮಾತೆತ್ತಿದರೆ ವರ್ಲ್ಡ್ ಬ್ಯಾಂಕ್, ಐ.ಎಂ.ಎಫ್., ನಬಾರ್ಡ್ ಮತ್ತಿತರ ಹಣಕಾಸಿನ ಸಂಸ್ಥೆಗಳು ಏನಿವೆ. ಅವುಗಳ ಮೂಲಕ ಸಾಲ ಪತ್ರಗಳು ಅಂದರೆ ಹುಡ್ಕೋ ಇಂತಹದ್ದರಲ್ಲಿ ಸಾಲಪತ್ರಗಳ ಮೂಲಕ ಸಾಲ ಎತ್ತುವಂಥಾದ್ದು, ಮತ್ತೆ ಬೆಂಗಳೂರಿನಲ್ಲಿ ರಸ್ತೆ ರಿಪೇರಿ ಮಾಡುವಂಥಾದ್ದಕ್ಕೆ ಮುನಿಸಿಪಾಲ್ ಬಾಂಡ್ ಎಂದು 120 ಕೋಟಿ ರೂಪಾಯಿಗಳ ಬಾಂಡ್ ಮಾಡಿದ್ದು. ಈ ರೀತಿಯಾಗಿ ಸಾಲವನ್ನು ಮಾಡಿ ನಾವು ಅಭಿವೃದ್ಧಿಯನ್ನು ಸಾಧಿಸುತ್ತೇವೆಂದರೆ ಒಂದು ದಿವಸ ಎಲ್ಲವೂ ಮುಳುಗಿ ಹೋಗುತ್ತದೆ. ಆರ್ಥಿಕ ಪರಿಸ್ಥಿತಿ ಮುಳುಗಿ ಹೋಗುತ್ತದೆ. ಆದುದರಿಂದ ಈ ಆರ್ಥಿಕ ವಿಚಾರದಲ್ಲಿ ಕೆಲವು ದೃಢವಾದಂತಹ ನಿರ್ಧಾರವನ್ನು ದೂರದೃಷ್ಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದಲೇ Politician thinks of the next election. Statesman thinks of the next generation.

ಇವತ್ತು ಆ ದೃಷ್ಟಿಯಿಂದ ಈ ಕಾರ್ಯಕ್ರಮಗಳನ್ನು ರೂಪಿಸುವಂಥಾದ್ದಕ್ಕೆ ಆರ್ಥಿಕ ಪರಿಸ್ಥಿತಿಯು ರಾಜ್ಯದಲ್ಲಿ ಬಹಳ ಕೆಟ್ಟ ಪರಿಸ್ಥಿತಿಯಲ್ಲಿರುವುದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಎಸ್.ಎಂ.ಕೃಷ್ಣರವರು ಸಮರ್ಪಕವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವರು ಇವತ್ತು ಶ್ವೇತ ಪತ್ರದಲ್ಲಿ ಏನು ಹೇಳಿದ್ದಾರೆ. ಆ ಪರಿಸ್ಥಿತಿಯನ್ನು ಕಂಡಾಗ ಮತ್ತೆ ನಮ್ಮ ಸರ್ಕಾರಕ್ಕೆ ಶಹಭಾಸ್ ಗಿರಿಯನ್ನು ಕೊಟ್ಟಿದ್ದಾರೆ. ಆದರೆ ಇರುವಂತಹ ಸಮಸ್ಯೆಯನ್ನು ಈ ಆರ್ಥಿಕ ಪರಿಸ್ಥಿತಿಯನ್ನು ಬದಲಾವಣೆ ಮಾಡುವಂಥಾದ್ದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕೆಂದು ಮನವಿ ಮಾಡಿ ತಾವು ನನಗೆ ಮಾತನಾಡುವುದಕ್ಕೆ ಹೆಚ್ಚಿನ ವೇಳೆಯನ್ನು ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಮತ್ತೆ ಮಾನ್ಯ ಮಂತ್ರಿಗಳೆಲ್ಲರೂ ಬಹಳ ಸಾವಧಾನದಿಂದ ನನ್ನ ಭಾಷಣವನ್ನು ಕೇಳಿದ್ದಾರೆ, ಅವರಿಗೂ ವಂದನೆಗಳನ್ನು ಅರ್ಪಿಸುತ್ತೇನೆ.

+ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ): ಮಾನ್ಯ ಚೇರ್ಮನ್‌ರವರೆ, ನಾನು ಸುಮಾರು ಐದು ವರ್ಷಗಳಿಂದ ಈ ಸದನಕ್ಕೆ ಚುನಾಯಿತನಾಗಿ ಬಂದಿದ್ದೇನೆ. ತಾವು ಯಾವುದಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕೋ ಅದು ಈ ಸದನ ಹೊಸದಾಗಿ ರಚನೆಯಾದ ಮೇಲೆ ಆ ಮಹತ್ವ ಸಿಗುತ್ತಾ ಇಲ್ಲ. ತಾವು ಈಗಾಗಲೇ 15-20 ನಿಮಿಷಗಳು ಮಾತನಾಡಿ ಎಂದು ಅವಸರ ಮಾಡುತ್ತಿದ್ದೀರಿ. ಮತ್ತೆ 7 ಗಂಟೆಗೆ ಸಭೆ ಮುಗಿಸಬೇಕೆಂದು ಹೇಳುತ್ತಿದ್ದೀರಿ. ನಾವು ನೀವು ಸದನಕ್ಕೆ ಸಚಿವರುಗಳು ಬರಲಿಲ್ಲವೆಂದು ಒಂದೂವರೆ, ಎರಡು ಗಂಟೆಗಳ ಕಾಲ ಕಳೆದಿದ್ದೇವೆ. ಆ ವೇಳೆಯಲ್ಲಿ ನಾವು ಮಾತನಾಡಬಹುದಾಗಿತ್ತು, ಈಗ ಪರಿಸ್ಥಿತಿ ಮಾತನಾಡುವುದಕ್ಕೆ ಮನಸ್ಸು ಆಗದ ಹಾಗೆ ಸಭೆ ಯಾವಾಗ ಮುಗಿಯುತ್ತದೆ, ಯಾವಾಗ ಹೋಗುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆಂದರೆ ಹೇಗೆ? ನಾನು ಇಲ್ಲಿ ಏನಾದರೂ ಹೇಳಿದರೆ ಅದಕ್ಕೆ ಅವರು ಉತ್ತರವನ್ನು ಹೇಳಬೇಕು, ಇದೆಲ್ಲಾ ನಡೆಯಬೇಕು. ನಾನು ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತೇನೆ. ನಾನು ಇದನ್ನು ಮಾತನಾಡುತ್ತಾ ಹೋದರೆ ಬೇರೆ ಚರ್ಚೆಗೆ ಸಮಯ ಹೋಗುತ್ತದೆ. ಆದುದರಿಂದ ಇದನ್ನು ಆಮೇಲೆ ಮಾತನಾಡೋಣ. ಇವತ್ತು ಎಲ್ಲರೂ ನಮ್ಮ ರಾಜ್ಯಪಾಲರನ್ನು ವಂದಿಸಿದ್ದಾರೆ, ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಮಾನ್ಯ ರಾಜ್ಯಪಾಲರು ಒಬ್ಬ ಮಹಿಳಾ ರಾಜ್ಯಪಾಲರಾಗಿ ಕನ್ನಡದಲ್ಲಿ ಮಾತನಾಡಿ ಹೊಸ ಸಂಪ್ರದಾಯವನ್ನು ನಮಗೆ ಹಾಕಿಕೊಟ್ಟಿದ್ದಾರೆ. ಅವರು ನಮಗೆ ಮಾರ್ಗದರ್ಶನವನ್ನು ಮಾಡಿದ ಹಾಗೆ ಆಗಿದೆ. ಇವರು ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ ''ಸರ್ಕಾರ ಎಲ್ಲಾ ಹಂತದಲ್ಲೂ ಕನ್ನಡವನ್ನು ಬಳಸುವುದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ. 'ಕನ್ನಡ ಸಾಫ್ಟವೇರ್' ಅನ್ನು ಅಭಿವೃದ್ಧಿ ಪಡಿಸಿ ಕಂಪ್ಯೂಟರ್‌ನಲ್ಲಿ ಕನ್ನಡ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಕ್ರಮ ಕೈಗೊಳ್ಳಲಾಗಿದೆ,'' ಎಲ್ಲಾ ಹಂತಗಳಲ್ಲೂ

ಕನ್ನಡವನ್ನು ಬಳಸುತ್ತೇವೆಂದು ಹೇಳಿದ್ದಾರೆ. ನಾನು ಮೊದಲನೆಯದಾಗಿ ವಿಧಾನಸಭೆಯನ್ನೆ ನೋಡೋಣ. ನಾನು ತಮ್ಮ ಕಚೇರಿ ಬಗ್ಗೆ ಹೇಳಿದರೆ ತಪ್ಪು ತಿಳಿಯಬಹುದು. ನಾನು ಮೊದಲು ತಮ್ಮ ಕಚೇರಿಯ ಬಗ್ಗೆ ಹೇಳುತ್ತೇನೆ. ನಾವು ಬೇರೆ ಕಡೆಗಳಲ್ಲಿ ಇರುವಂತಹ ಸ್ಥಿತಿಯನ್ನು ಹೇಳುವುದಕ್ಕೆ ಹೋಗುವುದು ಬೇಡ. ನಾವು ಪ್ರಶ್ನೆಗಳನ್ನು ಕನ್ನಡದಲ್ಲಿ ಕಳುಹಿಸುತ್ತೇವೆ. ಅದನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿ ನಮಗೆ ಮೊದಲು ಇಂಗ್ಲೀಷ್‌ನಲ್ಲಿ ಉತ್ತರ ಪ್ರತಿಗಳು ಬರುತ್ತದೆ. ಇಲ್ಲಿ ಸಭೆಗೆ ಬಂದರೆ ಕನ್ನಡದ ಪ್ರತಿಗಳನ್ನು ಇಟ್ಟಿರುತ್ತಾರೆ. ಇದು ಕನ್ನಡಕ್ಕೆ ಕೊಟ್ಟಿರುವಂತಹ ಪ್ರಾಶಸ್ತ್ಯವಾಗಿದೆ. ನಾವು ಕನ್ನಡದಲ್ಲಿ ಪ್ರಶ್ನೆಯನ್ನು ಬರೆದು ಕಳುಹಿಸಿಕೊಟ್ಟರೆ ಅದನ್ನು ಇಂಗ್ಲೀಷ್‌ಗೆ ಭಾಷಾಂತರ ಮಾಡಿ ಉತ್ತರವನ್ನು ಸಹ ಕಳುಹಿಸುತ್ತಾರೆ. ಮೊದಲನೇ ಪ್ರಾಶಸ್ತ್ಯ ಇಂಗ್ಲೀಷ್‌ಗೆ ಕೊಡುತ್ತಿದ್ದೀರಿ, ಕನ್ನಡಕ್ಕೆ ಮೊದಲ ಪ್ರಾಶಸ್ತ್ಯ ಇಲ್ಲವೆಂದು ತಮ್ಮ ಕಚೇರಿಯಿಂದ ಕಳುಹಿಸುವ ಉತ್ತರಗಳ ಮೂಲಕ ತಿಳಿಸುತ್ತಿದ್ದೀರಿ. ಇದು ಪ್ರತಿದಿವಸ ನಡೆಯುತ್ತಿರುವಂಥ ವಿಚಾರವಾಗಿದೆ. ನಿನ್ನೆಯ ದಿವಸ ಇಲ್ಲಿಗೆ ಯಾವುದೋ ಒಂದು ವರದಿ ಒಂದು ಕೆಂಪು ಪುಸ್ತಕದಲ್ಲಿ ಬಂದಿದೆ. ನೋಡಿ, ಇದು ಇಂಗ್ಲೀಷ್‌ನಲ್ಲಿ ಇದೆ. ನನಗೆ ಇಂಗ್ಲೀಷ್ ಓದುವುದಕ್ಕೆ ಬರುವುದಿಲ್ಲ. ದಯಮಾಡಿ ಇದನ್ನು ನೋಡಿ ಯಾವ ಆಯೋಗದ ವರದಿ ಎಂದು ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಪರಮೇಶ್ವರ ದಯಾಳ್ ರಿಪೋರ್ಟ್ ಎಂದು ಇಂಗ್ಲೀಷ್‌ನಲ್ಲಿ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಚೇರ್‌ಮನ್‌ರವರೆ, ನೋಡಿ ಇದು ಇಂಗ್ಲೀಷ್‌ನಲ್ಲಿ ಇದೆ. ಇದನ್ನು ನೋಡಿದಾಗ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ ಮಾಡಬೇಕೆಂದು ತಮ್ಮ ಸರ್ಕಾರಕ್ಕೆ ಎಷ್ಟು ಕಾಳಜಿ ಇದೆಯೆಂದು ಗೊತ್ತಾಗುತ್ತದೆ. ಅಲ್ಲವೇ? ಮಾನ್ಯ ಕಾಗೋಡು ತಿಮ್ಮಪ್ಪನವರ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಳಿದ ಪ್ರಶ್ನೆಗೆ ಇಂಗ್ಲೀಷ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಕೇಳಿದ ಪ್ರಶ್ನೆಗೆ ಇಂಗ್ಲೀಷ್‌ನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇಂಗ್ಲೀಷ್ ಭಾಷೆ ಬೇಡ ಎಂದು ನಾನು ಹೇಳಲಿಲ್ಲ.

ಚೇರ್‌ಮನ್: ಸಾಮಾನ್ಯವಾಗಿ ಇಂಗ್ಲೀಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿ ಉತ್ತರಗಳನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಚೇರ್‌ಮನ್‌ರವರೆ, ನಾನು ಚೆನ್ನಾಗಿ ನೋಡಿಯೇ ಮಾತನಾಡುತ್ತಿದ್ದೇನೆ. ನಾನು ಈಗ ಎರಡು ಉದಾಹರಣೆಗಳನ್ನು ಹೇಳಿರುವುದರಲ್ಲಿ ಖಂಡಿತಾ ಕನ್ನಡದಲ್ಲಿ ಉತ್ತರ ಬಂದಿಲ್ಲ. ಅಂದರೆ ಸಂಪೂರ್ಣವಾಗಿ ಕನ್ನಡವನ್ನು ಆಡಳಿತ ಭಾಷೆ ಮಾಡುವಂಥ ಬದ್ಧತೆ ನಿಮ್ಮ ಸರ್ಕಾರದಲ್ಲಿ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಿಮ್ಮಿಂದ ಮಾಡುವುದಕ್ಕೂ

ಆಗುವುದಿಲ್ಲ. ಇಲ್ಲಿಯವರೆಗೆ ಮಾಡಿರುವುದನ್ನು ಸಹ ಕೆಡಿಸುತ್ತೀರಿ. ''ಬೀಜಕ್ಕೆ ಬಿಡುವ ಕಾಯಿಯನ್ನು ಹೀಚಿನಲ್ಲಿ ನೋಡು'' ಎಂದು ಹೇಳುತ್ತೇನೆ. ಚಿಕ್ಕದಾಗಿದ್ದಾಗಲೇ ನಮ್ಮ ಕಡೆ ನೋಡುತ್ತೇವೆ. ಈ ಸರ್ಕಾರವನ್ನು ಹೀಚಿನಲ್ಲೇ ನೋಡಿದ್ದೇವೆ. ನಿಮ್ಮಿಂದ ಈ ರಾಜ್ಯ ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ನಿಮ್ಮಿಂದ ಕನ್ನಡ ಆಡಳಿತ ಭಾಷೆ ಆಗುವುದಕ್ಕೆ ಸಾಧ್ಯವೇ ಇಲ್ಲ. ಖಂಡಿತವಾಗಿ ನಿಮ್ಮಿಂದ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಎಲ್ಲಾ ಕಡೆ ಇಂಗ್ಲೀಷ್ ಭಾಷೆಯನ್ನು ತರುತ್ತೀರಿ. ದುರ್ದೈವದಿಂದ ಮಾನ್ಯ ಸದಸ್ಯರೊಬ್ಬರು ಇಲ್ಲಿ ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಅವರು ಸದನದಲ್ಲಿ ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಅದನ್ನು ಇಲ್ಲಿ ಯಾರೂ ಪ್ರತಿಭಟನೆ ಮಾಡಲಿಲ್ಲ ಎಂದು ಪೇಪರ್‌ನಲ್ಲಿ ಬಂದಿದೆ. ಆದರೆ ನಾವು ಏನು ಮಾಡಿದ್ದೇವೆಂದರೆ - ನಮ್ಮ ಸಹದ್ಯೋಗಿ ಒಬ್ಬರು ಮಾತನಾಡುವಾಗ ಪದೇ ಪದೇ ಪ್ರತಿಭಟನೆ ಮಾಡುವುದು ಬೇಡವೆಂದು ನಾವೆಲ್ಲ ಸುಮ್ಮನಾದೆವು. ಆದರೆ ಬೇರೆ ರಾಜ್ಯದಿಂದ ಬಂದಂಥ ಒಬ್ಬರು ರಾಜ್ಯಪಾಲರು ಅವರು ಭಾಷಣವನ್ನು ಇಂಗ್ಲೀಷ್ ಅಥವಾ ಯಾವ ಭಾಷೆಯಲ್ಲಿಯೇ ಬರೆದುಕೊಂಡಿರಲಿ ಅದು ಮುಖ್ಯ ಅಲ್ಲ ಅವರು ಕನ್ನಡವನ್ನು ಸ್ಪಷ್ಟವಾಗಿ ಕಲಿತಿರುವವರ ಹಾಗೆ ಭಾಷಣ ಮಾಡಿದರು. ಆದರೆ ನಮ್ಮ ರಾಜ್ಯದಲ್ಲಿಯೇ ಹುಟ್ಟಿದವರು ಕನ್ನಡ ಕಲಿತಿಲ್ಲ ಎಂದು ಹೇಳಿದರೆ ಇನ್ನು ಅಧಿಕಾರಿಗಳನ್ನು ಕನ್ನಡ ಕಲಿತಿಲ್ಲ ಎಂದು ಕೇಳುವುದಕ್ಕೆ ನಮಗೇನು ಅಧಿಕಾರವಿದೆ. ನಮಗೇನು ಹಕ್ಕಿದೆ? ಸದನದಲ್ಲಿ ನಾವೆಲ್ಲಾ ಇಂಗ್ಲೀಷ್‌ನಲ್ಲಿ ಮಾತನಾಡಿ, ಅಧ್ಯಕ್ಷರವರ ಕಛೇರಿಯಿಂದ ಇಂಗ್ಲೀಷ್‌ನಲ್ಲಿಯೇ ಪತ್ರಗಳು ಆದೇಶಗಳು ಹೊರಟು, ಉತ್ತರ ಕೂಡ ಇಂಗ್ಲೀಷ್‌ನಲ್ಲಿಯೇ ಬಂದರೆ ಇನ್ನು ಅಧಿಕಾರಿಗಳನ್ನು ಕೇಳುವ ಹಕ್ಕು ನಮಗೆಲ್ಲಿದೆ? ಆದ್ದರಿಂದ ನಿಮ್ಮ ಸರ್ಕಾರ ಎಂದೆಂದೂ ಈ ರಾಜ್ಯದಲ್ಲಿ ಕನ್ನಡವನ್ನು ಬಳಕೆಗೆ ತರುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯದಲ್ಲಿ ಕಳೆದ 10 ವರ್ಷದಿಂದ ಕನ್ನಡ ಕಾವಲು ಸಮಿತಿಯನ್ನು ಮಾಡಲಾಗಿದೆ. ಕನ್ನಡ ಬೆಳೆದಿದೆಯೇ? ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸರ್ಕಾರವನ್ನು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ವಿಧಾನಸಭೆಯಲ್ಲಿ ಕನ್ನಡವನ್ನು ಬಳಕೆಗೆ ತರಲಿಕ್ಕೆ ಕನ್ನಡ ಕಾವಲು ಸಮಿತಿಯನ್ನು ಇಲ್ಲಿ ರಚಿಸಿ. ಇಂಥ ಒಂದು ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಈ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿ ಬೆಳೆಯಬೇಕಾದರೆ, ಬರಬೇಕಾದರೆ ನಾವೆಲ್ಲರೂ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರದವರಲ್ಲಿ, ಮಾನ್ಯ ಹಿರಿಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನೀವು ಮೊದಲು ಕನ್ನಡದಲ್ಲಿ ಬರೆದು ಕಳುಹಿಸುವುದಕ್ಕೆ, ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿ, ನಿಮ್ಮ ಕಚೇರಿಯಿಂದ ಕಳುಹಿಸುವಂಥ ಎಲ್ಲಾ ಕಾಗದ ಪತ್ರಗಳನ್ನು ಕನ್ನಡದಲ್ಲಿ ತಯಾರಿಸಿ ಕಳುಹಿಸುವಂಥ ಪ್ರಯತ್ನ ಮಾಡಿ. ಶ್ರೀಮತಿ ನಫೀಸಾ ಫಜಲ್ ಅವರು ಮಾತನಾಡುವಾಗ ಕೆಲವರು ನಗುತ್ತಾರೆ. ಏಕೆ ನಗುತ್ತೀರಿ? ಆ ತಾಯಿ ಇವತ್ತಿನ ದಿವಸ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ, ಬಹಳ ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತಾರೆ, ಉತ್ತರವನ್ನು ಸಹ ಕೊಡುತ್ತಾರೆ. ಆದರೆ ದುರ್ದೈವವಶಾತ್

ದೇವರು ಅವರಿಗೆ ಆ ರೀತಿಯ ಕಂಠ, ಉಚ್ಚಾರಣೆ ಕೊಟ್ಟಿದ್ದಾರಷ್ಟೆ. ಅದಕ್ಕೆ ಅವರಿಗೆ ನೀವೆಲ್ಲ ಹುಡುಗಾಟಿಕೆ ಮಾಡುವುದೇ? ಕನ್ನಡದಲ್ಲಿ ಅವರು ಮಾತನಾಡುವಾಗ ಆವತ್ತಿನ ದಿವಸ ಎಲ್ಲರೂ ಹುಡುಗಾಟಿಕೆ ಮಾಡಿದರು ಅದನ್ನು ನೋಡಿ ನನಗೆ ಬಹಳ ನೋವಾಯಿತು. ಇವರನ್ನು ಕನ್ನಡ ಕಲಿಸಲಿಕ್ಕೆ ಕನ್ನಡ ಶಾಲೆಗೆ ಮಾಸ್ತರ್‌ರನ್ನಾಗಿ ಮಾಡಬೇಕೆಂದು ಹೇಳಿದಿರಿ ಈ ರೀತಿ ಎಲ್ಲರೂ ಹೇಳಿದ್ದನ್ನು ಕೇಳಿ ನನ್ನ ಮನಸ್ಸಿಗೆ ಬಹಳ ನೋವು ಆಯಿತು. ಅವರು ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಿದರು. ಅವರ ಉಚ್ಚಾರಣೆ ಆ ರೀತಿ ಬರುತ್ತದೆ ಎನ್ನುವದನ್ನು ಬಿಟ್ಟರೆ ಖಂಡಿತವಾಗಿ ಆ ತಾಯಿ ಕನ್ನಡದಲ್ಲಿ ಮಾತನಾಡುವುದನ್ನು ನಾನಂತೂ ಪ್ರಶಂಸೆ ಮಾಡುತ್ತೇನೆ. ಇಲ್ಲಿ ಕನ್ನಡ ಬಾರದಂಥ ಶಾಸಕರು ಯಾರು ಇದ್ದಾರೆ ಅವರಿಗೆ ಆ ತಾಯಿ ಮಾರ್ಗದರ್ಶಕರಾಗಿದ್ದಾರೆ ಎನ್ನುವ ಮಾತನ್ನು ಹೇಳುತ್ತೇನೆ. ಹೆಣ್ಣುಮಕ್ಕಳು ಆಯಾಯ ರಾಜ್ಯಕ್ಕೆ ತಕ್ಕಂಥ ಭಾಷೆಯನ್ನು ಮಾತನಾಡುತ್ತಾರೆಂದು ದೇಶದಲ್ಲೆಲ್ಲ ರಾಜ್ಯದಲ್ಲಿ ಗೊತ್ತಾಗಿದೆ. ಗಂಡಸರಿಂದ ಅದು ಆಗುವುದಿಲ್ಲವೆಂದು ಸಹ ಗೊತ್ತಾಗಿದೆ. ಐ.ಎ.ಎಸ್. ಅಧಿಕಾರಿ ಹೆಣ್ಣುಮಕ್ಕಳು ಎಲ್ಲೆಲ್ಲಿ ಇದ್ದಾರೆ ಅವರೆಲ್ಲ ಕನ್ನಡ ಮಾತನಾಡುತ್ತಾರೆ..... ಬೇಡ, ಶ್ರೀಮತಿ ಸೋನಿಯಾ ಗಾಂಧಿ ಅವರ ಮೇಲೆ ಮಾತನಾಡಿದರೆ ಅವರು ಇಲ್ಲಿ ಇಲ್ಲ ಅವರ ಬಗ್ಗೆ ಏಕೆ ಮಾತನಾಡುತ್ತೀರಿ ಎಂದು ಕೇಳುತ್ತೀರಿ. ಅದಕ್ಕೆ ಅವರ ಬಗ್ಗೆ ಮಾತನಾಡುವುದಿಲ್ಲ. ಕಾಂಗ್ರೆಸ್‌ನವರಿಗೆ ಅವರನ್ನು ಬಿಟ್ಟರೆ ಬೇರೆ ಗತಿಯೇ ಇಲ್ಲ. ಬಳ್ಳಾರಿಯನ್ನು ಅಮೇಥಿಯನ್ನಾಗಿ ಮಾಡುತ್ತೇನೆಂದು ಅವರು ಹೇಳಿದ್ದಾರೆ. ಅಮೇಥಿ ಕ್ಷೇತ್ರಕ್ಕೆ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಏನಾದರೂ ಅಭಿವೃದ್ಧಿ ಆಗಿದೆಯೇ ಎಂಬುದನ್ನು ನೋಡಿಕೊಂಡು ಬನ್ನಿ. ಉತ್ತರ ಪ್ರದೇಶಕ್ಕೆ ನಾನು ಹೋಗಿ ಅಲ್ಲೆಲ್ಲ ನೋಡಿಕೊಂಡು ಬಂದಿದ್ದೇನೆ. ಅದರ ಹಾಗೆ ನಮ್ಮ ಬಳ್ಳಾರಿಯನ್ನು ಮಾಡಿದರೆ ಇನ್ನೂ ಹದಗೆಟ್ಟು ಹೋಗುತ್ತದೆ. ನಮ್ಮ ರಾಜ್ಯದಲ್ಲಿ ಬಹುಪಾಲು ಒಳ್ಳೆಯದಾಗಿದೆ. ಬಹುಶಃ ಮಾನ್ಯ ಶ್ರೀಕಂಠಯ್ಯನವರು ಒಪ್ಪುತ್ತಾರೆಂದು ಈ ಮಾತನ್ನು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಇಲ್ಲಿಗೆ ಬಿಟ್ಟು ದಯವಿಟ್ಟು ನನ್ನನ್ನೂ ಸೇರಿಸಿ ಇಲ್ಲಿ ಯಾರೂ ರಾಜಕೀಯ ಮಾತನಾಡುವುದು ಬೇಡ. ಕನ್ನಡವನ್ನು ಆಡಳಿತ ಭಾಷೆಯಾಗಿ ಈ ರಾಜ್ಯದಲ್ಲ ತರುವಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು, ಇದರ ಬಗ್ಗೆ ಸರ್ಕಾರ ನಾಳೆ ದಿವಸ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ಹೇಳಬೇಕಾಗುತ್ತದೆ.

ಚೇರ್‌ಮನ್: ಮಾತನಾಡಿ ಬೇಗ ತಾವು ಮುಗಿಸಿದರೆ ಒಳ್ಳೆಯದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಚೇರ್‌ಮನ್‌ರವರೆ, ಮಾತನಾಡುವುದು ಬೇಡ ಎಂದರೆ ಇಲ್ಲಿಗೆ ಮುಗಿಸಿಬಿಡುತ್ತೇನೆ. ಇಲ್ಲಿ ಏನಾಗಿದೆ ಎಂದರೆ ಯಾವುದು ಚರ್ಚೆ ಆಗಬೇಕೋ ಅದು ಇಲ್ಲಿ ಆಗುತ್ತಿಲ್ಲ. ಎರಡು ದಿವಸ ಅಧಿವೇಶನವನ್ನು ಮುಂದುವರಿಸಿದರೆ ಅನ್ಯಾಯ ಏನೂ ಆಗಲಿಕ್ಕಿಲ್ಲ. ನಾವು ಇಲ್ಲಿ ಚರ್ಚೆ

ಮಾಡುವುದಕ್ಕೋಸ್ಕರವೇ ಬಂದಿದ್ದೇವೆ. ಹಾಗಾದರೆ ಸರ್ಕಾರವೇ ಕುಳಿತುಕೊಂಡು ಮಾತನಾಡಿಕೊಳ್ಳಲಿ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ, ಸುಮ್ಮನೆ ಕುಳಿತುಬಿಡುತ್ತೇನೆ. ಇಲ್ಲದಿದ್ದರೆ ನಾನು ಮಾತನಾಡಲೇಬೇಕು. ಮೊನ್ನೆಯ ದಿವಸ ಮಾತನಾಡುವಾಗ - ಇವತ್ತು ಟೈಮ್ ಆಗಿದೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಸಾಕಷ್ಟು ಅವಕಾಶ ಕೊಡುತ್ತೇನೆ ಎಂದು ಮಾನ್ಯ ಅಧ್ಯಕ್ಷರು ಹೇಳಿದರು. ಇವತ್ತು ಇಲ್ಲಿ ಸದಸ್ಯರುಗಳು, ಮಂತ್ರಿಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲವೆಂದು ಸದನವನ್ನು ಮುಂದಕ್ಕೆ ಹಾಕಿ 2 ಗಂಟೆ ಸಮಯ ವೇಸ್ಟ್ ಆಯಿತು. ನಾನು ಬಹಳ ಮಾತನಾಡುವುದಿದೆ.

ಛೇರ್‌ಮನ್: ದಯವಿಟ್ಟು ಕೇಳಿ, ಬೇಡಿಕೆ ಮೇಲೆ ಮಾತನಾಡುವಾಗ ತಾವು ಸಾಕಷ್ಟು ಮಾತನಾಡಬಹುದು. ಇದಕ್ಕೆ ಸಮಯವನ್ನು ನಿಗದಿಪಡಿಸುವಾಗಲೇ ಈ ಸಮಸ್ಯೆ ಇತ್ತು. ಬೇಡಿಕೆ ಮೇಲೆ ಮಾಡನಾಡುವಾಗ ಬೇಕಾದಷ್ಟು ಅವಕಾಶ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಛೇರ್‌ಮನ್‌ರವರೆ, ನಾನು ಈ ನಿಮಿಷಲ್ಲೇ ಬೇಕಾದರೆ ಮಾತನಾಡುವುದನ್ನು ನಿಲ್ಲಿಸುತ್ತೇನೆ. ಆದರೆ ನನ್ನ ಒಂದು ವಿನಂತಿ ಏನೆಂದರೆ - ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ರಾಜ್ಯದ ಹಣಕಾಸಿನ ಬಗ್ಗೆ ಶ್ವೇತಪತ್ರವನ್ನು ಮಂಡಿಸಿದರು. ಇನ್ನು ಮುಂದೆ ರಾಜ್ಯದ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ಪ್ರಾಮಾಣಿಕವಾಗಿ ಮಂಡಿಸಿದರು. ಇದರ ಮೇಲೆ ಚರ್ಚೆ ಮಾಡುವುದಕ್ಕೆ ಒಂದು ಸಮಯವನ್ನು ನಿಗದಿ ಮಾಡದೇ ಇದ್ದರೆ ನಾವು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಮಾನ್ಯ ಅಧ್ಯಕ್ಷರು ಉತ್ತರ ಕೊಡಿಸುತ್ತೇವೆಂದು ಹೇಳಿದರೂ ಕೊಡಿಸಲಿಲ್ಲ. ಅವಸರಕ್ಕೆ ಒಳಪಟ್ಟರೆ ಏನು ಮಾಡುವುದು? ಇಲ್ಲಿರುವ ಪರಿಸ್ಥಿತಿ ಏನಿದೆ?

ಛೇರ್‌ಮನ್: ತಾವು ಹೇಳಿರುವ ವಿಚಾರವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರೋಣ. ಅವಕಾಶ ಮಾಡಿಕೊಡಬಹುದು. ಇವತ್ತು ಇಷ್ಟಕ್ಕೆ ಮುಗಿಸಿಬಿಡೋಣ. ಇನ್ನು ಎರಡು ನಿಮಿಷ ಮಾತನಾಡಿ ಮುಗಿಸಿಬಿಡಿ. ನಾಳೆ ಡಿಸ್‌ಕಶನ್ ಇರುವುದಿಲ್ಲ, ನಾಳೆ ಸರ್ಕಾರದಿಂದ ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: ನಾನು ಭಾಷಣವನ್ನು ಪ್ರಾರಂಭ ಮಾಡಿ ಐದು ನಿಮಿಷ ಆಯಿತಷ್ಟೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಈ ಡಿಸ್‌ಕಶನ್‌ನ್ನು ನಾಳೆ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಿ.

ಛೇರ್‌ಮನ್: ನಾಳೆ ಚರ್ಚೆ ಇರುವುದಿಲ್ಲ. ಅಧ್ಯಕ್ಷರ ಆದೇಶದ ಪ್ರಕಾರ ನಾಳೆ ಬೆಳಿಗ್ಗೆ 11-00 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ.

ಶ್ರೀ ಎಸ್.ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು): ಮಾನ್ಯ ಚೇರ್‌ಮನ್‌ರವರೆ, ಈಗ ಸಂಜೆ 6-30 ಗಂಟೆಗೆ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಮೀಟಿಂಗ್ ಇದೆ. ಇದು ಕ್ಯಾಬಿನೆಟ್ ಮೀಟಿಂಗ್. ಅದಕ್ಕೆ ನಾವು ಅಲ್ಲಿಗೆ ಹೋಗಬೇಕಾಗಿದೆ. ದಯವಿಟ್ಟು ಸ್ವಲ್ಪ ತಾವು ಮುಗಿಸಿಬಿಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಚೇರ್‌ಮನ್‌ರವರೆ, ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ಶ್ರೀ ಎಸ್.ಎಸ್.ಪಾಟೀಲರು ಮಾತನಾಡಿ ಐದು ನಿಮಿಷ ಆಗಿದೆ. ಅವರು ಅನೇಕ ಅನುಭವದ ವಿಚಾರಗಳನ್ನು ಹೇಳಬೇಕಾಗುತ್ತದೆ. ನಾಲ್ಕೈದು ಜನ ಸದಸ್ಯರು ಬಿಜೆಪಿಯಿಂದ, ಜನತಾದಳದಿಂದ ಆಡಳಿತದ ಪಕ್ಷದಿಂದ ಮಾತನಾಡುವವರು ಇದ್ದಾರೆ. ನಾಳೆ ಬೆಳಿಗ್ಗೆ 2 ಗಂಟೆಗಳ ಕಾಲ ಡಿಸಕಷನ್‌ಗೆ ಅಲೋ ಮಾಡಿ. ಇದು ಆದಮೇಲೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡಲಿ. ಆದಾದನ,ತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ಇಲ್ಲದಿದ್ದರೆ ಇದಕ್ಕೆ ಅರ್ಥವೇ ಬರುವುದಿಲ್ಲ. The essence of democracy is Debate. ಇದು ಇಲ್ಲದಿದ್ದರೆ ಹೇಗೆ?

ಛೇರ್‌ಮನ್: ನಾಳೆ ಬಿಳಿಗ್ಗೆ 11-00ಗಂಟೆಗೆ ಸದನ ಸೇರುತ್ತದೆ. ತಾವೆಲ್ಲ ಮಾನ್ಯ ಅಧ್ಯಕ್ಷರಿಗೆ ಮನವರಿಕೆ ಮಾಡಿಕೊಡಿ. ಅವರು ಮನಸ್ಸು ಮಾಡಿ ಡಿಸಕಶನ್‌ಗೆ ಅವಕಾಶ ಕೊಟ್ಟರೂ ಕೊಡಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಒಂದು ಕೆಲಸ ಮಾಡೋಣ, ಕ್ಯಾಬಿನೆಟ್ ಮೀಟಿಂಗ್‌ನ್ನು ಮುಂದಕ್ಕೆ ಹಾಕಲಿ. ಮಾತನಾಡುವವರೆಲ್ಲಾ ರಾತ್ರಿ 10-00 ಗಂಟೆ ಆದರೂ ಪರವಾಗಿಲ್ಲ. ಮಾತನಾಡುತ್ತೇವೆ. ಈಗ ಚರ್ಚೆಯನ್ನು ಮೊಟಕು ಮಾಡುತ್ತೇವೆಂದು ಹೇಳಿದರೆ ಹೇಗೆ? ಇಲ್ಲದಿದ್ದರೆ ನಾಳೆ ಬೆಳಿಗ್ಗೆ 2 ಗಂಟೆಗಳ ಕಾಲ ಡಿಸಕಶನ್‌ಗೆ ಸಮಯಾವಕಾಶವನ್ನು ಕೊಡಿ

ಛೇರ್‌ಮನ್: ನೀವು ನನಗೆ ಹೇಳಿದರೆ ಏನೂ ಪ್ರಯೋಜನವಿಲ್ಲ. ಅಧ್ಯಕ್ಷರು ಒಪ್ಪುವಂತೆ ಮನವರಿಕೆ ಮಾಡಿಕೊಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಧ್ಯಕ್ಷರು ಇದಕ್ಕೆಲ್ಲ ಒಪ್ಪುತ್ತಾರೆ. ಆಡಳಿತ ಪಕ್ಷದವರು ಇದಕ್ಕೆ ಒಪ್ಪಬೇಕು. ಮಾನ್ಯ ಮಂತ್ರಿಯವರು ಒಪ್ಪಿದರೆ ಸಾಕು, ನಾಳೆ ಬೆಳಿಗ್ಗೆ ಡಿಸ್‌ಕಶನ್ ಮಾಡೋಣ.

ಛೇರ್‌ಮನ್: ಮಾನ್ಯ ಸಿಂಧ್ಯ ಅವರೆ, ತಾವು ಮತ್ತು ಮಾನ್ಯ ಮಂತ್ರಿಗಳು ಅಧ್ಯಕ್ಷರಿಗ ಮನವರಿಕೆ ಮಾಡಿಕೊಟ್ಟರೆ ನಾಳೆ ನಿಮಗೆ ಡಿಸ್‌ಕಶನ್‌ಗೆ ಅಲೋ ಮಾಡಿದರೂ ಮಾಡಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಚೇರ್‌ಮನ್‌ರವರೆ, ಅಜೆಂಡಾ ಇಶ್ಯೂ ಮಾಡುವಾಗ ಚರ್ಚೆ ಮುಗಿಯಿತು, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಎಂದು ಬಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾಳೆ ಬೆಳಿಗ್ಗೆ 2 ಗಂಟೆ ಕಾಲ ಡಿಸ್‌ಕಶನ್‌ಗೆ ಅವಕಾಶ ಕೊಡುತ್ತೇವೆಂದು ಒಪ್ಪಿಕೊಳ್ಳಲಿ.

ಛೇರ್‌ಮನ್: ನಾನು ಅದನ್ನು ಹೇಳುವುದಿಲ್ಲ. ಸಭೆಯನ್ನು ನಾಳೆಗೆ ಮುಂದೂಡೋಣ. ನೀವು ಅಧ್ಯಕ್ಷರನ್ನು ಭೇಟಿ ಆಗಿ. ಅವರು ನಾಳೆಯೇ ಅಜೆಂಡಾ ಪ್ರಕಾರ ಡಿಸ್‌ಕಷನ್‌ಗೆ ಅವಕಾಶ ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಛೇರ್‌ಮನ್‌ರವರೆ, ತಾವು ಅಪ್ಪಣೆ ಕೊಟ್ಟಮೇಲೆ ನಾನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಅಧ್ಯಕ್ಷರನ್ನು ಭೇಟಿ ಮಾಡಿದ್ದೆವು. ಅವರು ಏನು ಹೇಳಿದರೆಂದರೆ - ಸರ್ಕಾರದವರು ಒಪ್ಪಿದರೆ, ಮಾನ್ಯ ಮುಖ್ಯಮಂತ್ರಿಯವರು ಒಪ್ಪಿದರೆ ನನ್ನದೇನೂ ತಕರಾರು ಇಲ್ಲ ಎಂದು ಹೇಳಿದರು. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರದವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಇಲಾಖೆ ಸಚಿವರು): ಮಾನ್ಯ ಛೇರ್‌ಮನ್‌ರವರೆ, ನಾಳೆ ಡಿಸ್‌ಕಶನ್ ಮುಂದುವರಿಸೋಣ. ಆದಾದಮೇಲೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ.

ಛೇರ್‌ಮನ್: ಆಗಬಹುದು, ನಾಳೆ ಡಿಸ್‌ಕಷನ್ ಮುಂದುವರಿಸಿ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11-00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 51 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 25ನೇ ಏಪ್ರಿಲ್ 2000ರ ಮಂಗಳವಾರದಂದು ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)